8. ಪ್ರಕಟಣೆ

ಅಧ್ಯಕ್ಷರು : ಶ್ರೀ ಕೆ.ಜಿ. ಕುಮಾರ್ ಸ್ವಾಮಿ ಹಾಗೂ ಶ್ರೀ ಹೆಚ್.ಜೆ. ಲೋಕೇಶ್ ಅವರು ದಿನಾಂಕ 21.7.04 ರಂದು 1.27ರ ಸಮಯದಲ್ಲಿ ಪ್ರೇಕ್ಷಕರ ಗ್ಯಾಲರಿಯಿಂದ ಕರಪತ್ರವನ್ನು ಸದನದ ಒಳಗೆ ಎಸೆದು ಅಗೌರವ ತೋರಿಸಿರುವ ಪ್ರಯುಕ್ತ ಸದರಿಯವರುಗಳನ್ನು ಈ ದಿನ ಸದನ ಮುಗಿಯುವವರೆಗೆ ಬಂಧನದಲ್ಲಿಡಲು ಆದೇಶಿಸಲಾಗಿದೆ.

9. ನಿಯಮ 69ರ ಮೇಲಿನ ಚರ್ಚೆ (ಮುಂದುವರಿದುದ್ದು)

ವಿಷಯ : ಸಿ.ಇ.ಟಿ. ಬಿಕ್ಕಟ್ಟಿನ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ತಾವು ಕೂಡಲೆ ಎಲ್ಲರನ್ನೂ ಕರೆಯಿರಿ. ನಿಧಾನ ಮಾಡುವುದು ಬೇಡ. ಈಗಾಗಲೇ ರಾಜ್ಯದಲ್ಲಿ ಗೊಂದಲ ಸೃಷ್ಟಿಯಾಗಿದೆ. ಇವತ್ತು ವಿದ್ಯಾರ್ಥಿಗಳು ಬೀದಿಗೆ ಬಂದಿದ್ದಾರೆ. ಅವರ ಭವಿಷ್ಯದ ಬಗ್ಗೆ ಅತ್ಯಂತ ಕಳಕಳಿ ಇರತಕ್ಕಂಥ ನಾವೆಲ್ಲರೂ ಕುಳಿತು ತೀರ್ಮಾನಕ್ಕೆ ಬರಬೇಕು.

ಸಭಾಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್ ರವರೆ, ಮಾನ್ಯ ಮುಖ್ಯಮಂತ್ರಿಗಳು ಏನೋ ಮಾತನಾಡುತ್ತಾರೆ.

† **ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)** : ಮಾನ್ಯ ಅಧ್ಯಕ್ಷರೆ, ಈಗ ತಾವು ನಿಲುವಳಿ ಸೂಚನೆ ತಂದಿದ್ದೀರಿ. ಇದು ರಾಜ್ಯದ ಜನತೆಗೆ ಮತ್ತು ವಿಶೇಷವಾಗಿ ಯುವಕರಿಗೆ ವಿದ್ಯಾರ್ಥಿಗಳಿಗೆ ಸಾಕಷ್ಟು ಕಳವಳ ಇದೆ. ಇವತ್ತು ವಿರೋಧ ಪಕ್ಷದ ನಾಯಕರು, ಮಾನ್ಯ ವಿಶ್ವೇಶ್ವರ ಹೆಗಡೆ ಹಾಗೂ ಮಾನ್ಯ ಮಾಧುಸ್ವಾಮಿಯವರು, ಈಗ ಮಾನ್ಯ ವಾಟಾಳ್ ನಾಗರಾಜ್‌ರವರು ಎಲ್ಲಾ ಮಾತನಾಡುತ್ತಿದ್ದೀರಿ. ಒಂದು ವಿಚಾರವೇನೆಂದರೆ there is no time to all. ನಾವು ಏನು ಮಾಡಿದ್ದೇವೆ ಎಂದರೆ ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮೂಲಕ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮತ್ತು ಸದನದ ಎಲ್ಲಾ ನಾಯಕರಿಗೆ ಒಂದು ವಿನಂತಿ ಮಾಡುತ್ತಿದ್ದೇನೆ. ಇದರ ಬಗ್ಗೆ ಒಮ್ಮತದ ನಿರ್ಣಯಕ್ಕೆ ಬರಬೇಕು. ಸರ್ಕಾರ ಯಾವರೀತಿಯಾಗಿ ಹೋಗಬೇಕಾಗಿದೆ ಎನ್ನುವಂತಹ ರೀತಿಯಲ್ಲಿ ಇನ್ನು ನಮಗೆ ಯಾವುದೇ ಪ್ರೊ ಮ್ಯಾನೇಜ್‌ಮೆಂಟ್ ತರಹ ಇಲ್ಲ. ಡಾ: ಮಾಲಕರೆಡ್ಡಿಯವರು ಹಿಂದಿನ ಸರ್ಕಾರದಲ್ಲಿ ಅವರು ವೈದ್ಯಕೀಯ ಶಿಕ್ಷಣದ ಮಂತ್ರಿಯಾಗಿದ್ದರು. ಅವರ ನೇತೃತ್ವದಲ್ಲಿ ಒಂದು ಉಪಸಮಿತಿ ಮಾಡಿದ್ದರು. ಆ ಉಪಸಮಿತಿ 75:25ರ ಬಗ್ಗೆ ಏನು ಶಿಫಾರಸ್ಸು ಮಾಡಿದೆ, ಪ್ರಸ್ತುತ ಸರ್ಕಾರ ಅದಕ್ಕೆ ಒತ್ತು ಕೊಟ್ಟಿದ್ದೇವೆ. ಫೀಸ್ ವಿಷಯದಲ್ಲಿ ಕೂಡ ಸಂಪುಟದ ಸಭೆಯಲ್ಲಿ ಇವತ್ತು ಗ್ರೂಪ್–ಎ, ಎಸ್‌ಸಿ:ಎಸ್‌ಟಿ ಹಾಗೂ ಮೆರಿಟೋರಿಯಲ್ಸ್ ಸ್ಟೂಡೆಂಟ್ಸ್ ಏನಿದ್ದಾರೆ ಅವರಿಗೆ ಬಹಳಷ್ಟು ತೊಂದರೆಯಾಗುತ್ತದೆ. ಅದರ ಬಗ್ಗೆ ಕೂಡ ಆ ಫೀಸ್ ಭರಿಸತಕ್ಕಂಥ ವಿಚಾರದಲ್ಲಿ ಕೂಡ ಕ್ರಮ ತೆಗೆದುಕೊಳ್ಳಬೇಕೆನ್ನುವ ವಿಚಾರದಲ್ಲಿ ಆರ್ಥಿಕ ಇಲಾಖೆಗೆ ಕೂಡ ಎಷ್ಟು ಭಾರವಾಗಬಹುದು ಎನ್ನುವ ರೀತಿಯಲ್ಲಿ ವರ್ಕ್‌ಔಟ್ ಮಾಡುವುದಕ್ಕೆ ಹೇಳಿದ್ದೇನೆ. 75:25 ರ ಮೇಲೆ ಎಲ್ಲಿ ಕೂಡ ಯಾವ ಸಮಯದಲ್ಲಿ ಎಡವಿಲ್ಲ. ಆದರೂ ಕೂಡ ನಾವು ಎಲ್ಲಾ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರನ್ನು ಕರೆಸಿ ಮಾತನಾಡಿದ್ದೇವೆ. ಅದು ವಿಫಲವಾಗಿ, ಸುಪ್ರೀಂಕೋರ್ಟ್ ತೀರ್ಪು ಬರಲಿ ಎಂದು ಹೇಳಿದರು. ಸುಪ್ರೀಂ ಕೋರ್ಟ್‌ನ ತೀರ್ಮಾನಕ್ಕೆ ನಾವೇನೂ ಹೇಳುವುದಕ್ಕಾಗುವುದಿಲ್ಲ. ಆದರೂ ಕೂಡ ನಮ್ಮ ಹಿರಿಯ ಸದಸ್ಯರಾದಂತಹ ರಮೇಶ್‌ಕುಮಾರ್ ಅವರು ಚರ್ಚೆ ಮಾಡಬಹುದು ಎನ್ನುವ ಮಾತನ್ನು

ಹೇಳಿದ್ದಾರೆ. ಆದರೆ ನಾವು ಯಾವತ್ತು ಕೂಡ ತೀರ್ಮಾನಕ್ಕೆ ಬರುವುದಕ್ಕಾಗುವುದಿಲ್ಲ. ಸುಪ್ರೀಂಕೋರ್ಟ್‌ನ ತೀರ್ಮಾನದ ಪ್ರಕಾರ 50:50 ಏನಿದೆ, ಮತ್ತೆ ನಾನು ಮ್ಯಾನೇಜ್‌ಮೆಂಟ್‌ನ್ನು ಕರೆಸಿ ಆ ವಿಚಾರವಾಗಿ ಮಾತನಾಡಿ ಹೋದವರ್ಷ ಕೂಡ 75:25 ರ ಅನುಪಾತದಲ್ಲಿ ತೀರ್ಮಾನವಾಗಿತ್ತು. ಕೊನೆಗೆ ತಾವೆಲ್ಲರೂ ಒಪ್ಪಿದಿರಿ. ಈ ಸಲ ಕೂಡ ಅದೇ ರೀತಿ ಸಹಕಾರ ಮಾಡಬೇಕು, ಕೌನ್ಸಿಲಿಂಗ್ ಆಗಲೇಬೇಕು. ಬಡ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಇದು ನಮಗೆ ಶೋಭೆ ತರತಕ್ಕಂಥಾದ್ದಲ್ಲ. ನೀವು ಯಾವಾಗಲೂ ಕೂಡ ಶಿಕ್ಷಣ ಸಂಸ್ಥೆಗಳನ್ನು ನಡೆಸಿ ಸಾಕಷ್ಟು ತಮಗೆ ಅನುಭವ ಇದೆ. ಈ ಬಾರಿ ಒಂದು ಸಲ ರಿಯಾಯಿತಿ ಮಾಡಿದರೆ ಒಳ್ಳೆಯ ಹೆಸರು ಬರುತ್ತದೆ ಎಂದು ಮನವಿ ಮಾಡಿದೆ. ಅದಾದಮೇಲೆ ಮೆಡಿಕಲ್ ಹಾಗೂ ಡೆಂಟಲ್‌ಗೆ ಒಂದು ಉಪಸಮಿತಿ ಮತ್ತು ಎಂಜಿನಿಯರಿಂಗ್‌ಗೂ ಒಂದು ಉಪಸಮಿತಿ ಮಾಡಿ ಪ್ರಿನ್ಸಿಪಲ್ ಸೆಕ್ರೆಟರಿ ಆಫ್ ಎಜುಕೇಷನ್ ಮತ್ತು ಶ್ರೀ ಎಸ್.ವಿ. ರಂಗನಾಥ್, ಲಾ ಸೆಕ್ರೆಟರಿ ಮೂರು ಜನ ಅಲ್ಲಿ ನಿನ್ನೆ ಸುದೀರ್ಘವಾಗಿ ಚರ್ಚೆ ಮಾಡಿದ್ದಾರೆ. ಈಗಾಗಲೇ ಮುಂಜಾನೆ ನಿಲುವಳಿ ಸೂಚನೆ ಬಂದಂತಹ ಸಂದರ್ಭದಲ್ಲಿ ನಾನು ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿ ಇವತ್ತು 5.30 ಘಂಟೆಗೆ ನಮ್ಮ ಸಂಪುಟದ ಉಪಸಮಿತಿ ಸಭೆ ಡೆಪ್ಯೂಟಿ ಚೀಫ್ ಮಿನಿಸ್ಟರ್ ಅಧ್ಯಕ್ಷತೆಯಲ್ಲಿ ಮೀಟ್ ಆಗುತ್ತಿದೆ. ಇದಕ್ಕಿಂತ ಮುಂಚೆ ನಾನೇನು ಹೇಳುತ್ತಿದ್ದೇನೆ ಎಂದರೆ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಫ್ಲೋರ್ ಲೀಡರ್ಸ್ ಮತ್ತು ಇದಕ್ಕೆ ಹೆಚ್ಚಿನ ರೀತಿಯಲ್ಲಿ ಕಾಳಜಿ ಮಾಡತಕ್ಕಂಥ ಹಿರಿಯ ಶಾಸಕರ ಸಭೆ ಕರೆಯುತ್ತೇನೆ. ಆ ಸಭೆಯಲ್ಲಿ ವಿಚಾರ ಮಾಡೋಣ. ಮತ್ತು ಸೆಲೆಕ್ಟೆಡ್ ಮ್ಯಾನೇಜ್‌ಮೆಂಟ್‌ನವರು ಕೂಡ ತಮ್ಮ ಮುಂದೆ ವಿಚಾರ ವಿನಿಮಯ ಮಾಡತಕ್ಕಂಥ ರೀತಿಯಲ್ಲಿ ಮಾಡಬೇಕೆಂದು ಇದೆ. ಮೊನ್ನೆ ನಾನು ಡೆಲ್ಲಿಯಲ್ಲಿ ಇದ್ದಾಗ ಕೇಂದ್ರದ ಮಾನ್ಯ ಅರ್ಜುನ್ ಸಿಂಗ್ ಅವರನ್ನು ಭೇಟಿಯಾಗಿ ಸೆಂಟ್ರಲ್ ಲೆಜಿಸ್ಲೇಷನ್ ಬೇಕೇ ಬೇಕು, ಕೇಂದ್ರದ ಒಂದು ನೀತಿ ಇಡೀ ರಾಷ್ಟ್ರಕ್ಕೆ ಆಗಬೇಕೆಂದು ಮನವಿ ಮಾಡಿಕೊಂಡಿದ್ದೇನೆ. ಅದಕ್ಕೆ ಕೂಡ ಡೆಲಿಗೇಷನ್ ರೂಪದಲ್ಲಿ ಹೋಗಿ ಭೇಟಿ ಆಗುತ್ತಿದ್ದೇವೆ. ನಾವೆಲ್ಲಾ ರೀತಿಯ ಕ್ರಮವನ್ನು ತೆಗೆಕೊಂಡಿದ್ದೇವೆ. ಇವತ್ತು ನಾವು ಸರ್ಕಾರ ಇಂತಹ ತೊಂದರೆಗೆ ಗಮನ ಕೊಡುತ್ತದೆ ಎನ್ನುವ ಅಭಿಪ್ರಾಯ ತಮ್ಮಲ್ಲಿ ಅಲ್ಲ, ಎಲ್ಲರೂ ಒಟ್ಟಾಗಿ ಈ ರಾಜ್ಯದ ಜನತೆಗೆ ಇಂತಹ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಒಂದು ಒಮ್ಮತದ ನಿರ್ಣಯ ಈ ಸದನ ತೆಗೆದುಕೊಂಡಿದೆ ಎನ್ನುವಂತಹ ಅಭಿಪ್ರಾಯವನ್ನು ಮೂಡಿಸತಕ್ಕಂಥ ರೀತಿಯಲ್ಲಿ ನಾವು ಎಲ್ಲರೂ ಕೂಡ ಚರ್ಚೆಗೆ ಸಿದ್ಧವಾಗಿದ್ದೇವೆ. ಆ ಒಂದು ಹಿನ್ನೆಲೆಯಲ್ಲಿ ತಮ್ಮ ಸಲಹೆ ಸೂಚನೆಗಳು ಏನಿವೆ ಅವುಗಳನ್ನು ಕೊಟ್ಟರೆ ಒಳ್ಳೆಯದು. ನಾನು ತಮ್ಮ ಜೊತೆಯಲ್ಲಿ ಸಮಾಲೋಚನೆ ಮಾಡಿ ಮುಂದಿನ ಹೆಜ್ಜೆ ಇಡುತ್ತೇನೆ. ಮತ್ತು ಹೆಜ್ಜೆ ಇಡತಕ್ಕಂಥ ಕಾಲದಲ್ಲಿ ಸರ್ಕಾರ ಯಾರ ಬಗ್ಗೆ ಕೂಡ ಹೆದರತಕ್ಕಂಥ ಪ್ರಶ್ನೆ ಇಲ್ಲ. ಇವತ್ತು larger interest of the students ಯಾರು ಜನರಿದ್ದಾರೆ ಆ ಎಲ್ಲಾ ವರ್ಗದ ಜನರ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸರ್ಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ತಯಾರಾಗಿದೆ ಎನ್ನುವಂತಹ ಮಾತನ್ನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಈಗ ತಾವು ಉತ್ತರನವನೇ ಕೊಟ್ಟು ಬಿಟ್ಟಿರಿ. ಮುಗಿದೇ ಹೋಯಿತು. ಉತ್ತರನೆ ಕೊಟ್ಟು ಬಿಟ್ಟೆರಲ್ಲ ನೀವು, ಇನ್ನು ನಾವು ಸಲಹೆ ಏನು ಕೊಡುವುದು? ಹಾಗಾದರೆ ತೀರ್ಮಾನ ಆಗೇ ಹೋಯಿತಲ್ಲಾ. ನನಗೆ ಅನಿಸುತ್ತದೆ ಈಗ ಸರ್ಕಾರ ನಮ್ಮನ್ನು ಕರೆದು ಮಾತುಕತೆ ಆಡುವ ಬದಲು ನಾನು ನೇರವಾಗಿ ನಿಮಗೆ ಪ್ರಶ್ನೆ ಕೇಳುತ್ತೇನೆ. ಖಾಸಗಿ ಶಿಕ್ಷಣ ಸಂಸ್ಥೆಗಳನ್ನು

(†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತಿದೆ.)

ರಾಷ್ಟ್ರೀಕರಣ ಮಾಡುತ್ತೀರಾ? ಧೈರ್ಯವಾಗಿ ತಾವು ಅದನ್ನು ಹೇಳಿ. ಇದು ನಮ್ಮ ಸರ್ಕಾರದ ನೀತಿ. ಇನ್ನು ಏನು ನೀವು ಆ ಮ್ಯಾನೇಜ್‌ಮೆಂಟ್‌ನವರ ಸಭೆ ಕರೆಯುವುದು? ಪ್ರತಿದಿನ ಅವರನ್ನೇನು ನೀವು ಸಭೆ ಕರೆಯುವುದು, ಅವರಿಗೆ ನೀವು ಕೈಮುಗಿಯುವುದು. ಇದೇ ನಡೆಯುತ್ತಿದೆಯೇ ಹೊರತು.

ಶ್ರೀ ಎನ್. ಧರ್ಮಸಿಂಗ್ : ಎರಡು ಸಭೆಗಳನ್ನು ಅಷ್ಟೇ ಕರೆದಿರುವುದು.

ಶ್ರೀ ವಾಟಾಳ್ ನಾಗರಾಜ್ : ತಾವು ಅವರನ್ನು ಎರಡು ಬಾರಿ ಸಭೆಗೆ ಕರೆದರೂ, ಅವರು ನಿಮ್ಮ ಮಾತಿಗೆ ಬರಲಿಲ್ಲವೆಂದರೆ, ಇಲ್ಲಿ ಸರ್ಕಾರದ ನಿರ್ಧಾರ ಏನು? ಒಂದು ಘನ ಸರ್ಕಾರವನ್ನು ನೀವು ಇಟ್ಟುಕೊಂಡು, ನೀವು ಅವರನ್ನೆಲ್ಲಾ ಕರೆದು ಒಂದು ತೀರ್ಮಾನಕ್ಕೆ ಬರಲಿಲ್ಲವೆಂದರೆ ಏನು?

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ಒಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಈಗ ಸನ್ಮಾನ್ಯ ಸಭಾನಾಯಕರು ತಮ್ಮ ಮನಸ್ಸಿನೊಳಗಿದ್ದಂತಹ ಎಲ್ಲಾ ವಿಚಾರಗಳನ್ನು ಬಿಚ್ಚಿ ಸಭೆಯ ಮುಂದಿಟ್ಟಿದ್ದಾರೆ. ಎಲ್ಲಾ ಫ್ಲೋರ್ ಲೀಡರ್ಸ್ ಅನ್ನು, ಎಲ್ಲಾ ವಿರೋಧಪಕ್ಷದ ಮುಖಂಡರುಗಳನ್ನು, ಮತ್ತು ಬೇರೆ ಕೆಲವು ಶಾಸಕರುಗಳನ್ನು ಸಭೆಗೆ ಕರೆಸುತ್ತೇವೆಂದು ಹೇಳಿದ್ದಾರೆ. ಅವರನ್ನು ಪ್ರತ್ಯೇಕಿಸಿ ಸರ್ಕಾರದ ನಿಲುವು ತೆಗೆದುಕೊಳ್ಳಿ ಎಂದು ಹೇಳುವ ಬದಲು, ನಾವು ಇಡೀ ಸದನವೂ ಒಟ್ಟಾಗಿ ಅಲ್ಲಿ ಕುಳಿತು ಮಾತನಾಡಿ, ಅವರನ್ನು ತಯಾರು ಮಾಡಿ, ಇಡೀ ಸದನವೂ ಅವರ ಹಿಂದೆ ನಿಂತು, ಅವರು ಅಂತಹ ನಿರ್ಣಯಕ್ಕೆ ಬರುವಂತಹ ವಾತಾವರಣವನ್ನು ನಾವು ಸೃಷ್ಟಿ ಮಾಡೋಣ. ಇವರನ್ನು ಇಕ್ಕಟ್ಟಿಗೆ ಸಿಕ್ಕಿಸಿ, ನಾವು ಇಡೀ ಸದನದ ಬೆಂಬಲವನ್ನು ಕೊಟ್ಟು, ನಾವು ನಿಮ್ಮ ಹಿಂದೆ ಇದ್ದೇವೆ. ಈ ಕೆಲಸವನ್ನು ನೀವು ಮಾಡಿ ಎಂದು ಹೇಳೋಣ. ಅವರನ್ನು ಪ್ರತ್ಯೇಕಿಸುವುದು ಬೇಡ.

ಶ್ರೀ ವಾಟಾಳ್ ನಾಗರಾಜ್ : ಸರಿ, ನೀವು ರಾಷ್ಟ್ರೀಕರಣವನ್ನು ಸಮಗ್ರವಾಗಿ ಮಾಡುವುದಾದರೆ, ನಾವು ಪಕ್ಷಾತೀತವಾಗಿ ಸರ್ಕಾರಕ್ಕೆ ಸರ್ವಾನುಮತದಿಂದ ಬೆಂಬಲವನ್ನು ಕೊಡುತ್ತೇವೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ವಾಟಾಳ್ ನಾಗರಾಜ್‌ರವರೇ ಇದು ಮಾಡುವುದಾದರೆ ಎಂದಲ್ಲಾ, ಮಾಡುವಂತಹ ಹಂತಕ್ಕೆ ನಾವು ಎಲ್ಲರೂ ತೆಗೆದುಕೊಂಡು ಹೋಗುವುದಕ್ಕೆ ಸಿದ್ಧರಾಗೋಣ.

ಶ್ರೀ ವಾಟಾಳ್ ನಾಗರಾಜ್ : ಕರೆಕ್ಟ್, ರಾಷ್ಟ್ರೀಕರಣ ಮಾಡುವುದಕ್ಕೆ ಸಿದ್ಧರಿದ್ದೇವೆ, ಇದನ್ನು ಮಾಡಲು ಸರ್ಕಾರ ಧೈರ್ಯವಾಗಿ ಹೆಜ್ಜೆಯನ್ನು ಇಡಲಿ, ನೋಡೋಣ. ಇದರಲ್ಲಿ, ನೀವು ಇತಿಹಾಸದಲ್ಲಿ ಹೋಗುತ್ತೀರೆಂದು ನಾನು ಹೇಳುತ್ತೇನೆ, ಕರ್ನಾಟಕದ ಚರಿತ್ರೆಯಲ್ಲಿ ನೀವು ಹೋಗುತ್ತೀರಿ, ನೀವು ಧೈರ್ಯವಾಗಿ ನಿಲ್ಲಿ, ನಾವೆಲ್ಲರೂ ಒಟ್ಟಾಗಿ ಸೇರೋಣ, ಏನಾಗುತ್ತದೆಂದು ನೋಡೋಣ. ನಾವು ನಿಮ್ಮ ಹಿಂದೆ ಇರುತ್ತೇವೆ, ನಿಮ್ಮ ಜೊತೆಯಲ್ಲಿ ಇರುತ್ತೇವೆ. ಯಾವ ಭೇದ ಭಾವವಿಲ್ಲದೇ, ಸರ್ವಪಕ್ಷಗಳು, ಇದರಲ್ಲಿ ಯಾವುದೇ ಹಿಂದೆ ಮುಂದೆ ಇಲ್ಲದೇ, ಒಂದು ತೀರ್ಮಾನಕ್ಕೆ ಬಂದಿದ್ದೇವೆಂಬ ಸಲಹೆಯನ್ನು ನಾನು ತಮಗೆ ಕೊಡುತ್ತಿದ್ದೇನೆ.

† **ಶ್ರೀ ಬಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ)** : ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ, ಈಗ ಇಲ್ಲಿ ಒಂದು ಪ್ರಶ್ನೆ ಏನು ಬರುತ್ತಿದೆಯೆಂದರೆ ಎಲ್ಲಾ ವಿಚಾರಗಳು ಇಲ್ಲಿ ಚರ್ಚೆಯಾಗಿದೆ, ಮತ್ತೆ ಅದೇ ವಿಷಯಗಳನ್ನು ಮಾತನಾಡುವುದರಲ್ಲಿ ಅರ್ಥವಿಲ್ಲ. ಇಲ್ಲಿ ಪ್ರಮುಖವಾಗಿ ಚರ್ಚೆಯಾಗುತ್ತಿರುವಂತಹ ವಿಚಾರವೆಂದರೆ, ಸುಪ್ರೀಂಕೋರ್ಟಿನ ತೀರ್ಪಿನ ಬಗ್ಗೆ ನಾವು ಯಾರೂ ಇಲ್ಲಿ ಮಾತನಾಡಬಾರದೆಂದು, ಆದರೆ ಸುಪ್ರೀಂಕೋರ್ಟಿನ ಎಲ್ಲಾ ಡೈರೆಕ್ಷನ್ಸ್‌ಗಳನ್ನು, ಪ್ರತಿ ದಿವಸ ವಯಲೇಟ್ ಮಾಡುತ್ತಿರುವಂಥಾದ್ದು ಮ್ಯಾನೇಜ್‌ಮೆಂಟ್ ಅವರಿಗೆ ಏನೂ ಶಿಕ್ಷೆ ಇಲ್ಲ, ಅದು ಸಬ್‌ಜುಡೀಸ್ ಅಲ್ಲ, ಅವರನ್ನು ಯಾರೂ ಕೇಳುವವರು ಇಲ್ಲ. ಇಲ್ಲಿ ನಾನು ಒಂದು ವಿಚಾರವನ್ನು ಪ್ರಸ್ತಾಪ ಮಾಡುವುದೇನೆಂದರೆ, 2002ನೇ ಅಕ್ಟೋಬರ್ 31ರಂದು, ಸುಪ್ರೀಂ ಕೋರ್ಟ್ ಕೊಟ್ಟಿರುವಂತಹ ತೀರ್ಪಿನಲ್ಲಿ, ಒಂದು ಬಹಳ ಪ್ರಮುಖವಾದಂತಹ ಅಂಶವನ್ನು ಇಲ್ಲಿ ಕೊಟ್ಟಿದೆ, ಅದು ಏನೆಂದರೆ ಶಿಕ್ಷಣವೆಂಬುದು ಮಾರುಕಟ್ಟೆಯ ವಸ್ತುವೂ ಅಲ್ಲ. ಹಾಗೂ ವಾಣಿಜ್ಯ ಚಟುವಟಿಕೆಯೂ ಅಲ್ಲ. ಆದರೆ ಇದಕ್ಕೆ ವಿರುದ್ಧವಾಗಿ ಕಾಮೆಡ್(ಕೆ) ಅಧ್ಯಕ್ಷರಾಗಿರುವಂತಹ ಮಾನ್ಯ ಜಾಲಪ್ಪನವರು ನೇರವಾಗಿ ಸವಾಲನ್ನು ಹಾಕುತ್ತಾರೆ. ನಿಮ್ಮ ಸರ್ಕಾರಕ್ಕೂ ಮತ್ತು ಸುಪ್ರೀಂಕೋರ್ಟ್‌ನ ತೀರ್ಮಾನಕ್ಕೂ, ನೇರವಾಗಿ ಸವಾಲನ್ನು ಹಾಕುತ್ತಾರೆ, ಸರ್ಕಾರ ಕಾಲೇಜುಗಳನ್ನು ನಡೆಸಲಿ ನೋಡೋಣ, ಅವರಿಗೆ ತಾಕತ್ತು ಇದ್ದರೆ, ನಡೆಸಲಿ. ಇವರಿಗೆ ತಾಕತ್ತು ಇದ್ದರೆ ನಡೆಸಲಿ, ನಾವು ಸಂಸ್ಥೆಗಳನ್ನು ಮುಚ್ಚುತ್ತೇವೆಂದು, ಹತ್ತು ಬಾರಿ ಕಾಮೆಡ್-(ಕೆ) ಅಧ್ಯಕ್ಷರಾಗಿದ್ದಂತಹ ಮಾನ್ಯ ಜಾಲಪ್ಪನವರು ಸವಾಲನ್ನು ಹಾಕುತ್ತಾರೆ. ಆಗ ಇವರಿಗೆ ಸುಪ್ರೀಂಕೋರ್ಟ್ ತೀರ್ಮಾನ ಇವರಿಗೆ ಅಡ್ಡಬರಲಿಲ್ಲ, ಆಗ ಇವರಿಗೆ ಸಬ್ ಜ್ಯುಡೀಸ್ ಅಡ್ಡಬರಲಿಲ್ಲ. ಅವರನ್ನು ಯಾರೂ ಶಿಕ್ಷಗೆ ಒಳಪಡಿಸಲಿಲ್ಲ, ಇಲ್ಲಿ ಸದನದಲ್ಲಿ ಲಕ್ಷಾಂತರ ಜನ ಕರ್ನಾಟಕ ರಾಜ್ಯದ ಬಡ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಅನ್ಯಾಯವಾಗಿದೆಯೆಂದು, ನಾವು ಸುಪ್ರೀಂ ಕೋರ್ಟಿನ ತೀರ್ಪಿನ ಬಗ್ಗೆ ಮಾತನಾಡಿದರೆ, ಇಲ್ಲಿ ನಮಗೆ ಶಿಕ್ಷೆಯಾಗುತ್ತದೆ. ಅದರ ಬಗ್ಗೆ ಮಾತನಾಡಬಾರದೆಂದು ನಮ್ಮನ್ನೆಲ್ಲಾ ಹೆದರಿಸುತ್ತೀರಾ: ನಾನು ಸ್ಪಷ್ಟವಾಗಿ ಹೇಳುವುದೇನೆಂದರೆ, ಅವರು ಶಿಕ್ಷೆಗೆ ನಮ್ಮನ್ನು ಒಳಪಡಿಸಿದ್ದರೂ, ನಾವು ಜೈಲಿಗೆ ಹೋಗುವುದಕ್ಕೆ ತಯಾರಿದ್ದೇವೆ. ಅದರಲ್ಲಿ ನಾವು ಹೆದರುವಂತಹ ಪ್ರಶ್ನೆಯಿಲ್ಲ. ಏಕೆಂದರೆ ನ್ಯಾಯಾಂಗ ಇದೇ ವಿಚಾರದಲ್ಲಿ, ಎಂದಾದರೂ ಒಂದೇ ಒಂದು ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯವಾಗಲಿ, ಇಲ್ಲಿರುವ ನಮ್ಮ ಉಚ್ಚ ನ್ಯಾಯಾಲಯವಾಗಲೀ, ಒಂದೇ ತೀರ್ಮಾನಕ್ಕೆ ಅವರು ಕಟ್ಟು ಬಿದ್ದಿಲ್ಲ. ಅವರು ಎಷ್ಟು ಬಾರಿ ಜಡ್ಜ್‌ಮೆಂಟ್ ಕೊಟ್ಟಿದ್ದಾರೆಂದರೆ, 1987ರಲ್ಲಿ ಒಂದು ಜಡ್ಜ್‌ಮೆಂಟ್, 1989ರಲ್ಲಿ ಒಂದು ಜಡ್ಜ್‌ಮೆಂಟ್, 2001ರಲ್ಲಿ ಒಂದು ಜಡ್ಜ್‌ಮೆಂಟ್, 2002ರಲ್ಲಿ ಒಂದು ಜಡ್ಜ್‌ಮೆಂಟ್, ಮತ್ತೆ 2003ರಲ್ಲಿ ಒಂದು ಜಡ್ಜ್‌ಮೆಂಟ್, 2004ರಲ್ಲಿ ಒಂದು ಜಡ್ಜ್‌ಮೆಂಟ್, ಈ ಎಲ್ಲಾ ಜಡ್ಜ್‌ಮೆಂಟ್‌ಗಳನ್ನು ನ್ಯಾಯಾಂಗವೇ ಕೊಟ್ಟಿರುವಂಥಾದ್ದು. ಈ ಜಡ್ಜ್‌ಮೆಂಟ್‌ಗಳಲ್ಲಿ ಯಾವುದೇ ಸಾಮರಸ್ಯವಿಲ್ಲ, ಇದೇ ಕೋರ್ಟ್‌ಗಳು 75–25ರಂತೆ ತೀರ್ಮಾನವನ್ನು ಕೊಟ್ಟಿದೆ, ಇನ್ನೊಂದು ಸಲ 50–50ರಂತೆ ತೀರ್ಮಾನವನ್ನು ಕೊಟ್ಟಿದೆ, ಮತ್ತೊಂದು ಸಲ ಕ್ಯಾಪಿಟೇಷನ್ ಶುಲ್ಕ ರದ್ದು ಎಂದು ಆಗಿದೆ. ಇಷ್ಟೆಲ್ಲಾ ನಡೆಯುತ್ತಿದ್ದರೂ ಸಹಿತ ಖಾಸಗೀ ಶಿಕ್ಷಣ ಸಂಸ್ಥೆಗಳ ಬಗ್ಗೆ ನಮ್ಮ ರಾಜ್ಯಸರ್ಕಾರ, ಎಂದೂ ಸರ್ಕಾರವಾಗಿ ವರ್ತಿಸಲೇ ಇಲ್ಲ. ಅವರ ಹತ್ತಿರ ಭಿಕ್ಷೆ ಬೇಡಿದ ಹಾಗೆ, ಅವರಿಗೆ ಕೈ ಮುಗಿದು, ಅವರನ್ನು ಸಭೆಗೆ ಕರೆದು, ನಿಮ್ಮೊಡನೆ ಚರ್ಚೆ ಮಾಡಬೇಕು ಬನ್ನಿ ಎಂದು, ಅದಕ್ಕೆ ಅವರು ಏನು ಹೇಳುತ್ತಾರೆಂದರೆ

ನಾವು ಹೇಳಿದಾಗ ನೀವು ಬನ್ನಿ ಎಂದು ಹೇಳುತ್ತಾರೆ. ಅವರು ನೀವು ಕರೆದಾಗ ಯಾವತ್ತೂ ಬಂದಿಲ್ಲ. ಅವರು ಯಾವ ಜಾಗವನ್ನು ಫಿಕ್ಸ್ ಮಾಡುತ್ತಾರೆ. ಅಲ್ಲಿಗೆ ನೀವು ಹೋಗಿ ಮಾತನಾಡಬೇಕೆಂದರೆ, ಇದು ಸರ್ಕಾರನಾ? ನಾನು ಇದನ್ನು ಹಲವಾರು ವರ್ಷಗಳಿಂದ ಗಮನಿಸುತ್ತಿದ್ದೇನೆ. ನೀವು ಯಾವತ್ತೂ ಸಹಿತ ಸರ್ಕಾರವಾಗಿ ವರ್ತಿಸಲೇ ಇಲ್ಲ. ಇವತ್ತು ಈ ಖಾಸಗಿ ಶಿಕ್ಷಣ ಸಂಸ್ಥೆಯವರು ಯಾವ ರೀತಿಯಲ್ಲಿ ಬೆಳೆದುಬಿಟ್ಟಿದ್ದಾರೆಂದರೆ, ನಿಮ್ಮ ಸರ್ಕಾರಕ್ಕೆ ಅವರು ಸವಾಲನ್ನು ಹಾಕುತ್ತಾರೆ. ಆ ಸವಾಲನ್ನು ಸ್ವೀಕಾರ ಮಾಡುತ್ತಿಲ್ಲ, ಅದರ ಬದಲಿಗೆ ಆ ಸವಾಲಿಗೆ ತಲೆ ಬಾಗಿಸುತ್ತಿದ್ದೀರಿ. ಏಕೆ ಗೊತ್ತೇನು? ಇದರಲ್ಲಿ ನಿಮ್ಮ ಪಾಪ ಇದೆ. ನಾನು ಪಕ್ಷದ ಬಗ್ಗೆ ಹೇಳುವುದಿಲ್ಲ, ನಿಮ್ಮ ಸರ್ಕಾರ ನಡೆಸುತ್ತಿರುವಂತಹ ಪಕ್ಷದಲ್ಲಿರತಕ್ಕಂತಹ, ಜನರೇ ಅತೀ ಹೆಚ್ಚಿನವರು ಖಾಸಗಿ ಕಾಲೇಜುಗಳನ್ನು ನಡೆಸುತ್ತಿರುವವರು. ಇಲ್ಲಿ ಕಾಮೆಡ್-ಕೆಗೂ, ಸರ್ಕಾರಕ್ಕೂ ಏನು ವ್ಯತ್ಯಾಸವಿದೆಯೆಂದು ನೀವು ಹೇಳಿ, ಉತ್ತರ ಕೊಡಿ, ಅವರು ಯಾರು? ನೀವು ಯಾರು? ಇದಕ್ಕೆ ನೀವು ಹೇಳಬೇಕು, ನೀವು, ಅವರು ಇಬ್ಬರೂ ಸೇರಿಕೊಂಡು.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಶ್ರೀರಾಮರೆಡ್ಡಿಯವರೇ, ಇವತ್ತು ಒಂದು ಅಪರೂಪದ ಘಟ್ಟದಲ್ಲಿ ಈ ರಾಜ್ಯದ ರಾಜಕಾರಣವಿದೆ. ಮಾನ್ಯ ದೇವರಾಜ ಅರಸರಿಗಿಂತಲೂ ಅಲ್ಪ ಸಂಖ್ಯಾತರಾಗಿರುವವರು ಮಾನ್ಯ ಧರ್ಮಸಿಂಗ್‌ರವರು, ಮುಖ್ಯಮಂತ್ರಿಗಳಾಗಿದ್ದಾರೆ. ಮಾನ್ಯ ಸಿದ್ಧರಾಮಯ್ಯನವರು, ಅತ್ಯಂತ ಹಿಂದುಳಿದ ವರ್ಗಕ್ಕೆ ಸೇರಿದವರಾಗಿದ್ದು, ಅವರು ರಾಜ್ಯದ ಉಪ ಮುಖ್ಯಮಂತ್ರಿಗಳಾಗಿದ್ದಾರೆ. ತಾವು ಪರಿಶಿಷ್ಟ ಜಾತಿಗೆ ಸೇರಿರುವವರು ಶಿಕ್ಷಣ ಸಚಿವರಾಗಿದ್ದೀರಿ. ಇದು ನಮಗೆ ಹೆಮ್ಮೆಯೆನಿಸುತ್ತದೆ, ನಮ್ಮ ರಾಜ್ಯದಲ್ಲಿ ಭೂ ಸುಧಾರಣೆಯನ್ನು ತರಬೇಕೆಂದರೆ ಏನು ಕಡಿಮೆ ರೆಸಿಸ್ಟನ್ಸ್ ಇತ್ತಾ? ಭೂ ಸುಧಾರಣೆಯನ್ನು ಜಾರಿಗೆ ತರಬೇಕಾದರೆ ಎಷ್ಟು ಜನರನ್ನು ವಿರೋಧ ಮಾಡಿಕೊಂಡೆವು. ಅವತ್ತು ಮಾನ್ಯ ಧರ್ಮಸಿಂಗ್‌ರವರು, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಪ್ರಥಮ ಬಾರಿಗೆ ವಿಧಾನ ಸಭೆಗೆ ಬಂದಂಥವರು. ಅವರು ಎಷ್ಟು ಆಸಕ್ತಿಯನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ವಹಿಸಿದ್ದರೆಂಬುದು ನಮಗೆ ಗೊತ್ತು. ಅಂತಹ ಭೂ ಸ್ವಾಮಿಗಳನ್ನು ಎದುರು ಹಾಕಿಕೊಂಡು, ಇವರು ಇಡೀ ಸರ್ಕಾರವನ್ನೆ ಅಲುಗಾಡಿಸುತ್ತಾರೆಂದು, ಅದಕ್ಕೆ ಹೆದರದೆ, ಅಂತಹ ಒಂದು ಕ್ರಾಂತಿಕಾರಕ ನಿರ್ಣಯವನ್ನು ತೆಗೆದುಕೊಳ್ಳುವಂಥಾದಕ್ಕೆ ಹೆಜ್ಜೆ ಹಾಕಿದಂಥವರು. ಈಗ ಕೈ ಹಿಡಿಯುವಷ್ಟು ಜನ, ಮೂರು ಕಾನೂ ಸಂಪಾದನೆ ಮಾಡಿಕೊಂಡಿದ್ದಾರೆ. ಅವರಿವರನ್ನು ಹೆದರಿಸಿಕೊಂಡಿರುವವರಿಗೆ ಬಗ್ಗಬೇಕಾ? ಬಲಿ ಹಾಕುವುದಕ್ಕೆ ನೀವು ತಯಾರಾಗಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಇಂತಹ ಸಂದರ್ಭದಲ್ಲಿ ಇವತ್ತು ಅವರು ನಿಮಗೆ ಸವಾಲು ಹಾಕುತ್ತಿದ್ದಾರೆ. ಇವತ್ತು ನಾನು ಸರ್ಕಾರವನ್ನು ಕೇಳುವಂಥಾದ್ದು, ಇವರು ಸರ್ಕಾರದ ರೀತಿಯಲ್ಲಿ ವರ್ತನೆ ಮಾಡಬೇಕು. ನನಗೆ ನೋವಾಗುತ್ತದೆ, ಮಾನ್ಯ ರಮೇಶ್ ಕುಮಾರ್‌ರವರು ಹೇಳಿದಂತಹ ವಿಚಾರವನ್ನು ನಾನು ಒಪ್ಪುತ್ತೇನೆ. ಇವರು ಯಾರ ಹೆಸರುಗಳಲ್ಲಿ ಕಾಲೇಜುಗಳನ್ನು ಪ್ರಾರಂಬ ಮಾಡಿದ್ದು? ಹಿಂದುಳಿದವರ ಹೆಸರಿನಲ್ಲಿ ಒಬ್ಬರು, ಮಾನ್ಯ ದೇವರಾಜ ಅರಸುವರು. ಅವರ ಹೆಸರುಗಳಿಗೆ ಏಕೆ ಅವಮಾನ ಮಾಡುತ್ತೀರಿ? ಡಾ: ಬಿ.ಆರ್. ಅಂಬೇಡ್ಕರ್‌ರವರ ಹೆಸರಿನಲ್ಲಿ ಒಂದು, ಮಾನ್ಯ ಕೆಂಪೇಗೌಡ ಹೆಸರಿನಲ್ಲಿ ಒಂದು, ಜಮಾತೆ ಇಸ್ಲಾಂರವರ ಹೆಸರಿನಲ್ಲಿ ಒಂದು ಕಾಲೇಜು. ಈ ರೀತಿ ಮಾಡಿ ಆ ನಾಯಕರಿಗೆಲ್ಲಾ ಏಕೆ ಅವಮಾನ ಮಾಡುತ್ತೀರಿ? ಅವರ

ಹೆಸರುಗಳನ್ನು ಏಕೆ ಇಟ್ಟುಕೊಳ್ಳುತ್ತೀರಿ? ಏಕೆ ಅವರ ಮುಖಕ್ಕೆ ಮಸಿಯನ್ನು ಬಳಿಯುತ್ತೀರಿ? ನಿಜವಾದಂತಹ ಹಿಂದುಳಿದಂಥವರು, ಅಲ್ಪಸಂಖ್ಯಾತರನ್ನು, ಮುಂದಕ್ಕೆ ತರಬೇಕೆಂಬ ಉದ್ದೇಶವಿರುವುದು, ಕೋಟಿ ಗಟ್ಟಲೆ ಹಣವನ್ನು ಮಾಡಲು ಕಾಲೇಜುಗಳನ್ನು ಓಪನ್ ಮಾಡಬೇಕಾಗಿಲ್ಲ. ಅವರ ಹೆಸರಿನಲ್ಲಿ ಕಾಲೇಜುಗಳನ್ನು ಮಾಡಬೇಕಾಗಿಲ್ಲ. ಅವರು ಮಾರವಾಡಿಗಳ ಹೆಸರಿನಲ್ಲಿ ಕಾಲೇಜುಗಳನ್ನು ಓಪನ್ ಮಾಡಲಿ. ಇವರು ದಿವಂಗತ ದೇವರಾಜ್ ಅರಸುರವರ ಹೆಸರನ್ನು ಏಕೆ ಇಡಬೇಕು? ಡಾ: ಬಿ.ಆರ್. ಅಂಬೇಡ್ಕರ್‌ರವರ ಹೆಸರನ್ನು ಏಕೆ ಇಡಬೇಕು? ಸಿದ್ಧಾರ್ಥರವರ ಹೆಸರನ್ನು ಏಕೆ ಇಡಬೇಕು? ಮಹಾತ್ಮ ಗಾಂಧೀಜಿಯವರ ಹೆಸರನ್ನು ಏಕೆ ಇಡಬೇಕು? ಜಗಜ್ಯೋತಿ ಬಸವಣ್ಣನವರ ಹೆಸರನ್ನು ಏಕೆ ಇಡಬೇಕು? ರಾಜೀವ್ ಗಾಂಧೀಯವರ ಹೆಸರನ್ನು ಏಕೆ ಇಡಬೇಕು? ಅವರ ಸೈನ್ ಬೋರ್ಡ್‌ಗಳನ್ನು ಹಾಕಿಕೊಂಡು, ಇವತ್ತು ಇಡೀ ಕರ್ನಾಟಕ ರಾಜ್ಯದ ಜನತೆಯನ್ನು ಲೂಟಿ ಮಾಡುತ್ತಿದ್ದಾರೆ. ಇದು ಅಷ್ಟೆ ಅಲ್ಲ, ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯದ ಜೊತೆಯಲ್ಲಿ ಇವರು ಚೆಲ್ಲಾಟವಾಡುತ್ತಿದ್ದಾರೆ. ಈಗ 5–6 ವರ್ಷಗಳಿಂದ ಈ ಸಿ.ಇ.ಟಿ. ಸಮಸ್ಯೆ ಉದ್ಭವವಾಗಿದೆ. 'ಸರ್ಕಾರ 5–6 ವರ್ಷಗಳಿಂದ ಕಣ್ಣುಮುಚ್ಚಿಕೊಂಡು ಕುಳಿತಿದ್ದೆಯಾ? ಇದಕ್ಕೆ ಎಂದಾದರೂ ಒಂದು ದಿವಸ, ಅಂತಿಮ ತೆರೆಯನ್ನು ಹಾಕಬೇಕೆನ್ನುವಂತಹ ಧೃಢವಾದ ತೀರ್ಮಾನವನ್ನು, ತೆಗೆದುಕೊಳ್ಳಲು ಸರ್ಕಾರಕ್ಕೆ ಆಗಲಿಲ್ಲವೆಂದರೆ, ಮತ್ತು ಪ್ರತಿದಿವಸ ವಿದ್ಯಾರ್ಥಿಗಳು, ಯಾವುದೋ ಒಂದು ಊರಿನಲ್ಲಿ, ಯಾವುದೋ ಒಂದು ಜಿಲ್ಲೆಯಲ್ಲಿ, ಹೋರಾಟ ಮಾಡುತ್ತಾರೆ, ಹಾಗಾದರೆ ವಿದ್ಯಾರ್ಥಿಗಳನ್ನು ಹೋರಾಟಕ್ಕೆ ಬೀದಿಗೆ ತಳ್ಳಿಬಿಟ್ಟು, ನೀವು ನಾವು ಇಲ್ಲಿ ಸದನದಲ್ಲಿ ಕುಳಿತುಕೊಂಡು, ಮಾತನಾಡುವುದಾ? ಇವತ್ತು ನಾನು ಏನು ಹೇಳುತ್ತೇನೆಂದರೆ, ಇವತ್ತು ಸಾಮಾನ್ಯ ಜನರು ಯಾರೂ ವೈದ್ಯಕೀಯ ಶಿಕ್ಷಣವನ್ನು, ಮತ್ತು ಇಂಜಿನಿಯರ್ ಶಿಕ್ಷಣವನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಇಲ್ಲಿ ಹಿಂದುಳಿದ ಮತ್ತು ಬಡವರಿಗೆ ಎಂದು ಏನು ಕಾಲೇಜುಗಳನ್ನು ಸ್ಥಾಪನೆ ಮಾಡಿದ್ದರೋ, ಆ ಹಿಂದುಳಿದ ವಿದ್ಯಾರ್ಥಿಗಳು ಆಗಲಿ, ಬಡ ಜನತೆಯಾಗಲೀ ತುಳುತಕ್ಕೊಳಗಾದ ವರ್ಗದವರಾಗಲೀ ಅಲ್ಪಸಂಖ್ಯಾತರಿಗೆ, ಇವತ್ತು ಬಡಜನರಿಗೆ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಶಿಕ್ಷಕರನ್ನು ಈ ಕಾಲೇಜುಗಳಲ್ಲಿ ತೆಗೆದುಕೊಳ್ಳಲು ಸಾಧ್ಯವಿಲ್ಲ. ಇವತ್ತಿನ ದಿವಸ ಸುಪ್ರೀಂಕೋರ್ಟ್ ನಿಗದಿ ಮಾಡಿರುವಂತಹ ಫೀಸ್ ಅನ್ನು ಕೊಟ್ಟು, ಓದುವಂತಹ ಶಕ್ತಿ ಎಷ್ಟು ಜನರಿಗಿದೆ? ಇದನ್ನು ಇವತ್ತು ಸರ್ಕಾರ ಹೇಳಲಿ. ನೀವು ಬಜೆಟ್ ಮಂಡನೆ ಮಾಡಿದ್ದೀರಿ, ತಲಾ ಆದಾಯವನ್ನು ಹೇಳುತ್ತಿದ್ದೀರಿ, ನ್ಯಾಷನಲ್ ಇನ್‌ಕಂ ಹೇಳುತ್ತಿದ್ದೀರಿ, ಶೇಕಡಾ 38ರಷ್ಟು ಬಿಲೋ ಪಾವರ್ಟಿ ಲೈನ್ ಎಂದು ಹೇಳುತ್ತಿದ್ದೀರಿ, 17 ಲಕ್ಷ ಜನ ಬಿ.ಪಿ.ಎಲ್. ಕಾರ್ಡ್‌ಗಳನ್ನು ಹಂಚುತ್ತೇವೆಂದು ಹೇಳುತ್ತೀರಿ. ಇಲ್ಲಿ 17 ಲಕ್ಷ ಜನ ಬಿ.ಪಿ.ಎಲ್. ಕಾರ್ಡ್ ಪಡೆಯುವಂತಹ ಅರ್ಹತೆ ಇವರುವವರು ಈ ರಾಜ್ಯದಲ್ಲಿ ಇದ್ದರೆ, ಅವರಿಗೆ ಈ ಶಿಕ್ಷಣ ಸಿಗುವುದಿಲ್ಲ, ಇದು ನಿಜವಾ? ಬಿಲೋ ಪಾವರ್ಟಿ ಲೈನ್‌ಗೆ 17 ಲಕ್ಷ ಕಾರ್ಡ್ ಹಂಚುತ್ತೇವೆಂದರೆ, ಅವರಿಗೆ ಈ ಶಿಕ್ಷಣ ಎಲ್ಲಿಂದ ಸಿಗುತ್ತದೆ, ಈ ಫೀಸ್ ಅನ್ನು ಅವರು ಎಲ್ಲಿಂದ ತಂದು ಕೊಡಬೇಕು? ಇಲ್ಲಿ ಮಧ್ಯಮ ವರ್ಗದವರ ಗತಿ ಏನು? ಸರ್ಕಾರಿ ನೌಕರರ ಗತಿ ಏನು? ಅವರ ಮಕ್ಕಳು ಇವತ್ತು, ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಓದುವುದಕ್ಕೆ ಸಾಧ್ಯವಾಗುತ್ತಿದೆಯಾ? ಇವರು ಇವತ್ತು ಚೆಲ್ಲಾಟ ಮಾಡುತ್ತಿದ್ದಾರೆ. ಇಲ್ಲಿ ಪ್ರಮುಖವಾದಂತಹ ಪ್ರಶ್ನೆ ಇರುವಂಥಾದ್ದು, ನಾನು ನೇರವಾಗಿ ಏನು ಹೇಳುತ್ತೇನೆಂದರೆ, ಈ ಸರ್ಕಾರಕ್ಕೂ, ಕಾಮೆಡ್–ಕೆಗೂ ಏನೂ ವ್ಯತ್ಯಾಸವಿಲ್ಲ. ಎರಡೂ ಒಂದೇ.

ಇವರಿಬ್ಬರೂ ಸೇರಿಕೊಂಡು ಡ್ರಾಮಾ ಆಡುತ್ತಿದ್ದಾರೆ, ಸಾರ್ವಜನಿಕರ ಮುಂದೆ ನಾಟಕ ಆಡುತ್ತಿದ್ದಾರೆ. ಇವರು ಖಾಸಗಿ ಸಂಸ್ಥೆಗಳವರನ್ನು ತೃಪ್ತಿ ಪಡಿಸಬೇಕು. ಸಾರ್ವಜನಿಕರಿಗೆ ಟೋಪಿ ಹಾಕಲು, ಸಾರ್ವಜನಿಕರನ್ನು ವಂಚನೆ ಮಾಡಲು ಕಾಮೆಡ್–(ಕೆ) ಹೆಸರಿನಲ್ಲಿ ಒಂದು ಸಂಘಟನೆ, ಜನರ ಪ್ರತಿನಿಧಿಗಳ ಹೆಸರಿನಲ್ಲಿ ಇಲ್ಲೊಂದು ಸರ್ಕಾರ. ಇವರಿಬ್ಬರೂ ಸೇರಿ ಇವತ್ತು ಜನವರಿಗೆ ಮೋಸ ಮಾಡುತ್ತಿದ್ದಾರೆ. ನಾನು ಸ್ಪಷ್ಟವಾಗಿ ಹೇಳುತ್ತೇನೆ, ಸರ್ಕಾರ ಇವತ್ತು ದೃಢವಾದಂಥ ತೀರ್ಮಾನವನ್ನು ತೆಗೆದುಕೊಳ್ಳಬೇಕು. ನಾವು ಸರ್ಕಾರಕ್ಕೆ ಬೆಂಬಲವಾಗಿ ನಿಲ್ಲುತ್ತೇವೆ. ವಿದ್ಯಾರ್ಥಿಗಳ ಪರವಾಗಿ, ಕಾಮೆಡ್–(ಕೆ) ಮತ್ತು ಪ್ರೈವೇಟ್ ಮೇನೇಜ್‌ಮೆಂಟ್‌ಗಳ ವಿರುದ್ಧವಾಗಿ ನೀವು ಏನು ಕ್ರಮ ತೆಗೆದುಕೊಂಡರೂ ನಾವು ನಿಮ್ಮ ಪರವಾಗಿ ನಿಲ್ಲುತ್ತೇವೆ. ಅದಕ್ಕೆ ನೀವು ಹೆದರಬೇಕಾಗಿಲ್ಲ. ಸದನದಲ್ಲಿ ಚರ್ಚೆ ಮಾಡೋಣ. ಎಲ್ಲರೂ ಸೇರಿ ಯುನಾನಿಮಸ್ ಆದಂಥ ಒಂದು ತೀರ್ಮಾನ ತೆಗೆದುಕೊಳ್ಳೋಣ. ಖಾಸಗಿ ಸಂಸ್ಥೆಗಳವರು ಈಗ, ನೀವು ಕಾಲೇಜನ್ನು ನಡೆಸಿ ನೋಡಿ ಎಂದು ಸವಾಲು ಹಾಕುತ್ತಿದ್ದಾರೆ. ನಾವು ನಡೆಸಿ ನೋಡುತ್ತೇವೆ, ನೀವು ಬಿಟ್ಟುಬಿಡಿ ಎಂದು ನೀವು ಅವರಿಗೆ ಹೇಳಿ. ನಾನು ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ. ಈ ಸಮಸ್ಯೆ ಐದು ವರ್ಷಗಳ ಹಿಂದೆ ಪ್ರಾರಂಭವಾಯಿತು. ನಿಮಗೇನಾದರೂ ಇಚ್ಛಾಶಕ್ತಿ ಇದ್ದಿದ್ದರೆ, ದೂರಾಲೋಚನೆ ಇದ್ದಿದ್ದರೆ, ಖಾಸಗಿ ಕಾಲೇಜುಗಳ ಗರ್ವವನ್ನು ಅಡಗಿಸಬೇಕು ಎಂದಿದ್ದಾರೆ, ಅವರ ಶಕ್ತಿಯನ್ನು ಕುಂದಿಸಬೇಕು ಎಂದಿದ್ದರೆ, ನೀವು ಇಷ್ಟು ಹೊತ್ತಿಗೆ ಐದು ಸರ್ಕಾರಿ ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭ ಮಾಡಿ ಬಡ ವಿದ್ಯಾರ್ಥಿಗಳಿಗೆ ಸೀಟು ಕೊಡಲು ನೀವು ಯೋಚನೆ ಮಾಡುತ್ತಿದ್ದಿರಿ. ವರ್ಷಕ್ಕೆ 5–6 ಮೆಡಿಕಲ್ ಕಾಲೇಜುಗಳನ್ನು ಖಾಸಗಿಯವರಿಗೆ ಕೊಡುವ ಬದಲು, ವರ್ಷಕ್ಕೆ ಎರಡೆರಡು ಮೆಡಿಕಲ್ ಕಾಲೇಜುಗಳನ್ನು ಸರ್ಕಾರವೇ ಸ್ಥಾಪನೆ ಮಾಡಿದ್ದರೆ, ಇವತ್ತು ಈ ಸಮಸ್ಯೆ ಉದ್ಭವವಾಗುತ್ತಾ ಇರಲಿಲ್ಲ. ಅಥವಾ ನಿಮ್ಮ ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿ ಇನ್‌ಟೇಕಿಂಗ್ ಕೆಪ್ಯಾಸಿಟಿಯನ್ನು ಜಾಸ್ತಿ ಮಾಡಿದ್ದರೂ ಕೂಡ ಈ ಸಮಸ್ಯೆ ಉದ್ಭವಾಗುತ್ತಿರಲಿಲ್ಲ. ಇವತ್ತು ಅವರು ಏಕೆ ನಿಮ್ಮ ಕುತ್ತಿಗೆ ಹಿಡಿದಿದ್ದಾರೆ ಎಂದರೆ ನಿಮ್ಮಲ್ಲಿ ಆ ಶಕ್ತಿ ಇಲ್ಲ. ಸರ್ಕಾರದಲ್ಲಿ ಆ ಶಕ್ತಿ ಇಲ್ಲ. ಸರ್ಕಾರೀ ಕಾಲೇಜುಗಳಲ್ಲಿ ಇನ್‌ಟೇಕಿಂಗ್ ಕೆಪಾಸಿಟಿ ಇನ್‌ಕ್ರೀಸ್ ಮಾಡಲಿಲ್ಲ, ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್ ಮಾಡಲಿಲ್ಲ, ಬೇಕಾದಂಥ ವ್ಯವಸ್ಥೆ ಮಾಡಲಿಲ್ಲ. ಇವತ್ತು ನೀವು ಯಾವುದೇ ಖಾಸಗೀ ವಿದ್ಯಾಸಂಸ್ಥೆಗಳನ್ನು ಹೋಗಿ ನೋಡಿ. ಅವರು ಫೈವ್ ಸ್ಟಾರ್ ಹೋಟೆಲ್‌ಗಳ ಹಾಗೆ ಕಾಲೇಜುಗಳನ್ನು ಕಟ್ಟಿದ್ದಾರೆ. ಬೆಂಗಳೂರು ಮೆಡಿಕಲ್ ಕಾಲೇಜಿನ ಗತಿ ಹೇಗಿದೆ ಎಂದು ನೋಡಿ. ಬಳ್ಳಾರಿ ಮೆಡಿಕಲ್ ಕಾಲೇಜಿನ ಗತಿ ಹೇಗಿದೆ ಎಂದು ನೋಡಿ. ಮೈಸೂರು ಮೆಡಿಕಲ್ ಕಾಲೇಜಿನ ಗತಿ ಹೇಗಿದೆ ಎಂದು ನೋಡಿ. ಅದು ಕಾಲೇಜನ್ನು ನಡೆಸತಕ್ಕಂಥ ವಿಧಾನವೇ? ಹಾಗಾಗಿ, ಇವತ್ತು ಸರ್ಕಾರವೇ ನೇರವಾಗಿ ಖಾಸಗಿ ಸಂಸ್ಥೆಗಳ ಜೊತೆ ಶಾಮೀಲಾಗಿ, ಸರ್ಕಾರೀ ಕಾಲೇಜುಗಳ ಕತ್ತು ಹಿಸುಕಿ ಖಾಸಗಿ ಕಾಲೇಜುಗಳವರೆಗೆ ಪ್ರೋತ್ಸಾಹ ಕೊಡತಕ್ಕಂಥ ಕಾರಣಕ್ಕಾಗಿ ನೀವು ಸರ್ಕಾರೀ ಕಾಲೇಜುಗಳ ಕತ್ತನ್ನು ಹಿಸುಕುತ್ತಿದ್ದೀರಿ. ಇದರ ಹಿಂದೆ ಇರತಕ್ಕಂಥ ಮುಖ್ಯ ಉದ್ದೇಶವೇನೆಂದರೆ, ಸರ್ಕಾರ ನಾಗರೀಕ ಜವಾಬ್ದಾರಿಯನ್ನು ಕೈ ತೊಳೆದು ಬಿಟ್ಟುಬಿಟ್ಟು, ತನ್ನ ಜವಾಬ್ದಾರಿಯಿಂದ ನುಣಿಚಿಕೊಳ್ಳಲು, ಶಿಕ್ಷಣ ಸಂಸ್ಥೆಗಳನ್ನು ಖಾಸಗಿಯವರಿಗೆ ಕೊಡಲು ಎಲ್ಲಾ ರೀತಿಯಾದ ವಾತಾವರಣವನ್ನು ಸೃಷ್ಟಿ ಮಾಡುತ್ತಿರತಕ್ಕಂಥಾದ್ದು ಸರ್ಕಾರವೇ ಹೊರತು ಬೇರೆ ಯಾರೂ ಅಲ್ಲ. You want to wash away your hands. You don't want to take

any social responsibility of giving education. ನಾವು ಮಾನವ ಸಂಪನ್ಮೂಲವನ್ನು ಹೆಚ್ಚು ಮಾಡುತ್ತೇವೆ ಎಂದು ನಿಮ್ಮ ಬಜೆಟ್‌ನಲ್ಲಿ ಹೇಳುತ್ತೀರಿ. ಮಾನದ ಸಂಪನ್ಮೂಲವನ್ನು ಹೇಗೆ ಹೆಚ್ಚು ಅಭಿವೃದ್ಧಿ ಪಡಿಸುತ್ತೀರಿ? ಶಿಕ್ಷಣ ಸಂಸ್ಥೆಗಳನ್ನು ಖಾಸಗಿಯವರಿಗೆ ಕೊಟ್ಟುಬಿಟ್ಟು, ಎಲ್.ಕೆ.ಜಿ. ಯಿಂದ ಮೆಡಿಕಲ್ ಕಾಲೇಜಿನವರೆಗೆ ಎಲ್ಲವನ್ನೂ ಖಾಸಗಿಯವರಿಗೆ ಕೊಟ್ಟುಬಿಟ್ಟು, ನಾವು ಮಾನವ ಸಂಪನ್ಮೂಲವನ್ನು ಹೆಚ್ಚು ಮಾಡುತ್ತೇವೆ ಎಂದು ಹೇಳುತ್ತೀರಿ. Is it not self-contradictory? ಹೇಗೆ ನೀವು ಹೆಚ್ಚು ಮಾಡುತ್ತೀರಿ? ಇದೇ ಸಂದರ್ಭದಲ್ಲಿ, ಇವತ್ತು ಪರಿಸ್ಥಿತಿ ಹೇಗಾಗಿಗೆ ಎಂದರೆ ಮೇನೇಜ್‌ಮೆಂಟ್‌ನವರೇ ಸರ್ಕಾರ ನಡೆಸುವವರು. ಆ ಮೇನೇಜ್‌ಮೆಂಟ್‌ನಲ್ಲಿರುವವರೇ ಇಲ್ಲಿ ಉನ್ನತ ಶಿಕ್ಷಣ ಸಚಿವರು. ಕಾಮೆಡ್(ಕೆ) ಯಲ್ಲಿ ಸದಸ್ಯರು, ಇಲ್ಲಿ ಉನ್ನತ ಶಿಕ್ಷಣ ಸಚಿವ್ವರು. ಅವರು ಸರ್ಕಾರದ ಪ್ರತಿನಿಧಿ. ಹೀಗಿರುವಾಗ, ನ್ಯಾಯ ಹೇಗೆ ಸಿಗುತ್ತದೆ ಎಂದು ನೀವೇ ಹೇಳಿ ಸ್ವಾಮಿ? ಹೇಗೆ ನೀವು ಸರ್ಕಾರದ ಇಂಟರೆಸ್ಟನ್ನು ಕಾಪಾಡುತ್ತೀರಿ? Do you have moral right? When you keep the same man in the Cabinet and that same man is a member of the COMED-(K) and you are sending him as a representative to negotiate with the COMED(K). How can anybody expect justice? ಹೇಗೆ ಮಾಡುತ್ತೀರಿ ಎಂದು ನೀವೇ ಹೇಳಿ. Are you not playing drama? ನೀವು ಮಾಡುತ್ತಾ ಇರತಕ್ಕಂಥ ಇದು ನಾಟಕವಲ್ಲವೇ? ಹಾಗಾಗಿ ನಾನು ಹೇಳುತ್ತೇನೆ, ಇವರಿಗೆ ಧೈರ್ಯವಿದ್ದರೆ ತೀರ್ಮಾನವನ್ನು ತೆಗೆದುಕೊಳ್ಳಲಿ, ಎಲ್ಲಾ ಖಾಸಗೀಕರಣವನ್ನು ರದ್ದು ಮಾಡುತ್ತೇವೆ, ನಾವು ಸರ್ಕಾರದವರೇ ವಹಿಸಿಕೊಳ್ಳುತ್ತೇವೆ ಎಂದು ತೀರ್ಮಾನ ತೆಗೆದುಕೊಳ್ಳಲಿ. ಇಲ್ಲದಿದ್ದರೆ ಒಂದು ಆರ್ಡಿನೆನ್ಸ್ ತನ್ನಿ. ಇಲ್ಲದಿದ್ದರೆ, ಸರ್ಕಾರದಿಂದಲೇ ಕಾಲೇಜುಗಳನ್ನು ಓಪನ್ ಮಾಡಿ. ನೀವು ಏಕೆ ಆ ಕೆಲಸ ಮಾಡಬಾರದು? ಇವತ್ತಯ ಒಬ್ಬ ಸ್ಟೂಡೆಂಟ್ ಮೆಡಿಕಲ್ ಓದಿ ಡಾಕ್ಟರಾಗಬೇಕು ಎಂದರೆ, ಅವರು ಡಿಗ್ರಿ ತೆಗೆದುಕೊಂಡು ಆಚೆ ಬರಬೇಕು ಎಂದರೆ, ಇವತ್ತಿನ ಪರಿಸ್ಥಿತಿಯಲ್ಲಿ, he has to spend more than Rs. 70 lakh. 70 ಲಕ್ಷ ರೂ. ಇಲ್ಲದೇ ಇವತ್ತು ಯಾರೂ ಡಾಕ್ಟರಾಗಲು ಸಾಧ್ಯವಿಲ್ಲ. ಅದೂ ಸಹ ಬರೀ ಆರ್ಡಿನರಿ ಡಾಕ್ಟರ್ , ಎಂ.ಡಿ. ವಿಷಯವನ್ನು ಬಿಟ್ಟುಬಿಡಿ. ಎಂ.ಡಿ. ಓದಬೇಕೆಂದರೆ ಮತ್ತೆ ಅದಕ್ಕೆ 30 ಲಕ್ಷ ರೂ. ಸೇರುತ್ತದೆ. ಎಂ.ಡಿ. ಮಾಡಬೇಕಾದರೆ ಒಟ್ಟು ಒಂದು ಕೋಟಿ ರೂ. ಬೇಕು. ಕೇವಲ ಎಂ.ಬಿ.ಬಿ.ಎಸ್. ಡಿಗ್ರಿ ಮಾಡಬೇಕಾದರೆ 70 ಲಕ್ಷ ರೂ. ಬೇಕು, ಎಂ.ಡಿ. ಮಾಡಬೇಕಾದರೆ ಒಂದು ಕೋಟಿ ರೂ. ಬೇಕು. ಹೀಗಿರುವಾಗ ನೀವು ಯಾರಿಗೆ ಶಿಕ್ಷಣ ಕೊಡುತ್ತಿದ್ದೀರಿ? ಸಾಮಾನ್ಯ ಜನರಿಗೆ ಶಿಕ್ಷಣ ಕೊಡುತ್ತೀರಾ? ಅಂಥ ಶಿಕ್ಷಣ ಕೊಡುವವರ ಕೈಯಲ್ಲಿ ನೀವು ಸಿಕ್ಕಿಹಾಕಿಕೊಂಡು ಇವತ್ತು ಕರ್ನಾಟಕ ರಾಜ್ಯದ ಬಡ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡುತ್ತಿದ್ದೀರಿ. ಇದರ ಬಗ್ಗೆ ಇವತ್ತು ಸರ್ಕಾರ ಸ್ಪಷ್ಟವಾಗಿ ಹೇಳಬೇಕು. ನಿಮಗೆ ತಾಕತ್ತಿದ್ದರೆ, ಅವರನ್ನು ಜೈಲಿಗೆ ಹಾಕಿ. ಸುಪ್ರೀಂ ಕೋರ್ಟಿನ ತೀರ್ಮಾನವನ್ನು ಉಲ್ಲಂಘನೆ ಮಾಡುತ್ತಾ ಇರತಕ್ಕಂಥವರು ಅವರು. 2003–04ರಲ್ಲಿ ನೀಡಿರುವ ಲೇಟೆಸ್ಟ್ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟಿನಲ್ಲಿ ಏನು ಹೇಳಿದ್ದಾರೆ ಎಂದರೆ, 'ಆಡಳಿತ ಮಂಡಳಿ ಸೀಟು ಕೋಟಾವನ್ನು ಸ್ಥಳೀಯ ಅವಶ್ಯಕತೆ ಆಧಾರದ ಮೇಲೆ ನಿಗದಿಪಡಿಸುವ ಅಧಿಕಾರ ರಾಜ್ಯಕ್ಕೆ ಇದೆ. The Supreme Court itself has given a direction option rather; if you won't say it is a direction, an option 'ಆಡಳಿತ ಮಂಡಳಿ ಸೀಟು ಕೋಟಾವನ್ನು

ಸ್ಥಳೀಯ ಅವಶ್ಯಕತೆ ಆಧಾರದಲ್ಲಿ ನಿಗದಿಪಡಿಸುವ ಅಧಿಕಾರ ರಾಜ್ಯಕ್ಕಿದೆ' ಎಂದು ಹೇಳಿದ್ದಾರೆ. ಈಗ ನಿಮ್ಮ ಅಧಿಕಾರವನ್ನು ನೀವು ಉಪಯೋಗಿಸಿ. ಆದ್ದರಿಂದ, ಸರ್ಕಾರ ಇವತ್ತು, ಸರ್ಕಾರ ಎಂದರೆ ಏನು ಎಂದು ಅವರಿಗೆ ತೋರಿಸಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಏನು ತೋರಿಸಬೇಕು ಎಂದು ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಹೇಳಿದೆ, ನೀವು ಕೇಳಿಸಿಕೊಳ್ಳಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಾನು ಸಿ.ಎಂ. ಚೇಂಬರ್‌ನಲ್ಲಿದ್ದೆ. ತಾವು ಒಂದು ನಿಮಿಷ ಕುಳಿತುಕೊಳ್ಳಿ, ಒಂದು ನಿಮಿಷ ಯೀಲ್ಡಾಗಿ. ಯಾವಾಗಲೂ ಸಹ ಸಾಮಾಜಿಕವಾಗಿ ಒಂದು ಸೋಷಿಯಲ್ ಪ್ರೆಷರ್ ಗ್ರೂಪ್ ಎಂದು ಇರಬೇಕಾಗುತ್ತದೆ. ಸೊಸೈಟಿಯಲ್ಲಿರತಕ್ಕಂಥ ಇವಿಲ್ಸ್ ಅನ್ನು ತಡೆಗಟ್ಟಬೇಕಾದರೆ, ಅದೆಲ್ಲಾ ಒಪ್ಪಿಕೊಳ್ಳತಕ್ಕಂಥ ವಿಚಾರ, ಮಾನ್ಯ ಶ್ರೀರಾಮರೆಡ್ಡಿಯವರು ಹೇಳತಕ್ಕಂಥಾದ್ದು. ನಾವು ಅಪ್ರೀಷಿಯೇಟ್ ಮಾಡುತ್ತೇವೆ. ಆದರೆ ಮುಖ್ಯವಾದ ಅಂಶವೆಂದರೆ, ನಾವೂ ಸಹ ನಿಮ್ಮ ಹಾಗೆಯೇ 75:25ರ ಅನುಪಾತವನ್ನು ಉಳಿಸಿಕೊಳ್ಳಬೇಕು ಎಂದು ಹೇಳತಕ್ಕಂಥವರು. ಫೀಸ್ ಸ್ಟ್ರಕ್ಚರ್ ಆದಷ್ಟು ಅಫೋರ್ಡಬಲ್ ಇರಬೇಕು ಎಂದು ಹೇಳತಕ್ಕಂಥವರು ನಾವು. ಸುಪ್ರೀಂ ಕೋರ್ಟ್‌ವರೆಗೆ ಸಹ ಹೋಗಿದ್ದರೂ, ನಮ್ಮ ಮೇಲೆ ಎಷ್ಟೇ ಒತ್ತಡವಿದ್ದರೂ ಸಹ ನಾವೂ ಸ್ಪಷ್ಟವಾಗಿ ಹೇಳಿದ್ದೇವೆ, ಯಾವುದೇ ಕಾರಣಕ್ಕೂ ನಾವು ಇದನ್ನು ಒಪ್ಪಲು ತಯಾರಿಲ್ಲ ಎನ್ನುವ ಮಾತನ್ನು ಆಡಳಿತ ಮಂಡಳಿಯವರ ಜೊತೆಯಲ್ಲಿ ಹೇಳಿದ್ದೇವೆ. ನೀವು ನಮಗೆ ಸಜೆಸ್ಟ್ ಮಾಡಿ. ಏಕೆಂದರೆ ನಮ್ಮ ಶಿಕ್ಷಣ ಸಚಿವರು ಈಗಾಗಲೇ ಹೇಳಿದ್ದಾರೆ. ಕೆಲವು ವಿಚಾರಗಳನ್ನು ಇಲ್ಲಿ ಮಾತನಾಡಲು ಆಗದೇ ಇರಬಹುದು. ಆದ್ದರಿಂದ ಫ್ಲೋರ್ ಲೀಡರ್‌ಗಳನ್ನು ಕರೆಸಿ, ಮಾನ್ಯ ಮುಖ್ಯಮಂತ್ರಿಗಳು ಮತ್ತು ಶಿಕ್ಷಣ ಸಚಿವರು ನಿಮ್ಮ ಸಲಹೆಗಳನ್ನೂ ನಾಳೆ ನಾಡಿದ್ದರಲ್ಲಿ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಕೋರ್ಟ್‌ಗಳೂ ಸಹ ಬೇಕಾದಷ್ಟು ವರ್ಡಿಕ್ಟ್‌ಗಳನ್ನು, ಜಡ್ಜಮೆಂಟ್‌ಗಳನ್ನು ಕೊಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ, ನೀವು ಖಚಿತವಾಗಿ ಈ ಕ್ರಮವನ್ನು ಆಡಳಿತ ಮಂಡಳಿಯವರ ಮೇಲೆ ತೆಗೆದುಕೊಳ್ಳಬಹುದು, ಎನ್ನುವುದನ್ನು ಹೇಳಿ. ಏಕೆಂದರೆ ಒಂದು ಸಿಂಡಿಕೇಟ್ ಇದೆ. It is an autonomous body ಎಂದು ನಾವು ಈ ಹೌಸ್‌ನಲ್ಲೇ ಪಾಸ್ ಮಾಡಿ ಕೊಟ್ಟಿದ್ದೇವೆ. ಅದಕ್ಕೆ ಒಬ್ಬರು ವೈಸ್–ಚಾನ್ಸಲರ್ ಇರುತ್ತಾರೆ. ನಾವು Dis-affiliation ಮಾಡುತ್ತೇವೆ ಎಂದು ಹೇಳಬೇಕಾದರೆ ಅದಕ್ಕೆ ಒಂದು ಕಾನೂನು ಎನ್ನುವುದು ಇರುತ್ತದೆ. ಈ ಎಲ್ಲಾ ಅಡಚಣೆಗಳು ಇರುತ್ತವೆ. ಈ ಸಮಸ್ಯೆ ಕರ್ನಾಟಕಕ್ಕೆ ಮಾತ್ರ ಸೀಮಿಯವಾಗಿರತಕ್ಕಂಥಾದ್ದು ಅಲ್ಲ. ಕರ್ನಾಟಕ, ಕೇರಳ, ಮಹಾರಾಷ್ಟ್ರ ಎಲ್ಲಾ ರಾಜ್ಯಗಳಲ್ಲೂ ಸಹ ಇದೆ. ಕೇಂದ್ರ ಸರ್ಕಾರದಲ್ಲಿ ಇದರ ಬಗ್ಗೆ ಒಂದು ಹೊಸದಾಗಿ ಆರ್ಡಿನೆನ್ಸನ್ನು ಮಾಡಬಹುದಾಗಿತ್ತು. ಹೋದ ವರ್ಷವೂ ಹೀಗೇ ಆಯಿತು. ಹಿಂದೆ ಆಳಿದವರೇ ಈ ಕೆಲಸವನ್ನು ಮಾಡಬಹುದಾಗಿತ್ತು. ಅವರೂ ಸಹ ಮಾಡಿಲ್ಲ. ಆದ್ದರಿಂದಾಗಿ, We are in a confusion. Guide us. ಹೀಗೆ ಮಾಡಿ ಎಂದು ಹೇಳಿ. ಸರ್ಕಾರ ದೊಡ್ಡ ಅನ್ಯಾಯ ಮಾಡಿಬಿಟ್ಟಿದೆ, ಯಾರನ್ನೋ ರಕ್ಷಣೆ ಮಾಡಬೇಕು ಎನ್ನುವುದು ಖಂಡಿತವಾಗಿ ಸರ್ಕಾರದ ಮುಂದೆ ಇಲ್ಲ. ಸಮ್ಮಿಶ್ರ ಸರ್ಕಾರದಿಂದ ನಾವು ಸ್ಪಷ್ಟವಾಗಿ ಹೇಳುತ್ತಿದ್ದೇವೆ, ಯಾವುದೇ ಕಾರಣಕ್ಕೂ, Infact, I appreciate my Chief Minister. ನಮ್ಮ ಮುಖ್ಯಮಂತ್ರಿಗಳನ್ನು ನಾನು ಈ ವಿಚಾರದಲ್ಲಿ ಮೆಚ್ಚುತ್ತೇನೆ. ಯಾವುದೇ ಕಾರಣಕ್ಕೂ ಇದನ್ನು ಒಪ್ಪಲು ಆಗುವುದಿಲ್ಲ, ನಾವು ವಿದ್ಯಾರ್ಥಿಗಳ ಪರವಾಗಿ ಇರಬೇಕು, ಮಧ್ಯಮ ವರ್ಗದ ಸಾಮಾನ್ಯ ವರ್ಗದ ಜನರ ಪರವಾಗಿ ಇರಬೇಕು ಎಂದು ಅವರು ಬೋಲ್ಡಾಗಿ ಹೇಳಿದರು. ಇವತ್ತು

ಒಬ್ಬ ಸರ್ಕಾರಿ ನೌಕರ ತಾನು ನಿಷ್ಠಾವಂತ ಸರ್ಕಾರಿ ಅಧಿಕಾರಿಯಾಗಿದ್ದರೆ ತನ್ನ ಮಗನನ್ನು ಸೇರಿಸಿ, ಓದಿಸಲು ಆಗುವುದಿಲ್ಲ. ಅದನ್ನು ನಾವು ಒಪ್ಪುತ್ತೇವೆ. But, how do we solve it? Please suggest that. We appreciate.

ಶ್ರೀ ಹೆಚ್. ಆಂಜನೇಯ : ಸರ್ಕಾರೀ ನೌಕರರ ಮಕ್ಕಳಿಗೇ ಆಗುವುದಿಲ್ಲ ಎಂದ ಮೇಲೆ ರೈತರ ಮಕ್ಕಳಿಗೆ ಹೇಗೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಮಾತನಾಡಿದ್ದನ್ನು ನೀವು ಪೂರ್ತಿ ಕೇಳಿಸಿಕೊಳ್ಳಲಿಲ್ಲವೆಂದು ಕಾಣುತ್ತದೆ. ನಿಮಗೆ ತಾಕತ್ತಿದ್ದರೆ ಅದನ್ನು ನೀವು....

ಶ್ರೀ ಆರ್.ವಿ. ದೇಶಪಾಂಡೆ : ತಾಕತ್ತು ಅಲ್ಲ, ನೀವು ಸಲಹೆ ಕೊಡಿ. ಸರ್ಕಾರಕ್ಕೆ ತಾಕತ್ತು ಇದೆ, ಬಹುಮತದಿಂದಲೇ ಅವರು ಇಲ್ಲಿ ಕುಳಿತಿದ್ದಾರೆ. ತಾವು ಚೆನ್ನಾಗಿ ಮಾತನಾಡುತ್ತಿದ್ದೀರಿ, ವಿದ್ಯಾರ್ಥಿಗಳ ಪರವಾಗಿ ಮಾತನಾಡುತ್ತಿದ್ದೀರಿ, ಫೀಸ್ ಕಡಿಮೆಯಾಗಬೇಕು, ಅದು ಅಫೋರ್ಡಬಲ್ ಆಗಿ ಇರಬೇಕು, ಇವೆಲ್ಲಾ ಸರಿ. ಆದರೆ ಇಲ್ಲಿ ತಾಕತ್ತಿನ ಪ್ರಶ್ನೆ ಇಲ್ಲ. ಇಲ್ಲಿ ಕಾಯಿದೆ ಕಾನೂನಿನ ಚೌಕಟ್ಟಿನಲ್ಲಿ ಯಾವ ಪ್ರಕಾರ ನಾವು ಮಾಡಲು ಸಾಧ್ಯ ಎನ್ನುವ ಬಗ್ಗೆ ಸಲಹೆ ಕೊಡಿ. ಎಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರು ಬೇಗ ಮುಗಿಸಬೇಕು. ನಾಲ್ಕೂವರೆಗೆ ಬಜೆಟ್ ಮೇಲೆ ಡಿಸ್ಕಷನ್ ಆರಂಭವಾಗಬೇಕು.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಅವರು ಹೇಳುತ್ತಿರುವುದರಲ್ಲಿ ಒಳ್ಳೆಯದಾಗಬೇಕು ಎನ್ನುವ ಉದ್ವೇಗ ಇದೆ, ಸದಾಲೋಚನೆ ಇದೆ, ಆದರೆ ಅನುಭವ ಕಡಿಮೆ. ನೀವು ಸಿಂಧ್ಯಾರವರನ್ನು ಕುರಿತು ಅದೃಷ್ಟವಶಾತ್ 1983ನೇ ಇಸವಿಯಿಂದ ಸತತವಾಗಿ ಇಲ್ಲಿಗೆ ಆಯ್ಕೆಯಾಗಿ ಬಂದಿದ್ದೀರಿ. ಆ ಕಡೆ, ಈ ಕಡೆ ಕುಳಿತಿದ್ದೀರಿ. ಮುಖ್ಯಮಂತ್ರಿ ಹುದ್ದೆ ಒಂದನ್ನು ಬಿಟ್ಟು, ಉಳಿದ ಎಲ್ಲಾ ಹುದ್ದೆಗಳನ್ನೂ ನೀವು ಅಲಂಕರಿಸಿದ್ದೀರಿ. ನಿಮ್ಮ ಅಪಾರ ಅನುಭವದಲ್ಲಿ, ಇದಕ್ಕೆ ಏನು ಮಾಡಬಹುದು ಎನ್ನುವುದು ನಿಮಗೇ ಗೊತ್ತಿದೆ. ನೀವೇ ಮಾಡಬಹುದು, ಅವರ ಸಲಹೆ ಅಗತ್ಯವೇ ಇಲ್ಲ. ನೀವು ಮನಸ್ಸು ಮಾಡಿ ಮಾನ್ಯ ಧರ್ಮಸಿಂಗ್‌ರವರ ಜೊತೆಯಲ್ಲಿ ಗಟ್ಟಿಯಾಗಿ ನಿಲ್ಲಿ. ನಾವೆಲ್ಲರೂ ನಿಮ್ಮ ಹಿಂದೆ ಕಲ್ಲು ನಿಂತಹಾಗೆ ನಿಲ್ಲುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕೈಗಾರಿಕಾ ಮಂತ್ರಿ) : ಮಾನ್ಯ ಅಧ್ಯಕ್ಷರೆ, Repeatedly ನಾನು ಇದನ್ನು ಹೇಳುವಾಗ ತಾವು ಹೇಳಿರತಕ್ಕಂಥ 22 ವರ್ಷದ ಅನುಭವದ ಮಾತು ಏನಿದೆ. ಅನುಭವದ ಆಧಾರದ ಮೇಲೆಯೇ ನಾನು ಹೇಳುತ್ತಿದ್ದೇನೆ. Here is a Chief Minister who is committed for this cause. But the problem is, not that I am in his cabinet and he has taken me & I am trying to praise him. ಅವರು ಪ್ರಾಮಾಣಿಕವಾಗಿ ಈ ವಿಚಾರದಲ್ಲಿ ಇದ್ದಾರೆ. ಇಲ್ಲಿ ಪ್ರಶ್ನೆ ಏನಿದೆ ಎಂದರೆ, ಒಂದು ಕಡೆ ಸುಪ್ರೀಂಕೋರ್ಟ್‌ನವರು ಅವರು ಕೈಗೆ ಬ್ರಹ್ಮಾಸ್ತ್ರವನ್ನು ಕೊಟ್ಟಿದ್ದಾರೆ. 50 ಪರ್ಸೆಂಟ್‌ನ್ನು ಮಾತ್ರ ನೀವು ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ನಾನು ಒಬ್ಬ ಮಂತ್ರಿ ಸ್ಥಾನದಲ್ಲಿರತಕ್ಕವನು. ಸುಪ್ರೀಂಕೋರ್ಟ್‌ನ್ನು ಟೀಕೆ ಮಾಡಿ ಮಂತ್ರಿಸ್ಥಾನವನ್ನು ಕಳೆದುಕೊಳ್ಳುವುದಕ್ಕೆ ನಾನು ತಯಾರಿಲ್ಲ. ಏನಿದ್ದರೂ ಕೂಡ ಸುಪ್ರೀಂ ಕೋರ್ಟ್‌ನ್ನು ಹೊಗಳಿಕೊಂಡೇ ಇರಬೇಕು. ಸುಪ್ರೀಂಕೋರ್ಟ್‌ನ

ಹೊಗಳಿಕೆಗೆ ನಾನೂ ಸಹ ನಿಮ್ಮ ಜೊತೆಯಲ್ಲಿ ಇರುತ್ತೇನೆ. ಇಲ್ಲಿ ಪ್ರಶ್ನೆ ಇರುವುದು, ಬಡಬಗ್ಗರ ಗತಿ ಏನು? ನಮ್ಮ ಮಾನ್ಯ ಆಂಜನೇಯರವರು ಏನೋ ರೈತರ ಮಕ್ಕಳು ಎಂದು ಹೇಳಿದರು. ರೈತರ ಮಕ್ಕಳಿಗಾಗಿಯೇ ನಾನು ಮಾತನಾಡುತ್ತಿರತಕ್ಕಂಥದ್ದು ರೈತರ ಮಕ್ಕಳದ್ದು, ಕಾರ್ಮಿಕರ ಮಕ್ಕಳದ್ದು, ಸರ್ಕಾರಿ ನೌಕರರ ಮಕ್ಕಳದ್ದು, ಯಾರೋ ನಾಲ್ಕು ಜನ ಅಧಿಕಾರಿಗಳು ಕರಪ್ಟ್ ಇದ್ದಾರೆ ಎಂದಾಕ್ಷಣ ಎಲ್ಲಾ ಎಂಟಾಯರ್ ಸರ್ಕಾರಿ ನೌಕರರ ಸಂಘವೇ ಕರಪ್ಟ್ ಎಂದು ಹೇಳುವುದಕ್ಕಾಗುವುದಿಲ್ಲ. ಹತ್ತು ಸಾವಿರ ರೂಪಾಯಿ ಹನ್ನೆರಡು ಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳುವವನಿಗೂ 50 ಸಾವಿರ ರೂಪಾಯಿ ಸೇವಿಂಗ್ಸ್‌ನ್ನು ಅವನು ಎಲ್ಲಿಂದ ತೋರಿಸುತ್ತಾನೆ? ಎಲ್ಲಿಂದ ಬರುತ್ತದೆ ಸೇವಿಂಗ್ಸ್? ಇಬ್ಬರು ಮಕ್ಕಳಿದ್ದು ಒಬ್ಬ ಇಂಜಿನಿಯರ್ ಒಬ್ಬ ಮೆಡಿಕಲ್ ಎಂಧರೆ ಎಲ್ಲಿ ಸೇವಿಂಗ್ಸ್ ಮಾಡುವುದಕ್ಕಾಗುತ್ತದೆ? ಇದು ಪ್ರಶ್ನೆ ಇರತಕ್ಕಂಥದ್ದು ನಾನು ಗೌರವಾನ್ವಿತ ಸದಸ್ಯರಿಗೆ ಏನು ಕೇಳುತ್ತಿದ್ದೇನೆಂದರೆ, let us sit together, we have certain suggestions.

Sri K.M. Ramesh Kumar : We totally endorse your views.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಂಟಗ್ರಿಟಿಯನ್ನು ಕ್ವೆಶ್ಚನ್ ಮಾಡುತ್ತಿಲ್ಲ. ಮುಖ್ಯಮಂತ್ರಿಗಳ ಕಮಿಟ್‌ಮೆಂಟ್ ಬಗ್ಗೆ ನಾನು ಪ್ರಶ್ನೆ ಮಾಡುತ್ತಿಲ್ಲ. ಈ ಸರ್ಕಾರವನ್ನು ನಾನು ದೂರುತ್ತಿಲ್ಲ. ನಾನು ಹೇಳಿದ್ದನ್ನು ನೀವು ಅರ್ಥ ಮಾಡಿಕೊಳ್ಳಲಿಲ್ಲ. ಐದಾರು ವರ್ಷದಿಂದ ಈ ಸಮಸ್ಯೆ ನೆನೆಗುದಿಗೆ ಬಿದ್ದಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿರುವುದು ಒಂದೇ ಒಂದು ಅದು ತಾಕತ್ತಿದ್ದರೆ! ಅಷ್ಟೆ. ಮಿಕ್ಕಿದ್ದೇನೂ ಇಲ್ಲ. ಇವರು ಹೇಳಿದ್ದೆಲ್ಲಾ ಕರೆಕ್ಟಾಗಿ ಹೇಳಿದ್ದಾರೆ. ಒಂದು ಹೇಳಿದರು ಅದು ತಾಕತ್ತಿದ್ದರೆ, ಅದರ ಬಗ್ಗೆ ಸರ್ಕಾರದಿಂದ ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಶ್ರೀ ವಾಟಾಳ್‌ನಾಗರಾಜ್ ರವರು ಬುದ್ಧಿವಂತರಿವರು. 1967ರಿಂದ ಈ ಹೌಸ್‌ನಲ್ಲಿ ಇರುವಂಥವರು. ಬಂಡತನ ಎಂದುಬಿಡುತ್ತಾರೆ, ನಿರ್ಲಜ್ಜತನ ಎಂದುಬಿಡುತ್ತಾರೆ, ನಿರ್ವೀರ್ಯರು ಎಂದುಬಿಡುತ್ತಾರೆ, ಅದರ ಅರ್ಥ ನಿಮಗಲ್ಲ ಎಂದುಬಿಡುತ್ತಾರೆ. ಹೀಗೆಲ್ಲಾ ಕೆಲವು ಸಂದರ್ಭದಲ್ಲಿ ಅವರು ಅಂದುಬಿಡುತ್ತಾರೆ.

ಶ್ರೀ ಬಸವರಾಜ ರಾಯರೆಡ್ಡಿ : ತಾಕತ್ತಿಗೆ ಏನಾದರೂ ಟಾನಿಕ್ ಇದ್ದರೆ ಕೊಡಿ ಅವರಿಗೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಟಾನಿಕ್ ತಯಾರು ಮಾಡುವವರು ನೀವೇ. ಈಗ ನೇರವಾಗಿ ವಿಚಾರಕ್ಕೆ ಬರುತ್ತೇನೆ. ಮಾನ್ಯ ಸಿಂಧ್ಯಾರವರು ಮಾತನಾಡುತ್ತಾ ಸಲಹೆ ಏನಿದೆ ಹೇಳಿ ಎಂದು ಹೇಳಿದರು. ನಾನು ಶ್ರೀ ರಮೇಶ್‌ಕುಮಾರ್‌ರವರು ಹೇಳಿದಂಥದ್ದನ್ನು ನಾನು ಒಪ್ಪುತ್ತೇನೆ. ನನಗಿಂತ ಹೆಚ್ಚು ಅನುಭವವುಳ್ಳವರು ಮತ್ತು ಆಡಳಿತ ನಡೆಸಿರತಕ್ಕಂಥವರು. ಮಾನ್ಯ ಸಿಂಧ್ಯಾರವರು ಮತ್ತು ನಾವು 1973ರ ರಾಜಕೀಯದಲ್ಲಿ ಜೊತೆ ಇದ್ದರೂ ಸಹ ಅಧಿಕಾರದಲ್ಲಿ ನೀನೇ ಹೆಚ್ಚಿನ ದಿವಸ ಇದ್ದಂಥವರು, ನಾವು ಅಧಿಕಾರಕ್ಕೆ ಬರಲೇ ಇಲ್ಲ. ಏನು ಮಾಡಿದರೆ ಸರಿಹೋಗುತ್ತದೆ ಎನ್ನುವ ಆ ಅನುಭವ ನಮಗಿಂತ ಹೆಚ್ಚಿಗೆ ನಿಮಗೇ ಇರಬೇಕು. ಏಕೆಂದರೆ ಸರ್ಕಾರ ನಡೆಸತಕ್ಕಂಥವರಿಗೆ ಎಲ್ಲರ ನರನಾಡಿಗಳ ಯಾವುದೋ ಒಂದು ರೂಪದಲ್ಲಿ ಯಾವುದೋ ಒಂದು ವಿಧಾನದಲ್ಲಿ ನಿಮ್ಮ ಕೈಯಲ್ಲಿರುತ್ತದೆ. ಯಾವ ಯಾವ ನರ, ಯಾವ ಯಾವ ಕೈಯ ಕೀಲಿ ಅನ್ನು ಎಲ್ಲೆಲ್ಲಿ ತಿರುಗಿಸಿದರೆ ಯಾರ್‍ಯಾರ ಹತ್ತಿರಕ್ಕೆ ಬರುತ್ತಾರೆನ್ನುವುದು ನಿಮಗೆ ಗೊತ್ತಿಗೆ. ಅದು ನಿಮಗೆ ಗೊತ್ತಿಲ್ಲದೇನೂ ಇಲ್ಲ.

ಗೊತ್ತಿದ್ದು ನಮ್ಮನ್ನು ಏಕೆ ನೀವು ಕೇಳುವುದಕ್ಕೆ ಬರುತ್ತೀರಿ. ಇಷ್ಟೆಲ್ಲಾ ಆದರೂ ಸಹ ನನ್ನ ಸಲಹೆ ಏನು ಹೇಳಿದ್ದೇನೆಂದರೆ, ನೀವು ಆ ಖಾಸಗಿ ಕಾಲೇಜುಗಳನ್ನು nationalize ಮಾಡಿ. ದುಡ್ಡು ಅವರದ್ದೇ ತೆಗೆದುಕೊಳ್ಳಿ.

ಶ್ರೀ ಎ. ಕೃಷ್ಣಪ್ಪ : ರಿಸೋರ್ಸಸ್ ಇಲ್ಲ. ಅವರು ಕಲೆಕ್ಷನ್ ಮಾಡಿದ ಹಾಗೆ ನಾವು ಕಲೆಕ್ಷನ್ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ರಿಸೋರ್ಸಸ್ ಅವರಿಗೆ ಎಲ್ಲಿಂದ ಬಂತು? ಅದನ್ನೇ ನೀವು ತೆಗೆದುಕೊಳ್ಳಿ. ಅವರು ಕಲೆಕ್ಷನ್ ಮಾಡಿದ ಹಾಗೆ ನೀವು ಮಾಡುವ ಅವಶ್ಯಕತೆಯೇ ಇಲ್ಲ. ಮಾನ್ಯ ಕೃಷ್ಣಪ್ಪನರು ಅರ್ಥ ಮಾಡಿಕೊಳ್ಳಬೇಕು. ಏಕೆಂದರೆ, ಖಾಸಗಿ ಕಾಲೇಜಿನವರು ಇವತ್ತು ಅದೇ Institution ಹೆಸರಿನಲ್ಲಿಯೇ crores together property ಮಾಡಿದ್ದಾರೆ. ಸರ್ಕಾರದವರು ಅಂದರೆ ನೀವೇ ಕೊಟ್ಟಿರತಕ್ಕಂಥ ಜಾಗದಲ್ಲಿ crores together property ಮಾಡಿದ್ದಾರೆ. ಅದನ್ನು ನೀವು ಏಕೆ confiscate ಮಾಡಬಾರದು? ಕಾನೂನು ತರಲಿ. ಏನಾಗುತ್ತದೆ ನೋಡೋಣ. ಸರ್ಕಾರ ಉರುಳುತ್ತಾ ಉರುಳಲಿ. ಜನರ ಮುಂದೆ ಹೋಗೋಣ, ಜನ ತೀರ್ಪು ಕೊಡಲಿ, ಇದು ನನ್ನ ಸಲಹೆ, ಅದೆಲ್ಲಾ ಮಾನ್ಯ ಸಿಂಧ್ಯಾರವರಿಗೆ ಗೊತ್ತಿದೆ. ಟ್ರಾನ್ಸ್‌ಪೋರ್ಟ್‌ನ್ನು nationalize ಮಾಡಿದಿರಿ, ಬ್ಯಾಂಕುಗಳಲ್ಲಿ nationalize ಮಾಡಿದ್ದು ಇದೆಲ್ಲಾ ಅನುಭವ ಕಾಂಗ್ರೆಸ್ ಪಕ್ಷಕ್ಕೆ ಇದೆ. ಅದರ ಅನುಭವ ಇಲ್ಲವೆಂದಲ್ಲ. Actually ಲೆಕ್ಕಹಾಕಿದರೆ ನೀವು ನಮ್ಮಿಂದ ಅನುಭವವನ್ನು ಕೇಳಬೇಕಾದಂಥ ಅವಶ್ಯಕತೆ ಇಲ್ಲ.

(ಈ ಹಂತದಲ್ಲಿ ಅಧ್ಯಕ್ಷರ ಪೀಠವನ್ನು ಶ್ರೀ ಡಿ.ಆರ್. ಪಾಟೀಲ್ ಅಲಂಕರಿಸಿದರು)

ನಾನು ಇಲ್ಲಿ ಮಾನ್ಯ ಮುಖ್ಯಮಂತ್ರಿಗಳ ಕಮಿಟ್‌ಮೆಂಟ್‌ನ್ನು ಪ್ರಶ್ನೆ ಮಾಡುತ್ತಿಲ್ಲ. ಮಾನ್ಯ ಸಿಂಧ್ಯಾರವರ ಕಮಿಟ್‌ಮೆಂಟ್‌ನ್ನೂ ಸಹ ಕ್ವೆಶ್ಚನ್ ಮಾಡುತ್ತಿಲ್ಲ, ಸತತವಾಗಿ ನಾವೆಲ್ಲರೂ ಒಂದೇ ವರ್ಗದ ಜನರ ಹಿತವನ್ನು ಬಯಸಿಕೊಂಡೇ ರಾಜಕೀಯ ಮಾಡಿಕೊಂಡು ಬಂದಿರತಕ್ಕಂಥವರು. ಅದರಲ್ಲಿ ಅನುಮಾನ ಇಲ್ಲ. ಆದರೆ ಇವತ್ತು ಇದು ನಮ್ಮ ಮುಂದೆ ದೊಡ್ಡ ಸವಾಲಾಗಿ ನಿಂತಿದೆ. ಈ ಸಮಸ್ಯೆ ಪರಿಹಾರವಾಗಬೇಕಾದರೆ ಇಂಥದ್ದರಲ್ಲಿ ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಬೇಕೆಂದು ನಾವು ಹೇಳುತ್ತಿದ್ದೇವೆ. ಯಾವ ರೀತಿಯಲ್ಲಿ ಇಚ್ಛಾಶಕ್ತಿಯನ್ನು ತೋರಿಸಬೇಕೆನ್ನುವುದು ಅದು ನಿಮಗೆ

4.10 ಪಿಎಂ.

ಬಿಟ್ಟಂಥ ವಿಚಾರ. ಹಾಗಾಗಿ ಈ ಸದನದಲ್ಲಿ ನಾವೆಲ್ಲಾ ಸೇರಿ unanimous ಆಗಿ ಒಂದು resolution ಮಾಡೋಣ. ಅದಕ್ಕೆ ನಮ್ಮೆಲ್ಲರ ಬೆಂಬಲ ಇದೆ. ಆ unanimous resolution ಮಾಡಿ 75:25ಕ್ಕೆ ಒಪ್ಪಿಕೊಳ್ಳಬೇಕು ಇಲ್ಲದಿದ್ದರೆ ಬಿಟ್ಟುಬಿಡಿ Management ನವರಿಗೆ ಹೇಳೋಣ. ಆ ಮೇಲೆ ಮುಂದೆ ಏನಾಗುತ್ತದೋ ನೋಡೋಣ. ಆದ್ದರಿಂದ ಇದಕ್ಕೆ ಕೊನೆ ಹಾಡಬೇಕು. ಏಕೆಂದರೆ ಇದು ಐದಾರು ವರ್ಷದಿಂದ ಮುಂದುವರಿದುಕೊಂಡು ಬರುತ್ತಿದೆ. ಪ್ರತಿ ವರ್ಷ ಮಕ್ಕಳು ಶಾಲೆಗೆ ಸೇರತಕ್ಕಂಥ ಸಂದರ್ಭದಲ್ಲಿ ಅವರ ತಂದೆತಾಯಿಗಳ ಬಿ.ಪಿ. ಜಾಸ್ತಿಯಾಗುತ್ತದೆ. ಯಾವ ಶಾಲೆಗೆ ಸೇರಿಸಬೇಕು. ಯಾವ ಕಾಲೇಜಿಗೆ ಸೇರಿಸಬೇಕು. ಸಿ.ಇ.ಟಿ. ಕೌನ್ಸಿಲ್ ರದ್ದು ಎಂದು ಹೇಳುತ್ತಾರೆ, ಮತ್ತೆ ಮಾಡಿ ಎಂದು ಹೇಳುತ್ತಾರೆ. ಮತ್ತೆ ಇನ್ನೊಂದು ಎಂದು ಹೇಳುತ್ತಾರೆ, ಟೈಮ್ ಆಗಿಹೋಗಿಬಿಟ್ಟಿದೆ, ಕಾಲೇಜು ಅಡ್ಮಿಷನ್ಸ್ ಸಿಗುತ್ತಿಲ್ಲ. ಬೇರೆ ಇನ್ನು alternative ಇಲ್ಲ, ಏನು ಮಾಡುವುದು ಎಂದು ಪೋಷಕರಿಗೆ

ದಿಕ್ಕು ತೋಚುತ್ತಿಲ್ಲ. ಆದ್ದರಿಂದ ಈ ವರ್ಷದಿಂದಲಾದರೂ ಇದಕ್ಕೆ ಮಂಗಳ ಹಾಡಬೇಕು, ಇನ್ನು ಮುಂದೆ ಇಂಥ ಗೊಂದಲಕ್ಕೆ ಅವಕಾಶ ಮಾಡಿಕೊಡಬಾರದೆಂದು ವಿನಂತಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† **ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್)** : ಮಾನ್ಯ ಛೇರ್ಮನ್‌ರವರೆ, ನಾನು ಈಗ ಎಲ್ಲರೂ ಹೇಳಿದ ಪುರಾಣ ಕಥೆಗಳನ್ನು ಹೇಳುವುದಿಲ್ಲ. Everybody knows what is CET? At present what we have to do? ಒಂದು ವಿಚಾರ ನಾನು ಹೇಳುತ್ತೇನೆ, ದಯವಿಟ್ಟು ಯಾರೂ ತಪ್ಪು ತಿಳಿದುಕೊಳ್ಳಬಾರದು.

ಶ್ರೀ ಎಸ್.ಎಸ್. ಪಾಟೀಲ್ : ನಾವು ಮಾತನಾಡುವುದು ಇವರಿಗೆ ಎಲ್ಲಾ ಪುರಾಣ ಕಥೆಗಳೇ!

ಶ್ರೀ ಎಸ್. ರಾಜೇಂದ್ರನ್ : ಅದೇನೋ, ನಾನು ಯಾವಾಗಲೂ ಮಾತನಾಡುವುದಕ್ಕೆ ಎದ್ದು ನಿಂತಾಗ ನಿಮಗೆ ಖುಷಿ. ಆವಾಗಲೇ ನೀವು ಬಾಯಿ ಓಪನ್ ಮಾಡುವುದು. ಅದು ಏತಕ್ಕೆ ಎನ್ನುವುದು ನನಗೆ ಗೊತ್ತಿಲ್ಲ. ನೀವು ಹೇಳಿದಿರಿ ನಾವೆಲ್ಲಾ ಸೇರಿ ಬೆಂಬಲ ಮಾಡಿ universally joined together we will come to a conclusion. ಎಂದು. ಈ private management ಗಳಿಗೆ ಎರಡು ಕೊಂಬುಗಳು ಇರುವ ತರಹ ಈ Minister ಗಳಿಗೆ ಅಷ್ಟು power ಇರುವುದಿಲ್ಲ. I.A.S. Officers bureaucrats ಗೆ ಅಷ್ಟು ಪವರ್ ಇರುವುದಿಲ್ಲ. ಇದಕ್ಕೆ ಏನು ಕಾರಣವೆಂದರೆ, ಯಾರಾದರೂ ಒಬ್ಬರು ಶಿಫಾರಸ್ಸು ಮಾಡಿ ಒಂದು ಮೆಡಿಕಲ್ ಕಾಲೇಜು ಸೀಟು ಫ್ರೀ ಅಥವಾ ಇಂಜಿನಿಯರಿಂಗ್ ಕಾಲೇಜು ಸೀಟು ಫ್ರೀ ಎಂದು ತೆಗೆದುಕೊಂಡರೆ ಅವನೇ ಚೀಫ್ ಮಿನಿಸ್ಟರ್ ಹಾಗೆ ಮಾತನಾಡುತ್ತಾನೆ. ನಾವು ಬಂದು ನಮ್ಮ ಮಂತ್ರಿ ಹತ್ತಿರ ಸ್ವಾಮಿ, ಅವನು ಹೀಗೆ ಮಾಡುತ್ತಾನೆಂದು ಹೇಳಿದರೆ ನೋಡೋಣ ನೋಡೋಣ, ಅದರ ಬಗ್ಗೆ ವಿಚಾರಿಸೋಣ ಎಂದು ಹೇಳುತ್ತಾರೆ. Because of your lenience they have taken advantage. Infrastructure ಎಲ್ಲಿ ಎಂದು ತಾವು ಹೇಳಿದಿರಿ. For example: Golden Valley Education Society. For them 30 acres of land have been given free of cost. Vehicles, buildings and infrastructure have been provided to them and BGML's Employees have contributed their salary for it. ಇವತ್ತು ಹೋಗಿ ಮಕ್ಕಳ ಸೀಟು ಕೇಳಿದರೆ ಜೈನ್ ಕಾಲೇಜಿನಲ್ಲಿ 8 ಸಾವಿರ ರೂ.ಗಳನ್ನು ಕಟ್ಟಬೇಕಾಗುತ್ತದೆ. ನನಗೆ ಎರಡು ಸಾವಿರ ಕೊಡುವುದಕ್ಕಾಗುವುದಿಲ್ಲವೇ 3 ಸಾವಿರ ರೂಪಾಯಿಗಳನ್ನು ಕೊಡುವುದಕ್ಕಾಗುವುದಿಲ್ಲವೆ ಎಂದು ಕೇಳುತ್ತಾರೆ. I have brought it to the notice of the minister. Golder Valeey Education is a grant-in-aid management, not only private, ಅವರಿಗೆ ಎಷ್ಟು ಕೊಬ್ಬು ಇರಬಹುದು! ಮಂತ್ರಿ ಲೆಟರ್ ಕೊಟ್ಟರೆ ನಾನು ಕೇರ್ ಮಾಡುವುದಿಲ್ಲ, ಮೂರು ಸಾವಿರ ರೂ ಕೊಟ್ಟರೆ ಸೀಟು ಕೊಡುತ್ತೇನೆ ಇಲ್ಲದಿದ್ದರೆ ಕೊಡುವುದಿಲ್ಲ ಎಂದು ಅವನು ಇವತ್ತು ಹೇಳುತ್ತಾನೆ. What action the minister will take? ಈಗ ನಾನು ಕೇಳಿದರೆ ಹೋಗಿ ವಿಚಾರಣೆ ಮಾಡಿಕೊಂಡು ಬನ್ನಿ ಎಂದು ಇವರು ಒಂದು ಟೀಮ್ ಅನ್ನು ಕಳುಹಿಸುತ್ತಾರೆ. ಈ ಮಹಾರಾಜರುಗಳು ಅಲ್ಲಿಗೆ ಹೋದ ತಕ್ಷಣ ಇವರಿಗೆ ಒಳ್ಳೆಯ ಊಟ, ಕುಳಿತುಕೊಂಡು ಹೋಗುವುದಕ್ಕೆ

ಕಾರು ಕೊಟ್ಟ ತಕ್ಷಣ ಇವರು ಮಹಾರಾಜರುಗಳಾಗಿ' ಕಾನೂನು ಪ್ರಕಾರ ಎಲ್ಲಾ ಸರಿ ಇದೆ ಸರ್' ಎಂದು ಇವರು ಮಂತ್ರಿಗಳಿಗೆ ಹೇಳುತ್ತಾರೆ. Your official machinery is playing a vital role by just giving deep pain to the people and students. ನಮಗೆ ಏನು ನೋವು ಆಗುತ್ತದೆಂದರೆ, ನಾವು ಶಾಸಕರು when we try to bring to your notice, can't you honour our word? ನಿಮಗೆ ಏನಾದರೂ no confidence motion ಬಂದರೆ ನಾವು ಓಟು ಹಾಕಬೇಕಾ? ನಿಮಗೇನಾದರೂ problem ಬಂಧರೆ ನಾವು ನಿಮ್ಮ ಜೊತೆಗೆ ಇರಬೇಕೇ? Management ಗೆ problem ಬಂದರೆ ನೀವು ಅವರ ಜೊತೆಗೆ ಹೋದರೆ who will respect you? Nobody will respect you. They will go Supreme Court and even International Court because of your leniency. So, first change yourselves, make your mind free and then come to a conclusion. ಅವರನ್ನು ಹೇಗೆ ಅಟ್ಯಾಕ್ ಮಾಡಬೇಕು ನಾವು ಎಂಬ ಬಗ್ಗೆ ಯೋಚನೆ ಮಾಡಬೇಕು. ನೀನು ಅಟ್ಯಾಕ್ ಮಾಡಬೇಕು, ನಾವು ನಿಮ್ಮ ಜೊತೆಯಲ್ಲಿಯೇ ಇರುತ್ತೇವೆ, ನಾವು ನೀವು ಸೇರಿ ಮಾತನಾಡೋಣ, Management ಗೆ ಇನ್ನು ಹದಿನೈದು ದಿವಸ ಮುಂದೆ ಹೋಗಲಿ ಆ ಮೇಲೆ ಸರಿಹೋಗುತ್ತದೆ. ಶ್ರೀ ರಮೇಶ್‌ಕುಮಾರ್‌ರವರು ಒಂದು ಮಾತನ್ನು ಹೇಳಿದರು. ಶ್ರೀ ಮಂಜುನಾಥ್‌ರವರು ಉನ್ನತ ಶಿಕ್ಷಣ ಮಂತ್ರಿ ಆಗಿರುವುದರಿಂದ ನನಗೆ ಬಹಳ ಹೆಮ್ಮೆ ಎಂದು. Why ಹೆಮ್ಮೆ? Have you not studied, have you not got promotion? Somebody will get promotion without writing IAS. When an SC man has studied A for apple, the highest forward general group like Lingayat, Brahamin or whoever it may be they also have studied `A for Apple. ಅವರಿಗೇನೂ A for B ಎಂದು ಯಾರೂ ಹೇಳುವುದಿಲ್ಲ. So you are keeping quiet. These are all the things you must think deeply. ಈಗ ನೀವು ಒಬ್ಬ Scheduled Caste I.A.S. Officer ಅನ್ನು ನೋಡಿ ನನಗೆ ಬಹಳ ಹೆಮ್ಮೆ ಎಂದು ಹೇಳಿದರೆ What is the reason, why he has to tell like that? Scheduled Caste ನವರು ಓದುವುದಿಲ್ಲವೇನು? That is not the stand. Since you are an eduction minister, what caste you belonged is not the question. ಒಂದು ಪ್ರೈವೇಟ್ ಮ್ಯಾನೇಜ್‌ಮೆಂಟ್ ಎಕ್ಸಾಮ್‌ಪಲ್ ಏತಕ್ಕೆ ಕೊಡುತ್ತೇವೆ ಎಂದರೆ, through out the State how much pain they have given to the down-trodden people, the minorities and the SC/STs, ಇದರ ಮೇಲೆ ತಾವು ಕ್ರಮ ತೆಗೆದುಕೊಳ್ಳಲೇಬೇಕು. ನೀವೇನು ಮಾಡುತ್ತೀರೆಂದರೆ ನಾನೊಂದು ಅರ್ಜಿ ಕೊಟ್ಟರೆ, ಅವರು ಕೇರ್ ಮಾಡುವುದಿಲ್ಲ. ನೀವು ಕ್ರಮ ತೆಗೆದುಕೊಳ್ಳಬೇಕು. What is the action? Still they are collecting three thousand rupees. You are not believing me as a legislator from my constituency. Is it a waste thing I am bringing to your notice or I am black-mailing him? They are all rogues, rowdies who are holding the photos and slates. That kind of fellows are trust members.

The Deputy Commissioner is a trust member. Has he interfered? Because I studied in that college. I know the pain. My father was not able to pay ten rupees. ಒಂದು ನಿಮಿಷ ಕೇಳಿ. ಗ್ರಾಂಟ್-ಇನ್-ಏಡ್ ಕಾಲೇಜ್ ಪ್ಲಸ್ ಪ್ರೈವೇಟ್ ಕಾಲೇಜ್.

ಶ್ರೀ ಎಸ್.ಎಸ್. ಪಾಟೀಲ್ : ನಿಜವಾಗಿ ಅವರು ಹೇಳುವ ಮಾತು, ಅದೂ ಏಡೆಡ್ ಕಾಲೇಜ್‌ನವರು ಇದನ್ನು ಮಾಡಿದರೆ ಹೇಗೆ? ನೀವು ಸುಮ್ಮನಿದ್ದರೆ ಹೇಗೆ? ಆಕ್ಷನ್ ತೆಗೆದುಕೊಳ್ಳಿ ಎನ್ನುತ್ತಿದ್ದಾರಲ್ಲಾ.

ಶ್ರೀ ಎಸ್. ರಾಜೇಂದ್ರನ್ : ನಿನ್ನೆ Yesterday, about 4 or 5 students stil they have not joined the college. You may put an administrator please.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, The Chairman of the Managing Committee came, explained everything and I have taken action. I am repeatedly telling him, if you again start this, I am going to stop the aid.

Sri S. Rajendran : Repeatedly you have to tell this for another five years also. No doubt, I know very well. I know the Management President,

ಶ್ರೀ ಎಸ್.ಎಸ್. ಪಾಟೀಲ್ : ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿಸುತ್ತೇನೆ, ದಯವಿಟ್ಟು, ಈಗ ಹೈಯರ್ ಎಜುಕೇಷನ್‌ಗೆ 10 ಪರ್ಸೆಂಟ್ ಕಡಿಮೆ ಮಾಡಲು ಹೊರಟ್ಟಿದ್ದೀರಲ್ಲಾ, ಯಾರು ಡೊನೇಷನ್ ತೆಗೆದುಕೊಳ್ಳುತ್ತಾರೆ, ಇವರಿಗೆ ಏಡ ನಿಲ್ಲಿಸಿ. ಇಡೀ ರಾಜ್ಯದ ತುಂಬಾ ಇದು ಇವೆ. ಸಿಟಿಯಲ್ಲೂ ಎಷ್ಟು ಬೇಕಾದರೂ ಡೊನೇಷನ್ ತೆಗೆದುಕೊಂಡು ಮತ್ತೆ ಸರ್ಕಾರದಿಂದ ಏಡ್ ತೆಗೆದುಕೊಳ್ಳುತ್ತಾರೆ. ಏಡ್ ತೆಗೆದುಕೊಂಡವರಿಗೇಕೆ ಅದನ್ನು ಕೊಡಬೇಕು?

ಶ್ರೀ ಎಸ್. ರಾಜೇಂದ್ರನ್ : ಅಂಥ ಕಾಲೇಜಿನಲ್ಲಿ ಸಿ.ಇ.ಟಿ. ಕೊಟ್ಟರು. ಎಂಟ್ರೆನ್ಸ್ ಎಗ್ಸಾಮ್ 4-5 ವರ್ಷ ಎಂಟ್ರೆನ್ಸ್ ಎಗ್ಸಾಮ್ ಕೊಟ್ಟರು. ಎಷ್ಟು ಧೈರ್ಯವೆಂದರೆ, ಕ್ವಿಜ್ ಟೈಪ್ ಮಾಡುತ್ತಾರೆ. ಟಿಕ್ ಮಾಡುವುದು. 20 ಸಾವಿರ ರೂಪಾಯಿ ಕೊಟ್ಟರೆ 20 ಕ್ವೊಶ್ಚನ್ ಟಿಕ್. 30 ಸಾವಿರ ರೂಪಾಯಿ ಕೊಟ್ಟರೆ 30 ಕ್ವೊಶ್ಚನ್ ಟಿಕ್ ಮಾಡುವುದು. They have earned crores of rupees. ಇಲ್ಲಿ ಬಂದರೆ ಮೆಡಿಕಲ್ ಸೀಟಿಗೆ 20 ಲಕ್ಷ ರೂಪಾಯಿ ಕೊಡಬೇಕು. ಅವನೂ ಸಹ 50 ಸಾವಿರ ರೂಪಾಯಿ ಕೊಟ್ಟರೆ 50 ಕ್ವೊಶ್ಚನ್ ಟಿಕ್ ಮಾಡುತ್ತಾನೆ. ಬರೀ ಟಿಕ್ ಹೇಳಿದರೆ ಸಾಕು. ಸಿಇಟಿಯಲ್ಲಿ ಅಂಥ ಲೂಟಿ ಮಾಡಿರುವ ಮ್ಯಾನೇಜ್‌ಮೆಂಟ್ ಇದೆ. No asker, no teller. ಕೇಳಿದರೆ, ನಾನು ಐಎಎಸ್ ಎಂದು ಹೇಳುತ್ತಾರೆ. ರಿಟೈರ್ಡ್ ಐಎಎಸ್. ಐಎಎಸ್ ಎಲ್ಲಿ ಓದಿದ್ದಾರೆ? ಓದಿಲ್ಲ. Is he a promotee? He is just a B.Sc. He is a Ph.D. doctorate. What a joke? It is Golden Valley Education. ನಾವು ಆ ಕಾಲೇಜಿಗೆ, ಇಂಜಿನಿಯರಿಂಗ್ ಕಾಲೇಜ್‌ಗೆ ಬಿಜಿಎಂಎಲ್ ಜನ......

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ) : ಇದು ಸಿಇಟಿಗೆ ಸಂಬಂಧಪಟ್ಟ ವಿಚಾರವೋ ಅಥವಾ.... ಅವರ ಮಾತನ್ನ ನನಗೆ ಅರ್ಥ ಮಾಡಿಕೊಳ್ಳುವುದಕ್ಕೆ ಆಗುತ್ತಿಲ್ಲ. ಅದಕ್ಕೆ ದಯವಿಟ್ಟು, ಯಾವುದರ ಬಗ್ಗೆ ಮಾತನಾಡುತ್ತಿದ್ದಾರೆಂಬುದನ್ನು ಹೇಳಬೇಕು.

ಶ್ರೀ ಡಿ. ಮಂಜುನಾಥ್ : ಯಾವುದೋ ಒಂದು ಏಡೆಡ್ ಪ್ರೈವೇಟ್ ಕಾಲೇಜ್ ಬಗ್ಗೆ ಹೇಳುತ್ತಿದ್ದಾರೆ. ಕೆಜಿಎಫ್‌ನಲ್ಲಿರುವ ಪ್ರೈವೇಟ್ ಕಾಲೇಜ್ ಬಗ್ಗೆ ಮಾತನಾಡುತ್ತಿದ್ದಾರೆ. ಅವರಿಗೆ ನಾವು ಈಗ ಷೋಕಾಶ್ ನೋಟೀಸ್ ಇಷ್ಯೂ ಮಾಡಿದ್ದೇವೆ. ನಾನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ, ಇವರು ಆ ಕಾಲೇಜ್ ಬಗ್ಗೆ ನನಗೊಂದು ಪತ್ರ ಕೊಟ್ಟರು. ಅಲ್ಲಿ ಎಗ್ಸಾಹಾರ್ಬಿಟೆಂಟ್ ಫೀಸ್ ಕಲೆಕ್ಟ್ ಮಾಡುತ್ತಿದ್ದಾರೆಂದು ಹೇಳಿದರು. ನಾವು ಅದಕ್ಕೆ ಅಪಾರ್ಚುನಿಟಿ ಕೊಡಬೇಕಲ್ಲವೇ? ಅದಕ್ಕೆ ಅವರಿಗೆ ಷೋಕಾಶ್ ನೋಟೀಸ್ ಇಷ್ಯೂ ಮಾಡಿದ್ದೇವೆ. ಮೊದಲು ಅದನ್ನು ಎಕ್ಸ್‌ಪ್ಲೈನ್ ಮಾಡಿ ಹೇಳಿದ್ದಾರೆ. ಮುಂದೆ ಅವರಿಗೆ ಗ್ರಾಂಟ್ ನಿಲ್ಲಿಸುತ್ತೇವೆ.

ಶ್ರೀ ಎಸ್. ರಾಜೇಂದ್ರನ್ : ನಾನು ಎಕ್ಸ್‌ಪ್ಲನ್ ಮಾಡುತ್ತೇನೆ.

ಛೇರ್ಮನ್ : ಮಾನ್ಯ ರಾಜೇಂದ್ರನ್‌ರವರೆ, 2 ನಿಮಿಷದಲ್ಲಿ ಕ್ಲೋಸ್ ಮಾಡಿ.

ಶ್ರೀ ಡಿ. ಮಂಜುನಾಥ್ : ಇವತ್ತು ಚರ್ಚೆಯಾಗುತ್ತಿರುವುದು ನಿಲುವಳಿ ಸೂಚನೆ ಬಗ್ಗೆ. ಪ್ರೈವೇಟ್ ಕಾಲೇಜೊಂದರ ಬಗ್ಗೆ ಅಲ್ಲ. ಪ್ರೈವೇಟ್ ಕಾಲೇಜ್ ಬಗ್ಗೆ ಸಪರೇಟಾಗಿ ಮಾತನಾಡೋಣ. ಇವತ್ತಿನ ದಿವಸ ಸಿಇಟಿ ಬಗ್ಗೆ ಮಾತನಾಡುತ್ತಿದ್ದಾರೆ. ಅದರ ಬಗ್ಗೆ ಹೇಳಿ.

ಶ್ರೀ ಎಸ್. ರಾಜೇಂದ್ರನ್ : ನಾನು ಎಗ್ಸಾಂಪಲ್ ಹೇಳಿದೆ. ಸಿಇಟಿ ಯಲ್ಲಿ ಪ್ರೈವೇಟ್ ಕಾಲೇಜ್‌ನವರು 50:50 ಎನ್ನುತ್ತಾರೆ. ತಾವು 75:25 ಎಂದು ಏನು ಹೇಳುತ್ತೀರಿ, ಅದಕ್ಕೆ ನಾನು ಪೂರ್ಣ ಬೆಂಬಲ ಕೊಡುತ್ತೇನೆ. ಮ್ಯಾನೇಜ್‌ಮೆಂಟ್‌ಗೆ ಎಷ್ಟು ಅರೋಗೆನ್ಸ್ ಇದೆ ಎಂಬ ಬಗ್ಗೆ ಎಗ್ಸಾಂಪಲ್ ಕೊಡುತ್ತೇನೆ. I am bringing to your notice the CET problem only. The same management is having engineering college and even a law college. It comes under the purview of CET. ಎಷ್ಟು ಕೊಬ್ಬು ಬರುತ್ತದೆಂಬ ಬಗ್ಗೆ ಎಗ್ಸಾಂಪಲ್ ಏಕೆ ಕೊಟ್ಟೆ ನೀವೇ ಒಂದು ಸಜೆಷನ್ ಕೊಡಿ. ನಾವೆಲ್ಲಾ ಸೇರಿ ಮಾಡೋಣ ಅಂತ ಹೇಳಿದಿರಿ. ಸಜೆಷನ್ ಕೊಡುವುದಕ್ಕೆ ನಮ್ಮ ಕಡೆ ಇಲ್ಲ. ನಾವು ಸಜೆಷನ್ ಕೊಟ್ಟರೆ, ಅವರಿಗೆ ನೀವು ಬೆಂಬಲ, ಸಹಾಯ, ಸಪೋರ್ಟ್ ಮಡುತ್ತೀರಿ ಎಂದು ಹೇಳುತ್ತೀರಿ. This is one example which I have given. ಈಗ ತಾವು. ಶ್ರೀರಾಮರೆಡ್ಡಿಯವರು ಹೇಳುವ ಟೈಂನಲ್ಲಿ ಸಜೆಷನ್ ಕೊಡಿ ಎಂದು ಹೇಳಿದಿರಿ. If you really have guts.... ಕೋರ್ಟಿಗೆ ಹೋಗಲಿ ನೋಡೋಣ. Court is not superior in this country. The President is superior. You can bring it to the notice of the President also, no problem. Nobody can deny. ಯಾವನೋ ಒಬ್ಬ ಅಕ್ಯೂಸ್ಡರಗೆ ಹ್ಯಾಂಗ್‌ಗೆ ಸುಪ್ರೀಂಕೋರ್ಟ್ ಆರ್ಡರ್ ಕೊಟ್ಟಿತು. An ordinary person has written a letter to stop his hanging. ಒಂದು ಎಗ್ಸಾಂಪಲ್ ಹೇಳುತ್ತೇನೆ. ಆದುದರಿಂದ, ಸಿಇಟಿಯಲ್ಲಿ ಮಾಡಿರುವ ಅನ್ಯಾಯಗಳೂ, CET is not only for private institutions but also for grant-in-aid institutions. ಅವರ ಜೊತೆಗೆ ಮ್ಯಾನೇಜ್‌ಮೆಂಟ್ ಗ್ರಾಂಟ್ ಇನ್ ಏಡ್ ಇಟ್ಟುಕೊಂಡಿದ್ದಾರೆ. ಅದೂ ಇದೆ, ಇದೂ ಇದೆ. You

make it 75:25. We will support you. This I am bringing to your notice. ಮತ್ತೆ ಹೇಗೆ? ಆಫೀಸಿಗೆ ಹೋದರೆ ಅವರು 100 ಜನ ಇದ್ದಾರೆ. ನಾವು ಹೇಳುವುದಕ್ಕಾಗುವುದಿಲ್ಲ. ನಾವು ಶಾಸಕರು, ತಿಂಗಳುಗಟ್ಟಲೆ ಕಾಯುತ್ತಾ ಇರುವುದಕ್ಕಾಗುವುದಿಲ್ಲ. Whatever it may be you make it 75:25.

Mr. Chairman : You complete it within 2 minutes.

ಶ್ರೀ ಎಸ್. ರಾಜೇಂದ್ರನ್ : ನಮಗೆ ನೋವಾಗುತ್ತದೆ. ನಿಜ ಹೇಳಿದರೆ ಅವರು ಅವಕಾಶ ಕೊಡುವುದಿಲ್ಲ. ಏನೋ ಕತೆ ಹೇಳಿಕೊಂಡಿದ್ದರೆ ಸುಮ್ಮನಿರುತ್ತಾರೆ. You make it 75:25 ನನಗೆ ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರೆ, I am thankful to you.

† **ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) :** ಅಧ್ಯಕ್ಷರೆ, ನನಗೀಗ ನಾನು ಯಾವ ಸಬ್ಜೆಕ್ಟ್ ಮೇಲೆ ಮಾತನಾಡಬೇಕೆಂಬ ಬಗ್ಗೆ ಕನ್‌ಫ್ಯೂಸ್ ಆಗಿದೆ. ರಿಫ್ರೆಶ್ ಮಾಡಿಕೊಳ್ಳಬೇಕಾಯಿತು. ಸಿಇಟಿ ಬಗ್ಗೆ ಚರ್ಚೆ ಮಾಡುತ್ತಾ, ಇವರು ಕೆಜಿಎಫ್ ಸಮಸ್ಯೆಗೆ ಹೋದರು. ಅದರ ಬಗ್ಗೆ ವಾಪಸ್ ಬರಲು ಪ್ರಯತ್ನಿಸುತ್ತೇನೆ. ಮೆಡಿಕಲ್, ಇಂಜಿನಿಯರಿಂಗ್ ವ್ಯವಸ್ಥೆಯಲ್ಲಿ ಕ್ಯಾಪಿಟೇಷನ್ ಫೀಸ್ ಪ್ರಾರಂಭ ಮಾಡಿದ ಕ್ರೆಡಿಟ್ ನಮ್ಮ ಜಿಲ್ಲೆಗೆ ಹೋಗಬೇಕು. ನಾವೇ ಅದನ್ನು ಪ್ರಾರಂಭ ಮಾಡಿದ್ದೇವೆ. ನಂತರ, ರಾಜ್ಯಕ್ಕೆ, ದೇಶಾದ್ಯಂತ ಹರಡಿದೆ. ಮಧ್ಯದಲ್ಲಿ ಕ್ಯಾಪಿಟೇಷನ್ ತೆಗೆಯಲಿಕ್ಕೋಸ್ಕರ ಮಾನ್ಯ ವೆಂಕಟಸುಬ್ಬಯ್ಯನವರು ಗೌರ್ನರ್ ಇದ್ದಾಗ, ಫೀ ಸ್ಟ್ರಕ್ಚರ್ ಹೈಕ್ ಮಾಡಿ, ಕ್ಯಾಪಿಟೇಷನ್ ತೆಗೆಯಲಿಕ್ಕೆ ಮಾಡಿದರು. ನಂತರ, ಕ್ಯಾಪಿಟೇಷನ್ ಉಳಿಯಿತು, ಫೀ ಸ್ಟ್ರಕ್ಚರ್ ಜಾಸ್ತಿಯಾಯಿತು. ಇವತ್ತು ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರು, ಯಾವ ರೀತಿಯಾಗಿದೆ ಎಂದರೆ, ಲಿಕ್ಕರ್ ಲಾಬಿ ಇದೆ, ಲ್ಯಾಂಡ್ ಲಾಬಿ ಇದೆ, ರಿಯಲ್ ಎಸ್ಟೇಟ್ ಲಾಬಿ ಇದೆ. ಕಾರ್ಪೋರೇಟ್ ಸೆಕ್ಟಾರ್ ಲಾಬಿ ಇದೆ. ಎಜುಕೇಷನ್ ಲಾಬಿ ಇನ್ನೊಂದಾಗಿದೆ. ಇವರು ಅಂದರೆ ಕಾರ್ಪೋರೇಟ್ ಸೆಕ್ಟಾರ್‌ನವರು ಯಾವ ತರಹ ಕಂಟ್ರೋಲ್ ಮಾಡುತ್ತಿದ್ದಾರೆ, ಲಿಕ್ಕರ್ ಲಾಬಿಯವರು ಯಾವ ರೀತಿ ಕಂಟ್ರೋಲ್ ಮಾಡುತ್ತಿದ್ದಾರೆ. ಇವರು ಸಹ ಸರ್ಕಾರವನ್ನು ಕಂಟ್ರೋಲ್ ಮಾಡಲು ಬರುತ್ತಾರೆ. ನ್ಯಾಷನಲೈಸ್ ಮಾಡುವ ಬಗ್ಗೆ ಚರ್ಚೆಯಾಯಿತು. ಏಕೆಂದರೆ, ಬ್ಯಾಂಕ್ ನ್ಯಾಷನಲೈಸ್ ಆದಾಗ, ಟ್ರಾನ್ಸ್ ಪೋರ್ಟ್ ವ್ಯವಸ್ಥೆಯನ್ನು ನ್ಯಾಷನಲೈಜ್ಡ್ ಮಾಡಿದಾಗ, ದೇವರಾಜ ಅರಸುರವರು ಭೂ ಸ್ವಾಧೀನ ಮಸೂದೆ ಜಾರಿಗೆ ತಂದಾಗ, ಇದನ್ನು ಮಾಡಲು ಸಾಧ್ಯವಿದೆ. ಏಕೆ ಹೇಳುತ್ತೇನೆಂದರೆ, ಈ ಕಾಲೇಜ್‌ನವರು ಪ್ರತಿಯೊಬ್ಬರೂ ಪ್ರಾರಂಭ ಮಾಡಿದಾಗ ಸರ್ಕಾರಿ ಆಸ್ಪತ್ರೆ ತೆಗೆದುಕೊಂಡಿದ್ದು, ಉಪಯೋಗ ಮಾಡುವಂಥಾದ್ದು. ಅವರದೇ ಆದ ಆಸ್ಪತ್ರೆ ಪ್ರಾರಂಭ ಮಾಡಿ, ಕಾಲೇಜು ಪ್ರಾರಂಭ ಮಾಡಲಿಲ್ಲ. ಸರ್ಕಾರದಿಂದ ಜಾಗ ಪಡೆದುಕೊಂಡು ಇವರು ಕಾಲೇಜನ್ನು ಪ್ರಾರಂಭಿಸಿದ್ದಾರೆ. ಎಲ್ಲರ ಬಗ್ಗೆ ನಾನು ಮಾತನಾಡಲಿಕ್ಕೆ ಹೋಗುವುದಿಲ್ಲ. ಕೆಲವರು ಅಡ್ಮಿಷನ್ ಮಾಡಿಕೊಂಡವರೂ ಇದ್ದಾರೆ. ಅವರನ್ನು ಹೊರತುಪಡಿಸಿ ನಾನು ಹೇಳಲಿಚ್ಛಿಸುತ್ತೇನೆ. ಕೆಲವರು ಒತ್ತಡಕ್ಕೋಸ್ಕರ ಅವರ ಜೊತೆಯಲ್ಲಿ ಇರುವುದು ಬಿಟ್ಟರೆ, ಸರ್ಕಾರ ಯಾರು ಒಪ್ಪುವುದಿಲ್ಲ, ಅವರ ಕಾಲೇಜನ್ನು ನ್ಯಾಷನಲೈಜ್ ಮಾಡುತ್ತೇವೆಂದು ಹೇಳುತ್ತಾರೆ. ಕೆಲವು ಮುಂದೆ ಬರುತ್ತಾರೆ. ಅವರಿಗೆ ಅಡ್ಮಿಟ್ ಮಾಡಿಕೊಳ್ಳಿ. ಯಾರು ಒಪ್ಪುವುದಿಲ್ಲ, ಆ ಕಾಲೇಜ್‌ಗಳನ್ನು ನ್ಯಾಷನಲೈಜ್ ಮಾಡಬೇಕೆಂದು ನನ್ನ ಸ್ನೇಹಿತರು ಹೇಳಿದರು, ಅದಕ್ಕೆ ನನ್ನ ಸಹಮತ ವ್ಯಕ್ತಪಡಿಸುತ್ತೇನೆ. ಇಡೀ ಸದನ ಸರ್ಕಾರದ ಬೆಂಬಲಕ್ಕೆ ಬರುತ್ತದೆಂದು ನಾನು ಹೇಳಲಿಚ್ಛಿಸುತ್ತೇನೆ. ನ್ಯಾಯಾಲಯದ

ಆದೇಶ ಬಗ್ಗೆ ಕೇಳುವುದಾದರೆ, ಮಣಿಪಾಲ್ ಮೆಡಿಕಲ್ ಕಾಲೇಜ್‌ನವರು, ಟಿಎಂಎ ಪೈ ಇನ್ಸ್‌ಟಿಟ್ಯೂಷನ್‌ನವರು ಸುಪ್ರೀಂಕೋರ್ಟ್‌ಗೆ ಹೋಗುವಂಥದ್ದು, ಲಿಂಗ್ವಿಸ್ಟಿಕ್ ಮೈನಾರಿಟಿ ಸಮಸ್ಯೆ ಎತ್ತಿಕೊಂಡು ಹೋಗುವಂಥದ್ದು, This matter was not before the Supreme Court. ಯಾವ ವಿಷಯ ಸುಪ್ರೀಂಕೋರ್ಟ್ ಮುಂದಿರಲಿಲ್ಲ, ಅದರ ಬಗ್ಗೆ ಏನು ಸುಪ್ರೀಂಕೋರ್ಟ್‌ನವರು ಆದೇಶ ಕೊಟ್ಟರು, ಅದು ತಪ್ಪು ಎಂದು ಹೇಳುವುದಕ್ಕೆ ನಾನು ಇಚ್ಛೆಪಪಡುತ್ತೇನೆ. ಏಕೆಂದರೆ, ಯಾವುದರ ಬಗ್ಗೆ ಅವರು ತೀರ್ಪನ್ನು ಕೊಡಬೇಕಾಗಿತ್ತೋ, ಅದರ ಬಗ್ಗೆ ಅವರು ತೀರ್ಪನ್ನು ಕೊಡದೇ ಯಾವ ವಿಷಯ ಅವರ ಮುಂದೆ ಇರಲಿಲ್ಲ ಅದನ್ನು ತೀರ್ಪನ್ನು ಕೊಟ್ಟಿದ್ದರಿಂದಲೇ ಇಷ್ಟು ಗೊಂದಲ. ಈ ಉನ್ನಿಕೃಷ್ಣನ್ ಕೇಸ್ ಅದರ ಬಗ್ಗೆ ನಾವು ಕಳೆದ ಸಲ ವಿಧಾನ ಸಭೆಯಲ್ಲಿ ಚರ್ಚೆ ಮಾಡಿದ್ದೇವೆ. ಅದರ ಬಗ್ಗೆ ನಾನು ಹೋಗಲಿಕ್ಕೆ ಇಚ್ಛೆಯನ್ನು ಪಡುವುದಿಲ್ಲ. ಅಂದು ನಾನು ಮಾನ್ಯ ಪರಮೇಶ್ವರ ಅವರಿಗೆ ಹೇಳಿದ್ದೆ, ನೀವೇ You are having the dual status ಎಂದು ನಾನು. ಒಂದು ಮ್ಯಾನೇಜ್‌ಮೆಂಟ್ ಒಂದು ಗೌರ್ನಮೆಂಟ್. ನಿಮ್ಮಿಂದ ಈ ಸಮಸ್ಯೆಯಾಗಿದೆಯೆಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ, ನಾನು ನೀವು ರಾಜೀನಾಮೆಯನ್ನು ಕೊಡಬೇಕು, ಕೊನೇಪಕ್ಷ ರಾಜೀನಾಮೆ ಕೊಡಲಿಕ್ಕೆ ಆಗಲಿಲ್ಲವೆಂದರೆ portfolio ಯಾದರೂ ಛೇಂಜ್ ಮಾಡಿಕೊಳ್ಳಿ ಎಂದು ಹೇಳಿದ್ದೆ. ಏಕೆಂದರೆ ಜನ ನಂಬಬೇಕು. ಆ ಮಾತನ್ನು ನಾನು ಹೇಳುವಾಗ ತಾವು ಕೂಡ ಈ ಸದನದಲ್ಲಿ ಇದ್ದೀರಿ. ಇವತ್ತು ಎಂಥ ಪರಿಸ್ಥಿತಿ ಇದೆ ಎಂದರೆ, ಒಂದು ಕಡೆ ಪಿಯುಸಿ ಎಕ್ಸಾಮ್ ಬರೆಯುವುದು, ಮತ್ತೆ ಸಿಇಟಿ ಎಕ್ಸಾಮ್ ಬರೆಯುವುದು, ಪುನಃ ಕೌನ್ಸಿಲಿಂಗ್‌ಗೆ ಬರುವಂಥದ್ದು. ನಾನು ಸದನದ ಮುಖೇನ ಹೈಯರ್ ಎಜುಕೇಷನ್ ಮಿನಿಸ್ಟರ್ ಅವರನ್ನು ಕೇಳಿಕೊಳ್ಳುತ್ತೇನೆ, ಈ ಸಿಇಟಿ ಎಕ್ಸಾಮನ್ನೇ ತೆಗೆದು ಬಿಡಿ ಇದು ಏಕೆ ಬೇಕು? ಪಿಯುಸಿ ಎಕ್ಸಾಮ್ ಆದಕೂಡಲೇ ನೇರವಾಗಿ ಕೌನ್ಸಿಲಿಂಗ್ ಪ್ರಾರಂಭಿಸಿ. ಮಕ್ಕಳಿಗೆ, ಇವತ್ತು ಒಂದು ಪ್ರಶ್ನೆ ಬಂದಿತ್ತು, ಶಾಲೆಗಳಲ್ಲಿ ಸಹ ಸಿಇಟಿ ಪ್ರಾರಂಭ ಮಾಡಬೇಕು, ದಯವಿಟ್ಟು ಅದನ್ನು ಒಂದು ಮಾಡಿ ಮಕ್ಕಳ ತಂದೆ-ತಾಯಿ ಗಳಿಗೆ ಹಾಗೂ ಮಕ್ಕಳಿಗೆ ತೊಂದರೆಯನ್ನು ಕೊಡಬೇಡಿ. ಏಕೆಂದರೆ, ಒಂದು ಪರೀಕ್ಷೆಯನ್ನೇ ಅಪಿಯರ್ ಆಗಲಿಕ್ಕೆ ಕಷ್ಟಪಡುವಂಥ ಅವರು, ಮೊದಲು ಒಂದು ಪಾಸ್ ಆಗಲಿ, ಅವರ ರಜೆಯನ್ನು ಕಳೆದು ಅವರ ಬಾಲ್ಯವನ್ನು ಕಳೆಯುವಂಥ ಕೆಲಸ ನಾವು ಇಲ್ಲಿ ಕುಳಿತುಕೊಂಡು ಮಾಡುವುದು ಬೇಡ. ಆದರೆ ಈ ವ್ಯವಸ್ಥೆಯಲ್ಲಿ ಈ ಗೌರ್ನಮೆಂಟ್ ಆಸ್ಪತ್ರೆಯನ್ನು ಯೂಟಿಲೈಸ್ ಮಾಡುತ್ತಿದ್ದಿರಲ್ಲಾ ಅವರು ಒಪ್ಪಲೇ ಬೇಕಾಗುತ್ತದೆ, ಈಗಿರುವಂಥ ಗೌರ್ನಮೆಂಟ್ ಆಸ್ಪತ್ರೆಯನ್ನು ಯೂಟಿಲೈಸ್ ಮಾಡಿಕೊಂಡು ದೊಡ್ಡ ದೊಡ್ಡ ಹೆಸರಿನಲ್ಲಿ ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ ಹಾಗೆ ದೇವರಾಜ್ ಅರಸ್ ಅವರ ಹೆಸರಿನಲ್ಲಿ ಕಾಲೇಜು ಮಾಡಿದರು, ಅಂಬೇಡ್ಕರ್ ಹೆಸರಿನಲ್ಲಿ ಕಾಲೇಜ್ ಮಾಡಿದರು, ಬೇರೆ ಬೇರೆ ಹೆಸರಿನಲ್ಲಿ ಕಾಲೇಜು ಮಾಡಿ, ಇವತ್ತು ನಾನು ಎಂಪಿ ಸ್ಥಾನವನ್ನು ಬಿಡಲಿಕ್ಕೆ ತಯಾರು ಇದ್ದೇನೆ ಇದನ್ನು ಸೀಟು ವ್ಯವಸ್ಥೆಯನ್ನು ಸರ್ಕಾರದ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳುವುದಕ್ಕೆ ತಯಾರಿಲ್ಲ ಎನ್ನುವಂಥ ಪರಿಸ್ಥಿತಿಗೆ ಮ್ಯಾನೇಜ್‌ಮೆಂಟ್‌ನವರ್ಕೆ ಬಂದರೆ, ಸರ್ಕಾರ ಅದಕ್ಕೆ ತಲೆ ತಗ್ಗಿಸಿ ಕುಳಿತುಕೊಳ್ಳುವುದಾದರೆ, ನಾವು ಏನು ಮಾಡಬೇಕು? ನಾನು ಆ ಪಕ್ಷ ಈ ಪಕ್ಷ ಎಂದು ಹೇಳುವುದಿಲ್ಲ, ಎಲ್ಲಾ ಪಕ್ಷದಲ್ಲಿಯೂ ಮ್ಯಾನೇಜ್‌ಮೆಂಟ್‌ನವರು ಇದ್ದಾರೆ. ನಾವು ಚರ್ಚೆಯನ್ನು ರಾಜಕೀಯದಿಂದ ಹೊರಗೆ ಬಂದು ಮಾಡುವಂಥ ಪ್ರಯತ್ನ ಮಾಡಬೇಕು, ಯಾವುದೇ ರಾಜಕೀಯ ಪಕ್ಷದಲ್ಲಿ ಅವರು ಇರಲಿ, ಅವರು

ಮಾಡಿರತಕ್ಕಂಥದ್ದು ತಪ್ಪು ಎಂದು ಆಡಳಿತಪಕ್ಷದಲ್ಲಿರಲಿ, ವಿರೋಧ ಪಕ್ಷದಲ್ಲಿರುವ ಮ್ಯಾನೇಜ್‌ಮೆಂಟ್‌ನವರು ಇರಲಿ. ತಪ್ಪು ಅಂತ ಹೇಳುವಂಥ ಕೆಲಸವನ್ನು ನಾವು ಇಲ್ಲಿ ಕುಳಿತು ಮಾಡಬೇಕಾಗುತ್ತದೆ. ನಮ್ಮಲ್ಲಿ ಒಂದು ಮಿಸ್ಟೇಕ್ ಇದೆ, ಹೊಂದಾಣಿಕೆಯನ್ನು ಮಾಡಿಕೊಳ್ಳುವಾಗ, ಹಿಂದೆ ಒಂದು ಇತ್ತು ಅವರಿಗೆ 15 ಪರ್ಸೆಂಟ್ ಸೀಟು ಮ್ಯಾನೇಜ್‌ಮೆಂಟ್‌ನವರಿಗೆ ಕೊಟ್ಟು 85 ಪರ್ಸೆಂಟ್ ಸರ್ಕಾರ ಮಾಡುತ್ತಿತ್ತು. ಅವರು ಮಾರಾಟ ವನ್ನು ಮಾಡಿಕೊಳ್ಳುತ್ತಿದ್ದರು, ಹೀಗಾಗಿ ಎಲ್ಲವನ್ನೂ ಮಕ್ಕಳಿಗೆ ದುಡ್ಡು ಕೊಡುವಂತಹ ಸ್ಥಿತಿ ನಿರ್ಮಾಣ ಮಾಡಿದ್ದು ತಪ್ಪು. ಮೊದಲು ಅವರಿಗೆ ಎನ್‌ಆರ್‌ಐ ಕೋಟಾ ಎಂದು ಇತ್ತು, ಸುಪ್ರೀಂ ಕೋರ್ಟ್ ಯಾವ್ಯಾವ ವಿಷಯಕ್ಕೆ ಕೈಹಾಕಬಾರದಾಗಿತ್ತೋ ಅವೆಲ್ಲಕ್ಕೂ ಕೈ ಹಾಕಿ ಗೊಂದಲವನ್ನು ಸೃಷ್ಟಿ ಮಾಡಿದ್ದು ಈ ಕ್ರೆಡಿಟ್ should go to the court. ನಾವು ಇಲ್ಲಿ ಕುಳಿತುಕೊಂಡು ಅದನ್ನು ಚರ್ಚೆಯನ್ನು ಮಾಡಬಾರದು. ಮೊನ್ನೆ ಜಸ್ಟೀಸ್ ರಾಜೇಂದ್ರ ಬಾಬುರವರು ಶಾಸಕರ ತರಬೇತಿ ಶಿಬಿರದಲ್ಲಿ ಮಾತನಾಡುವಾಗ ಹೇಳಿದ್ದಾರೆ, ಕೋರ್ಟಿನ ಜಡ್ಜ್‌ಮೆಂಟ್ ಬಗ್ಗೆ ಚರ್ಚೆ ಮಾಡಬಹುದು ಆದರೆ ಆ ಜಡ್ಜ್‌ನ ಮೋಟಿವ್ ಬಗ್ಗೆ ಚರ್ಚೆ ಮಾಡಲಿಕ್ಕಿಲ್ಲವೆಂದು ಹೇಳಿರುವಂಥದ್ದನ್ನು ನಾನು ಓದಿದ ನೆನಪು ಇದೆ. ಆದ್ದರಿಂದ ಈ ಸದನದಲ್ಲಿ ಚರ್ಚೆ ಮಾಡೋಣ. ನ್ಯಾಯಾಲಯ ಕೊಟ್ಟಿರುವಂಥ ಆದೇಶವನ್ನು, ಮಾನ್ಯ ರಮೇಶ್ ಕುಮಾರ್‌ರವರು ಹೇಳಿದರು, ಸಂವಿಧಾನದ ಒಳಗೆ ಏನು ಮಾಡುತ್ತೇವೆ ಅದನ್ನು ಚರ್ಚೆ ಮಾಡುವುದಕ್ಕೆ ಅವರಿಗೆ ತಪ್ಪು ಎಂದು ಹೇಳಲಿಕ್ಕೆ ಆಗುವುದಿಲ್ಲ, ಹೊರತಾಗಿ ಮಾಡಿದ್ದರೆ ಮಾತ್ರ, If we go beyond the Constitution, probably we are subject to judicial scrutiny, not otherwise ಎಲ್ಲವನ್ನೂ ಏನು ಈ ಸದನದಲ್ಲಿ ಚರ್ಚೆ ಮಾಡುತ್ತೇವೆ, everything is not subject to judicial scruitiny ಎಂಬುದು ನನ್ನ ಅಭಿಪ್ರಾಯ. ಅದನ್ನು ಈ ಸದನ ತೀರ್ಮಾನ ತೆಗೆದುಕೊಳ್ಳದೇ ಪ್ರತಿಯೊಂದನ್ನು ಅವರು ಹೇಳಿದ್ದನ್ನು ಸರಿ ಎಂದು ಸಬ್‌ಜೂಡೀಸ್ ಆಗುತ್ತದೆ. ನ್ಯಾಯಾಲಯದ ನಿಂದನೆಯಾಗುತ್ತದೆ. ಇಲ್ಲಿ ಚರ್ಚೆ ಮಾಡಿದರೆ ತಪ್ಪಾಗುತ್ತದೆ ಎಂದು ಕುಳಿತರೆ ಇನ್ನೂ ಆ ಕೋರ್ಟು ಏನು law lay ಮಾಡುತ್ತದೆ. ಅದೇ ಖಾಯಂ ಆಗುತ್ತದೆಯೇ ಹೊರತು ಈ ಸದನ ಮಾಡಿದ ಯಾವ ಕಾನೂನುಗಳು ಜಾರಿಗೆ ಬರುವುದೇ ಇಲ್ಲ. ಆದುದರಿಂದ ನಾವು ಈ ಸದನದಲ್ಲಿ ಇರುವವರು ಸ್ವಲ್ಪ ಧೈರ್ಯವನ್ನು ಮಾಡಬೇಕಾಗುತ್ತದೆ. ಅದಕ್ಕೋಸ್ಕರ ಎಲ್ಲಿಯಾದರೂ ಅದರ ಬಗ್ಗೆ ಚರ್ಚೆಯನ್ನು ಮಾಡದೆ ತೀರ್ಮಾನಕ್ಕೆ ಬರುವುದಕ್ಕಾಗುವುದಿಲ್ಲ. ಬಿಲ್ ಅನ್ನು ಪಾಸ್ ಮಾಡಬೇಕು. ಈಗೇನು ಇಂಜಿನಿಯರಿಂಗ್, ಮೆಡಿಕಲ್ ಬಗ್ಗೆ ಮುಗಿಯಿತು, ನರ್ಸಿಂಗ್, ಟಿಸಿಹೆಚ್, ಎಲ್ಲಾ ಪ್ರಾರಂಭವಾಗಿದೆ, ಅಲ್ಲಿ ಡೊನೇಷನ್ಸ್ ಶುರುವಾಗಿದೆ, ಕಾಲೇಜನ್ನು ಖರೀದಿ ಮಾಡಿದ್ದು, ಸತ್ಯ ಹೇಳಬೇಕಾಗುತ್ತದೆ, ಅವರು ಕಾಲೇಜುಗಳನ್ನು ನೇರವಾಗಿ ತೆಗೆದುಕೊಳ್ಳಲಿಲ್ಲ, ಗೌರ್ನಮೆಂಟ್ ಅಲಾಟ್ ಮಾಡಲಿಲ್ಲ, ಖರೀದಿ ಮಾಡುವ ಹಾಗೆಯೇ ಅವರು ಮಾಡಿದ್ದಾರೆ. ಈಗ ಅವರು ಸೀಟುಗಳನ್ನು ಮಾರಾಟ ಮಾಡುತ್ತಿದ್ದಾರೆ, ಇನ್ನು ಒಂದು ದಿವಸ ಕಾಲೇಜು ಮಾರಾಟಕ್ಕಿದೆ ಎಂದು ಪತ್ರಿಕೆಗಳಲ್ಲಿ ಬರುವಂಥದ್ದನ್ನು ನಾವು ಕಾಣಬೇಕಾಗುತ್ತದೆ. ಇದು ವ್ಯವಸ್ಥೆಯನ್ನು ಹಾಳು ಮಾಡಿರುವುದರಿಂದ ಸರಿಮಾಡಬೇಕಾಗುತ್ತದೆ. ಹಾಳು ಮಾಡಿದ್ದು ನಾವೇ, ಸರಿ ಮಾಡಬೇಕಾದುದು ನಾವೇ. ಅದು ನಮ್ಮ ಜವಾಬ್ದಾರಿ ಇದೆ. ಆದುದರಿಂದ ನಾವು ಆ ವ್ಯವಸ್ಥೆಯನ್ನು ಸರಿ ಮಾಡಲಿಕ್ಕಾಗಿಯೇ ಈ ಚರ್ಚೆಯನ್ನು ಪ್ರಾರಂಭಿಸಿದ್ದೇವೆ. ಇವತ್ತು ನಮ್ಮ ಮುಖ್ಯಮಂತ್ರಿಗಳು ಹೇಳಿದರು, ವಿರೋಧ ಪಕ್ಷದವರು ನಾವು

ಎಲ್ಲಾ ಕುಳಿತು ಒಂದು ತೀರ್ಮಾನಕ್ಕೆ ಬರೋಣ ಎಂದರು, ಮಾನ್ಯ ಸಿಂಧ್ಯಾರವರೂ ಕೂಡ ನೀವು ಸಲಹೆ ಕೊಡಿ ಎಂದು ಹೇಳಿದರು. ಸಲಹೆಗಳನ್ನು ಕಳೆದ 4–5 ವರ್ಷಗಳಿಂದ ಕೊಟ್ಟಿದ್ದೇವೆ, ಇದು piece meal ರೀತಿ ತೀರ್ಮಾನವನ್ನು ಮಾಡುತ್ತಿದ್ದಾರೆ, ಕಳೆದ ವರ್ಷ ಚರ್ಚೆಯಾಗುವಾಗ, ಕೋರ್ಟಿನಲ್ಲಿ ತೀರ್ಮಾನವಾದಾಗ ಮುಂದಿನ ವರ್ಷ ಈ ಸಮಸ್ಯೆ ಉದ್ಭವ ಆಗುತ್ತದೆಂದು ಗೊತ್ತಿತ್ತು, ಗೊತ್ತಿಲ್ಲದೇ ಏನೂ ಇಲ್ಲ. ಆದರೆ ಈವರೆಗೆ ಏಕೆ ಇದನ್ನು ಬಿಟ್ಟು ಕೊಟ್ಟರು? ಆವತ್ತೇ ಕೋರ್ಟಿನಲ್ಲಿ ತಿರ್ಮಾನ ಮಾಡಬೇಕಾಗಿತ್ತು, ಸರ್ಕಾರಿ ತೀರ್ಮಾನ ತೆಗೆದುಕೊಳ್ಳಬೇಕಾಗಿತ್ತು. ಅದನ್ನು ಬಿಟ್ಟು ಇಲ್ಲಿಯವರೆಗೆ ಏಕೆ ಎಳೆಯಲಿಕ್ಕೆ ಬಿಟ್ಟರು ಎಂದು ನನಗಂತೂ ಅರ್ಥವಾಗುತ್ತಿಲ್ಲ. ಈ ಭಾಷಾ ಅಲ್ಪಸಂಖ್ಯಾತರ ಸಮಸ್ಯೆಗೆ ಹೋಗಿ ಇಡೀ ರಾಜ್ಯದ ಮಕ್ಕಳ ಭವಿಷ್ಯವನ್ನು ಕೋರ್ಟಿನಲ್ಲಿಟ್ಟು, ಕೋರ್ಟಿನವರಿಗೆ ಮಕ್ಕಳ ಸಮಸ್ಯೆ ಅರ್ಥವಾಗಲಿಲ್ಲ, ಮಕ್ಕಳ ಹೆತ್ತವರ ಸಮಸ್ಯೆ ಅರ್ಥವಾಗಲಿಲ್ಲ. ಸಮಸ್ಯೆ ಎಲ್ಲಿಯವರೆಗೆ ಎಳೆದುಕೊಂಡು ಹೋಗುವುದು, ಅದನ್ನು ಎಲ್ಲಿಯಾದರೂ ಮುಕ್ತಾಯ ಮಾಡಬೇಕಾದರೆ, ಪ್ರಾಯಶಃ ಈ ದಿವಸವೇ ತೀರ್ಮಾನವನ್ನು ತೆಗೆದುಕೊಂಡು, ನಾನು ಹೆಚ್ಚು ಹೊತ್ತು ಮಾತನಾಡುವುದಕ್ಕೆ ಹೋಗುವುದಿಲ್ಲ. ಎಲ್ಲಾ ವಿಷಯಗಳನ್ನು ಅನೇಕ ನನ್ನ ಸ್ನೇಹಿತರು ಮಾತನಾಡಿದ್ದಾರೆ. ಸುಪ್ರೀಂ ಕೋರ್ಟಿನಿಂದ ಹಿಡಿದು ನಮ್ಮ ವಿಧಾನ ಸಭೆಯಿಂದ ಹಿಡಿದು, ಕಾಮೆಡ್ ನವರು ಕುಳಿತು, ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್ ಬಗ್ಗೆ ಚರ್ಚೆ ಮಾಡಿದ್ದಾರೆ, ಅವರು ತಪ್ಪನ್ನು ಮಾಡಿದ್ದಾರೆ, ನಾವು ತಪ್ಪನ್ನು ಮಾಡಿದ್ದೇವೆ ಎಲ್ಲಾ ಸೇರಿ ಅದನ್ನು ಇತ್ಯರ್ಥಗೊಳಿಸೋಣ, ಸುಪ್ರೀಂ ಕೋರ್ಟ್‌ನ್ನು ನೆಗೋಷಿಯೇಷನ್‌ಗೆ ಕರೆಯಲಿಕ್ಕೆ ಆಗುವುದಿಲ್ಲ. Because they are above everything. ಒಂದು ಅಭಿಪ್ರಾಯ ನಾವೇ ಕೊಟ್ಟಿದ್ದೇವೆ. ಅದು ತಪ್ಪಾಗುತ್ತದೆ, ನಾವು ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡಬೇಕಾಗುತ್ತದೆ, ಒಂದು ಬಿಲ್ ತರೋಣ. ಈ ಸದನವಲ್ಲಿ ಒಂದು ಬಿಲ್ ಅನ್ನು ತರಲಿಕ್ಕೆ ಆಗುತ್ತದೆಯೇ? ಅಷ್ಟು ಇಚ್ಚಾಶಕ್ತಿ ಇದೆಯೇ? ಮಾನ್ಯ ಶ್ರೀರಾಮರೆಡ್ಡಿಯವರು ನಿಮಗೆ ತಕಾತ್ತು ಇದ್ದರೆ ಎನ್ನುವ ಮಾತನ್ನು ಹೇಳಿದರು. ತಕಾತ್ತು ಎನ್ನುವುದಕ್ಕಿಂತ ಇಚ್ಚಾಶಕ್ತಿ ಎನ್ನುವ ಒಳ್ಳೆಯ ಶಬ್ದವನ್ನು ಉಪಯೋಗ ಮಾಡೋಣ. ನಿಮಗೆ ಇಚ್ಛಾಶಕ್ತಿ ಇದ್ದರೆ ಈ ಬಾರಿ ತೀರ್ಮಾನ ತೆಗೆದುಕೊಂಡು ಇದಕ್ಕೆ ಒಂದು ಅಂತ್ಯವನ್ನು ಹಾಡಿ. ನನ್ನ ಸ್ನೇಹಿತರಿಗೆ ಕೆಲವು ವಿಷಯಗಳ ಬಗ್ಗೆ ಟಿಸಿಹೆಚ್ ಗಳಿಗೆ ಎನ್‌ಒಸಿ ಕೊಡುವುದು, ಇದರ ಬಗ್ಗೆ ಎನ್‌ಒಸಿ ಗಳನ್ನು ಕೊಟ್ಟಿರುವಂಥದ್ದು. ಯಾವುದೇ ಮೆಡಿಕಲ್ ಕಾಲೇಜ್‌ಗೆ ರಾಜ್ಯ ಸರ್ಕಾರವೇ ಎನ್ ಒಸಿಯನ್ನು ಕೊಡಬೇಕಾಗುತ್ತದೆ. ಎಷ್ಟು ಕೊಟ್ಟಿದ್ದಾರೆ? ಟಿಸಿಹೆಚ್‌ಗೆ ಎಷ್ಟು ಎನ್‌ಒಸಿ ಕೊಟ್ಟಿದ್ದಾರೆ? ನರ್ಸಿಂಗ್ ಶಾಲೆಗಳಿಗೆ ಎಷ್ಟು ಎನ್‌ಒಸಿಗಳನ್ನು ಕೊಟ್ಟಿದ್ದಾರೆ? ಇದನ್ನು ತೆಗೆದು ನೋಡಿದರೆ ಪ್ರಾಯಶಃ ಈ ರಾಜ್ಯದ ಜನತೆಗೆ ಇದೇನು ವಿದ್ಯಾಸಂಸ್ಥೆಗಳನ್ನು ತೆರೆಯುವುದಕ್ಕೆ ಎನ್‌ಒಸಿ ಕೊಟ್ಟಿದ್ದಾರೋ ಅಥವಾ ಅಂಗಡಿಗಳಿಗೆ ಲೈಸನ್ಸ್ ಕೊಟ್ಟಿದ್ದಾರೋ ಎನ್ನುವಂಥ ಪರಿಸ್ಥಿತಿ ಉದ್ಭವವಾಗುತ್ತದೆ. ದಯಮಾಡಿ ನಾನು ತಮ್ಮ ಮೇಲೇನೂ ಆಪಾದನೆಯನ್ನು ಹಾಕುತ್ತಿಲ್ಲ ಜನರಲ್ಲಾಗಿ ಬಿಎಡ್ ಕಾಲೇಜು, ಈ ಕಾಲೇಜುಗಳು ಇಷ್ಟು ಕೊಟ್ಟಿದ್ದಕ್ಕೆ ಇದಕ್ಕೆ ಕೊಟ್ಟಿದ್ದು ಮಾತ್ರವಲ್ಲ, ಅವರ ಕಂಟ್ರೋಲ್ ನಿಮ್ಮ ಹತ್ತಿರ ಇಲ್ಲ, ನಾವು ಏನು ಮಾಡಲಿಕ್ಕೆ ಆಗುತ್ತದೆ ಎಂದು ಹೇಳುವಂಥ ಪರಿಸ್ಥಿತಿ ಈ ಸರ್ಕಾರಕ್ಕೆ ಬಂದಿದೆ. ಎನ್‌ಒಸಿ ಯನ್ನು ಕೊಡಬೇಕು, University affiliation ಅನ್ನು ಕೊಡಬೇಕು, ಹೇಳಿದಿರಲ್ಲಾ ಗೌರ್ನಮೆಂಟ್ ಕಾಲೇಜ್ ಗಳಲ್ಲಿ ಸೀಟುಗಳನ್ನು ಜಾಸ್ತಿ ಮಾಡಿಕೊಳ್ಳಿ, ಇನ್ ಟೇಕ್ ಜಾಸ್ತಿ ಮಾಡಿ, ಅಥವಾ ಯಾವ ಕಾಲೇಜುಗಳು

ಹಠ ಹಿಡಿದು ಅಡ್ಮಿಷನ್ ಮಾಡಿಕೊಳ್ಳುವುದಿಲ್ಲ, ಸರ್ಕಾರದ ತೀರ್ಮಾನ ಮಾಡಿ ಎಲ್ಲವನ್ನೂ ನ್ಯಾಷನಲೈಸ್ ಮಾಡಿ ಬೇಕಾದರೆ ಬಿಲ್ ತನ್ನಿ ಪಾಸ್ ಮಾಡೋಣ. ಈಗಾಗಲೇ ಹೇಳಿದ ಹಾಗೆ ಬ್ಯಾಂಕ್ ನ್ಯಾಷನಲೈಸ್ ಮಾಡಲಿಕ್ಕೆ ಟ್ರಾನ್ಸ್‌ಪೋರ್ಟ್ ಸಿಸ್ಟಂ ಅನ್ನೇ ನ್ಯಾಷನಲೈಸ್ ಮಾಡಲಿಕ್ಕೆ ಆಗುವಾಗ ಇದನ್ನು ಏಕೆ ಮಾಡಲಿಕ್ಕೆ ಆಗುವುದಿಲ್ಲ? ಲ್ಯಾಂಡ್ ಲೀಸ್ ಕೊಟ್ಟಿರುವುದನ್ನು ನೀವು ಕ್ಯಾನ್ಸಲ್ ಮಾಡಿ, ಗೌರ್ನಮೆಂಟ್ ಆಸ್ಪತ್ರೆಗಳನ್ನು ಅವರಿಗೆ ಉಪಯೋಗ ಮಾಡಲಿಕ್ಕೆ ಕೊಟ್ಟಿದ್ದೀರಿ, ಅದನ್ನು ವಿತ್ ಡ್ರಾ ಮಾಡಿ, ಎಷ್ಟೋ ಜನ ಸರ್ಕಾರಕ್ಕೆ ದುಡ್ಡು ಕಟ್ಟಿಲ್ಲ. ಆದರೂ ಸರ್ಕಾರ ಅವರಿಗೆ ತಲೆಬಾಗುತ್ತದೆ. ಇಷ್ಟೇ ಹೇಳುತ್ತೇನೆ ಏಕೆಂದರೆ ಅದಕ್ಕಿಂತ ಜಾಸ್ತಿ ಹೇಳಲಿಕ್ಕೆ ಇಲ್ಲ. ಹೇಳುವಷ್ಟು ಹೇಳಿ ಆಗಿದೆ. ದಯವಿಟ್ಟು ಒಂದು ಇಚ್ಛಾಶಕ್ತಿ ನಿಮ್ಮಲ್ಲಿ ಇರಲಿ, ನ್ಯಾಷನಲೈಸ್ ಮಾಡುವುದಾದರೆ ನೀವು ಮಾಡಿ, ಅವರಿಗೆ ಯಾವ್ಯಾವ ಕಂಡೀಷನ್ ಹಾಕಬೇಕು ಅದನ್ನಾದರೂ ಮಾಡಿ, ಇದಕ್ಕೆ ಈ ಬಾರಿ ಅಂತ್ಯವನ್ನು ಹಾಡಿ ಇದೇ ಸಿಇಟಿಯ ಬಗ್ಗೆ ಮುಂದಿನ ವರ್ಷದ ಸದನದಲ್ಲಿ ಚರ್ಚೆಯಾಗುವಂಥ ಅವಕಾಶವನ್ನು ಕೊಡಬೇಡಿ, ವಿದ್ಯಾರ್ಥಿಗಳ ತಂದೆ-ತಾಯಿಯಂದಿರಿಗೆ ನಿದ್ದೆ ಮಾಡುವುದಕ್ಕೆ ಅವಕಾಶ ಕೊಡಿ, ಅದಲ್ಲದೆ ನಾನು ಪುನಃ ಹೇಳುತ್ತೇನೆ. Forgo with CET. ಡೈರೆಕ್ಟಾಗಿ ಪಿಯುಸಿ ಆದಮೇಲೆ ಕೌನ್ಸಿಲಿಂಗ್ ಮಾಡಿ. ಅದು ಏತಕ್ಕೆ ಬೇಕು? ಎರಡು ಎರಡು ಪರೀಕ್ಷೆಗಳನ್ನು ಮಕ್ಕಳು ಏಕೆ ಅಪೀಯರ್ ಆಗಬೇಕು? ಅದನ್ನು ತೆಗೆದು ಪಿಯುಸಿ ಎಕ್ಸಾಮ್‌ನ್ನು ಮಾಡಿ ಕೌನ್ಸಿಲಿಂಗ್ ಮಾಡಿ ಸೀಟು ಅನ್ನು ಕೊಡಿ. ಮತ್ತೆ ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ ಹೊರ ರಾಜ್ಯದಲ್ಲಿ ಯಾವ ರೀತಿ ಇದೆ, ಕನ್ನಡಿಗರಿಗೆ ಅಷ್ಟೇ ಮೀಸಲಾತಿಯನ್ನು ಇಡಿ. ಮಹಾರಾಷ್ಟ್ರದಲ್ಲಿ, ಬೇರೆ ಬೇರೆ, ರಾಜ್ಯದಲ್ಲಿ, ಎಲ್ಲರನ್ನೂ ತಂದು ಕರ್ನಾಟಕದಲ್ಲಿ ಮೀಸಲಾತಿ ಮಾಡಬೇಕೆಂದು ಸುಪ್ರೀಂಕೋರ್ಟ್ ಆದೇಶ ಮಾಡುತ್ತದೆ. ಆದರೆ ಕರ್ನಾಟಕಕ್ಕೆ ಇಷ್ಟು ಕೊಡಿ ಎಂದು ಆದೇಶ ಮಾಡುವುದಿಲ್ಲ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಸ್ವಲ್ಪ ತೀರ್ಮಾನಕ್ಕೆ ಬರಬೇಕಾಗುತ್ತದೆ ಎಂದು ಹೇಳಿ, ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

4.40 ಪಿಎಂ

† **ಶ್ರೀ ಅರಗಜ್ಞಾನೇಂದ್ರ (ತೀರ್ಥಹಳ್ಳಿ)** : ಮಾನ್ಯ ಛೇರ್ಮನ್‌ರವರೆ, ಸಿ.ಇ.ಟಿ ಬಗ್ಗೆ ಈ ರೀತಿಯಾದ ಒಂದು ಚರ್ಚೆ ಇಲ್ಲಿ ನಡೆಯುತ್ತಿದೆ. ಈ ಸದನದ ಹೊರಗಡೆ ಇಡೀ ರಾಜ್ಯದ ವಿದ್ಯಾರ್ಥಿಗಳು ಮತ್ತು ಅವರ ಪೋಷಕರು ಜಾತಕಪಕ್ಷಿಯಂತೆ ತಮ್ಮ ಭವಿಷ್ಯವನ್ನು ಎದುರು ನೋಡುತ್ತಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಕೇಳುವುದಕ್ಕೆ ಬಯಸುತ್ತೇನೆ. ಉಳಿದಿರತಕ್ಕಂಥ ಎಲ್ಲಾ ವಿಷಯಗಳನ್ನು ಹೇಳುವುದಕ್ಕಿಂಥ ಮೊದಲು ಇವತ್ತಿನ ಸರ್ಕಾರ ನಮ್ಮ ಒಂದು ವಿಷಯವನ್ನು ಇಲ್ಲಿ ಸ್ಪಷ್ಟಪಡಿಸಬೇಕಾಗಿದೆ. ಅದೇನೆಂದರೆ, ಉನ್ನತ ಶಿಕ್ಷಣದ ಬಗ್ಗೆ ನಿಮ್ಮ ನಿಲುವೇನು? ಇದು ಯಾರ ಮಕ್ಕಳಿಗೆ ಸಿಗಬೇಕು? ಪ್ರತಿಭಾವಂತರಿಗೆ ಇದು ಸಿಗಬೇಕಾ ಅಥವಾ ಹಣವಂಥರಿಗೆ ಸಿಗಬೇಕಾ? ಅಂದರೆ, ಇದು ಹಣ ಕೊಟ್ಟು ಕೊಂಡುಕೊಳ್ಳುವಂಥ ಸರಕಾ, ಎಂಬ ಈ ಎರಡು ವಿಷಯಗಳು ಬಗ್ಗೆ ತಾವು ನಿರ್ಧಾರ ಮಾಡಿ ಹೇಳಿದರೆ ಸಾಕು. ಆಗ ಇಲ್ಲಿ ಚರ್ಚೆಯ ಅವಶ್ಯಕತೆ ಬರುವುದಿಲ್ಲ. ಏಕೆಂದರೆ, ಶಾಸಕಾಂಗ ಮಾಡಬೇಕಾಗಿರತಕ್ಕಂಥ ಕರ್ತವ್ಯವನ್ನು ಕೋರ್ಟ್‌ಗೆ ಎಳೆದಂಥವರೇ ನೀವು. ಕೋರ್ಟ್‌ನಲ್ಲಿ ಸಂಬಂಧಪಟ್ಟಂಥ ವಕೀಲರಿಗೆ ಸರಿಯಾದಂಥ ಮಾಹಿತಿಗಳನ್ನು ನೀಡಿ ಅವರನ್ನು ವಾದ ಮಾಡುವುದಕ್ಕೆ ಹೇಳದೆ, ಖಾಸಗಿ ಇಂಜಿನಿಯರಿಂಗ್ ಮತ್ತು ಮೆಡಿಕಲ್

ಕಾಲೇಜ್‌ಗಳ ಲಾಬಿಗೆ ತಾವು ಮಣಿದಿದ್ದೀರಿ. ಇವತ್ತಿನ ದಿವಸ ಮಾನ್ಯ ಮಂಜುನಾಥ್‌ರವರು ಇರಬಹುದು ಅಥವಾ ಬೇರೊಬ್ಬರಿರಬಹುದು. ಸಮಿಶ್ರ ಸರ್ಕಾರ ರಚನೆ ಮಾಡಿರತಕ್ಕಂಥ ನೀವು ಎಲ್ಲವನ್ನೂ ಇದನ್ನು ಹೊತ್ತುಕೊಳ್ಳಬೇಕಾಗುತ್ತದೆ. ಈ ಸರ್ಕಾರದಲ್ಲಿರತಕ್ಕಂಥ ದಳ ಪಕ್ಷದವರು ನಮಗೆ ಸಂಬಂಧವಿಲ್ಲವೆಂದು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಮತ್ತೆ ಸೂಲಗಿತ್ತಿ ಕೆಲಸ ಮಾಡುವುದಕ್ಕೆ ಕುಳಿತುಕೊಂಡವಳು ಕೂಸು ಬಂದಾಗ ಮಾತ್ರ ಹಿಡಿಯುತ್ತೇನೆ, ಮಾಸು ಬಂದಾಗ ಬೇಡವೆಂದು ಹೇಳುವುದಕ್ಕೆ ಆಗುವುದಿಲ್ಲ. ನೀವೂ ಸಹಾ ಅವರ ಜೊತೆಗೆ ಅಧಿಕಾರವನ್ನು ಹಂಚಿಕೊಂಡಿದ್ದೀರಿ. ಆದ್ದರಿಂದ, ಅವರ ಭ್ರಷ್ಟಾಚಾರ ಮತ್ತು ಅವರ ಅನೀತಿಯ ಜೊತೆಗೆ ನೀವು ಸಂಬಂಧ ಮಾಡಿಕೊಂಡಿದ್ದೀರಿ. ನೀವಿಬ್ಬರು ಸೇರಿ ಈ ರಾಜ್ಯದ ಮಕ್ಕಳಿಗೆ ಮತ್ತು ಅವರ ಪೋಷಕರಿಗೆ....

ಶ್ರೀ ಎನ್. ಸೂರ್ಯನಾರಾಯಣ ರೆಡ್ಡಿ : ಜಾತ್ಯಾತೀತ ಜನತಾದಳದವರು ಯಾವುದೇ ಪಾಪದ ಕೆಲಸದಲ್ಲಿ ಬಾಗಿಯಾಗಿಲ್ಲ. ಆದ್ದರಿಂದ, ತಾವು ಹೇಳಿರತಕ್ಕಂಥ ಮಾತನ್ನು ದಯಮಾಡಿ ವಾಪಸ್ಸು ತೆಗೆದುಕೊಳ್ಳಬೇಕು.

ಡಾ: ವೈ. ನಾಗಪ್ಪ : ಪೊಲಿಟಿಕಲ್ ಆಗಿ ಮಾತನಾಡುವುದನ್ನು ತಾವು ಬಿಡಿ.

ಶ್ರೀ ಅರಗಜ್ಞಾನೇಂದ್ರ : ನಾನು ಇಲ್ಲಿಗೆ ರಾಜಕೀಯವಾಗಿ ಮಾತನಾಡುವುದಕ್ಕೆ ಬರದೇ ಇದ್ದರೂ ಕೂಡ ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಹೇಳಿದ ಹಾಗೆ, ಸಾಮಾನ್ಯ ಮನುಷ್ಯ, ಬಡವನೊಬ್ಬ ತನ್ನ ಮಕ್ಕಳನ್ನು ಪಿ.ಯಿ.ಸಿ.ಗೆ ಯಾವ ಕಾಲೇಜ್‌ಗೆ ಸೇರಿಸಬೇಕೆಂದು ಹುಡುಕುತ್ತಾನೆ. ಇವತ್ತಿನದಿವಸ ಮೆಡಿಕಲ್ ಮತ್ತು ಇಂಜಿನಿಯರ್ ಕಾಲೇಜ್ ಹುಡುಕುವುದಕ್ಕಿಂತ ಮೊದಲು ಪಿ.ಯು.ಸಿ.ಗೆ ನನ್ನ ಮಗನನ್ನು ಯಾವ ಕಾಲೇಜಿಗೆ ಸೇರಿಸಿದರೆ ಆತ ಒಳ್ಳೆಯ ಮಾರ್ಕ್ಸ್ ತೆಗೆದುಕೊಂಡು ಸಿ.ಇ.ಟಿ. ಪರೀಕ್ಷೆಯಲ್ಲಿ ಪಾಸ್ ಮಾಡಬಲ್ಲ ಎಂದು ಯೋಚನೆ ಮಾಡಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪಾಸ್ ಮಾಡಿದ ನಂತರ ಮುಂದಿನ ಎರಡು ವರ್ಷಗಳ ವಿದ್ಯಾಭ್ಯಾಸದಲ್ಲಿ ಮಗ ಅಥವಾ ಮಗಳು ನಿದ್ದೆ ಬಿಡುವುದಲ್ಲದೆ ಹೆತ್ತ ತಂದೆ-ತಾಯಿಯರು ಕೂಡ ಮಕ್ಕಳ ಜೊತೆ ಕುಳಿತುಕೊಂಡು ನಿದ್ದೆ ಬಿಡುತ್ತಾರೆ. ಈ ಒಂದು ಪರಿಸ್ಥಿತಿಯಲ್ಲಿ ಮಕ್ಕಳಿಗೆ ಟ್ಯೂಷನ್ ಮತ್ತೆ ಇತರೇ ಎಲ್ಲಾ ರೀತಿಯ ಒತ್ತಡ ಕೊಟ್ಟು ಆ ಮಕ್ಕಳು ಮನುಷ್ಯರಾಗಿರದೆ ಒಂದು ಯಂತ್ರದ ರೀತಿಯಲ್ಲಿರಬೇಕಾಗಿರುತ್ತದೆ. ಪಿ.ಯು.ಸಿ. ಓದಿ ಹೊರಕ್ಕೆ ಬರತಕ್ಕಂಥ ಮಕ್ಕಳಿಗೆ ನಾವೇನಾದರೂ ಕೇಳಿದರೆ ಅವರಿಗೆ ಹೊರಗಿನ ಪ್ರಪಂಚವೇ ಗೊತ್ತಿಲ್ಲದಂತೆ ಕಾಣುತ್ತದೆ. ಈ ರೀತಿಯಾಗಿ ಅವರನ್ನು ತರಬೇತಿ ಮಾಡುವುದರ ಜೊತೆಗೆ ಅವರನ್ನು ಗೋಳಾಡಿ ನನ್ನ ಮಗ-ಮಗಳು ಉನ್ನತಶಿಕ್ಷಣಕ್ಕೆ ಹೋಗಬೇಕು ಎನ್ನತಕ್ಕಂಥ ಜನರಿಗೆ ನೀವು ಮಾಡಿರತಕ್ಕಂಥದ್ದು ಏನು? ಒಂದು ವಿಷಯವನ್ನು ಮಾನ್ಯ ಮಂಜುನಾಥ್‌ರವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ನಮ್ಮ ಊರಿನಲ್ಲೂ ಒಬ್ಬ ಸಾಮಾನ್ಯ ಟೈಲರ್ ನನ್ನ ಹತ್ತಿರ ಬಂದು ನನ್ನ ಮಗನಿಗೆ ಗೌರ್ನಮೆಂಟ್ ಮೆಡಿಕಲ್ ಸೀಟ್ ಸಿಕ್ಕಿದೆ ಎಂದು ಬಹಳ ಖುಷಿಯಿಂದ ನನ್ನ ಹತ್ತಿರ ಹೇಳಿದ. ನಾನು ಆತನಿಗೆ ಅಭಿನಂದನೆ ಹೇಳಿದೆ. ಒಬ್ಬ ಟೈಲರ್ ನಮ್ಮ ಕಡೆ 25 ರೂಪಾಯಿ ದುಡಿಯುವುದಕ್ಕೂ ಕೂಡ ಆಗುವುದಿಲ್ಲ. ಮತ್ತೆ ಈತನ ಹತ್ತಿರ ಒಳ್ಳೆಯ ಬಟ್ಟೆಯನ್ನು ಹೊಲಿಸುವವರೂ ಕೂಡ ಹೋಗುವುದಿಲ್ಲ, ಆ ಸಂದರ್ಭದಲ್ಲಿ ಆ ಟೈಲರ್ ಏನು ಹೇಳಿದನೆಂದರೆ, ನನ್ನ ಮಗನಿಗೆ ದಾವಣಗೆರೆಯಲ್ಲಿರುವ ಕಾಲೇಜಿನಲ್ಲಿ ಸೀಟ್ ಸಿಕ್ಕಿದೆ. ಆದರೆ ಫಿ ಮತ್ತು ಪುಸ್ತಕ ಕೊಡಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ನಾನು ಏನು ಮಾಡಬೇಕು

ಎಂದು ಕೇಳಿದ. ನನಗೆ ಗೊತ್ತಾಗುತ್ತಿಲ್ಲವೆಂದು ಹೇಳಿದ. ಒಬ್ಬ ಬಡವನ ಮಗನಿಗೆ ಮೆಡಿಕಲ್ ಸೀಟ್ ಸಿಕ್ಕಿದೆಯೆಂದು ನಾವೆಲ್ಲಾ ಸೇರಿ ನಮ್ಮೂರಿನಲ್ಲಿರತಕ್ಕಂಥ ಬ್ಯಾಂಕ್‌ನಲ್ಲಿ ಆತನಿಗೆ ನಾನೇ ಜಮೀನು ಕೊಟ್ಟು ಎಜುಕೇಷನ್ ಲೋನ್ ಕೊಡಿಸಿದ್ದೆವು. ಸುಮಾರು ಎರಡು ವರ್ಷಗಳ ಹಿಂದೆ ಆ ಮನುಷ್ಯ ಇದ್ದಕ್ಕಿದ್ದ ಹಾಗೆ ಒಂದು ಸ್ವೀಟ್ ಬಾಕ್ಸ್ ತೆಗೆದುಕೊಂಡು ಬಂದ. ಇದು ಏತಕ್ಕೆ ಎಂದು ಕೇಳಿದ್ದಕ್ಕೆ ನನ್ನ ಮಗ ಮಿಲ್ಟ್ರಿ ಆಸ್ಪತ್ರೆಯಲ್ಲಿ ಡಾಕ್ಟರ್ ಆಗಿ ಸೆಲೆಕ್ಷನ್ ಆಗಿದ್ದಾರೆ. ಮೊದಲನೇ ತಿಂಗಳ ಸಂಬಳ ನನಗೆ ಕಳುಹಿಸಿಕೊಟ್ಟಿದ್ದಾನೆ. ಆದ್ದರಿಂದ ನಿಮಗೆಲ್ಲಾ ಮೊದಲನೇ ಸ್ವೀಟ್ ಕೊಡಬೇಕೆಂದು ಬಂದಿದ್ದೇನೆಂದು ಹೇಳಿದ. ಇವತ್ತಿನದಿವಸ ನೀವು ಮಾಡಿರತಕ್ಕಂಥ ರೀತಿಯಿಂದ ಮತ್ತು ನಿಮ್ಮ ದೆಸೆಯಿಂದ ಆ ರೀತಿಯ ಒಬ್ಬ ಟೈಲರ್‌ನ ಮಗ ಡಾಕ್ಟರ್ ಆಗುವ ಕನಸು ಕಾಣುವುದಕ್ಕೆ ಸಾಧ್ಯವಾಗುತ್ತದೆಯೇ ಎನ್ನತಕ್ಕಂಥದನ್ನು ತಾವು ಹೇಳಬೇಕು? ಇವತ್ತು ಬೆಳಿಗ್ಗೆ ಒಂದು ಮಾತನ್ನು ಹೇಳಿದೆ. ಅದೇನೆಂದರೆ, ಬೇರೆ ರಾಜ್ಯಕ್ಕೂ ಮತ್ತು ನಮ್ಮ ರಾಜ್ಯಕ್ಕೈ ಇರತಕ್ಕಂಥ ವ್ಯತ್ಯಾಸ ಏನೆಂದರೆ, ಬೇರೆ ರಾಜ್ಯಗಳಲ್ಲಿ ಸರ್ಕಾರ ಬೇರೆ ಮೆಡಿಕಲ್ ಕಾಲೇಜಿನ ಆಡಳಿತ ಮಂಡಳಿಯೇ ಬೇರೆ ಇರುತ್ತದೆ. ಆದರೆ, ನಮ್ಮಲ್ಲಿ ಆ ರೀತಿ ಇಲ್ಲ. ಇಲ್ಲಿ ಸರ್ಕಾರದೊಳಗಡೆ ಇಂಜಿನಿಯರ್ ಮತ್ತು ಮೆಡಿಕಲ್ ಕಾಲೇಜ್‌ಗಳ ಆಡಳಿತ ಮಂಡಳಿ ಇದೆ. ಕಾಮೆಡ್-ಕೆ ಬೇರೆಯಲ್ಲ ಸರ್ಕಾರ ಬೇರೆಯಲ್ಲ ಎನ್ನತಕ್ಕಂಥ ಮಾತನ್ನು ನಾನು ಬೆಳಿಗ್ಗೆಯೂ ಕೂಡ ಹೇಳಿದ್ದೆ ಮತ್ತು ಈಗಲೂ ಕೂಡ ಅದೇ ಮಾತನ್ನು ಹೇಳುತ್ತಿದ್ದೇನೆ. ನಾವು ಎಲ್ಲವನ್ನು ಹೇಳಿದರೆ ನಿಮಗೆ ಬೇಜಾರಾಗುತ್ತದೆ. ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಮಾತನಾಡುತ್ತಾ ಯಾರ್‍ಯಾರ ಹತ್ತಿರ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜ್ ಇದೆ ಎಂಬುದನ್ನು ಹೇಳಿದರು. ಈ ಮಾಹಿತಿ ನನ್ನ ಹತ್ತಿರ ಕೂಡ ಇದೆ. ಇವತ್ತಿನದಿವಸ ಹಣ ಮಾಡಿಕೊಂಡಿರುವವನಿಗೆ ಟಿಕೇಟ್ ಕೊಡಬೇಕೆಂಬುದು ಎಲ್ಲಾ ರಾಜಕೀಯ ಪಕ್ಷದವರಲ್ಲಿ ಬಂದುಬಿಟ್ಟಿದೆ. ಅದೇರೀತಿಯಾಗಿ ನೀವು ಕೂಡ ಸೀಟ್ ಕೊಟ್ಟಿದ್ದೀರಿ. ಏಕೆಂದರೆ, ಆತ ಗೆಲ್ಲಬಲ್ಲ ಮತ್ತು ನಮ್ಮ ಪಕ್ಷಕ್ಕೂ ಸ್ವಲ್ಪ ಹಣ ಕೊಡಬಲ್ಲ ಎಂದು ಸೀಟ್ ಕೊಟ್ಟಿದ್ದೀರಿ. ಆತ ದುಡ್ಡು ತುಂಬಿರುವುದರಿಂದ ಆತ ಹೇಳಿದಂತೆ ಕೇಳಬೇಕಾಗುತ್ತದೆ. ಮಹಾರಾಷ್ಟ್ರ ರಾಜ್ಯದಲ್ಲಿ ಶುಗರ್ ಲಾಬಿ ಸರ್ಕಾರದ ಮೇಲೆ ಬಹಳ ದೊಡ್ಡ ಒಂದು ಹಿಡಿತವನ್ನು ಸಾಧಿಸುತ್ತಿದೆ ಎಂದು ನಾವು ಹೇಳುತ್ತೇವೆ. ಅದೇ ರೀತಿಯಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿಯೂ ಕೂಡ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜಿನ ಲಾಬಿ ಈ ಸರ್ಕಾರವನ್ನು ಆಳುತ್ತಿದೆ. ಈ ಸರ್ಕಾರ ಜನರನ್ನು ಆಳಿದರೆ ಈ ಲಾಬಿಗಳು ಸರ್ಕಾರವನ್ನು ಆಳುತ್ತಿದೆ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ತಾವು ಸ್ವೀಪಿಂಗ್ ರಿಮಾರ್ಕ್ಸ್ ಮಾಡಬೇಡಿ. ಮೆಡಿಕಲ್ ಮತ್ತು ಇಂಜಿನಿಯರ್ ಲಾಬಿ ಇದರಲ್ಲಿ ಸರ್ಕಾರದ ಪಾಲಿದೆ ಎಂಬುದು ಮತ್ತು ಸರ್ಕಾರ ಅವರು ಹೇಳಿದ್ದನ್ನು ಕೇಳುತ್ತದೆ ಎನ್ನತಕ್ಕಂಥದ್ದಲ್ಲಾ ಬೇಡ. ಇದಕ್ಕೆ ಏನು ಪರಿಹಾರ ಕಂಡುಹಿಡಿಯಬೇಕೆಂಬುದನ್ನು ಮಾತ್ರ ಹೇಳಿ. ಸುಮ್ಮನೆ ಇವೆಲ್ಲವನ್ನೂ ಹೇಳುತ್ತಾ ಹೋದರೆ ಏನೂ ಆಗುವುದಿಲ್ಲ. ಇದನ್ನು ಯಾವ ರೀತಿ ಮಾಡಬೇಕೆಂದು ಮತ್ತು ಇದಕ್ಕೆ ಪರಿಹಾರ ಏನು ಎಂಬುದನ್ನು ಮಾತ್ರ ಹೇಳಿ.

ಶ್ರೀ ಗೋವಿಂದ ಎಂ. ಕಾರ್‌ಜೋಳ್ : ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಅರಗಜ್ಞಾನೇಂದ್ರರವರು ಮಾತನಾಡತಕ್ಕಂಥದ್ದರಲ್ಲಿ ಏನು ತಪ್ಪಿಲ್ಲ. ಏಕೆಂದರೆ ಒಂದು ಪಕ್ಷದ ಟ್ರೆಜರರ್ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜ್ ನಡೆಸುತ್ತಿದ್ದಾರೆ.

ಶ್ರೀ ಡಿ. ಮಂಜುನಾಥ್ : ನನಗೂ ಕೂಡ ಗೊತ್ತಿದೆ.

ಛೇರ್ಮನ್ : ಮಾನ್ಯ ಗೋವಿಂದ ಕಾರಜೋಳ್‌ರವರೆ, ದಯವಿಟ್ಟು ಇಷ್ಯೂಸ್ ಬಗ್ಗೆ ಮಾತನಾಡಿ.

ಶ್ರೀ ಗೋವಿಂದ ಎಂ. ಕಾರ್‌ಜೋಳ್ : ಅವರು ಹೇಳಿರತಕ್ಕಂಥದರಲ್ಲಿ ಏನೂ ತಪ್ಪಿಲ್ಲ.

ಶ್ರೀ ಡಿ. ಮಂಜುನಾಥ್ : ತಾವು ದಯವಿಟ್ಟು ಕುಳಿತುಕೊಳ್ಳಿ. ಈ ಕಗ್ಗಂಟನ್ನು ಯಾವರೀತಿಯಾಗಿ ಬಗೆಹರಿಸಬಹುದೆಂಬುದರ ಬಗ್ಗೆ ಸಲಹೆ ಸೂಚನೆಗಳನ್ನು ದಯವಿಟ್ಟು ಕೊಡಿ. ಸುಮ್ಮನೆ ಇದನ್ನು ಹೇಳುವುದನ್ನು ಬಿಟ್ಟು ಆ ಲಾಬಿ ಈ ಲಾಬಿ ಎಂದು ಹೇಳತಕ್ಕಂಥದ್ದಲ್ಲ. ಅದು ಈಗ ಏತಕ್ಕೆ ಬೇಕು?

ಶ್ರೀ ಅರಗಜ್ಞಾನೇಂದ್ರ : ಮಾನ್ಯ ಛೇರ್ಮನ್‌ರವರೆ, ನಮ್ಮ ಸರ್ಕಾರ 6 ಕೋಟಿ ಜನರನ್ನು ಪ್ರತಿನಿಧಿಸತಕ್ಕಂಥ ಒಂದು ಸರ್ಕಾರ ಹೆಚ್ಚು ಬಲವಾಗಿರಬೇಕು. ಆದ್ದರಿಂದ ತಾಕತನ್ನು ಈಗ ತೋರಿಸಬೇಕು. ಈ ವಿಷಯದ ಬಗ್ಗೆ ಇವರು ಸಭೆ ಸೇರತಕ್ಕಂಥದ್ದನ್ನು ನಾನು ಟಿ.ವಿ.ಯಲ್ಲಿ ನೋಡಿದ್ದೇನೆ. ಇದನ್ನು ತಾವೂ ಕೂಡ ನೋಡಿರಬಹುದು. ಇದು ಯಾವರೀತಿ ಇದೆ ಎಂದರೆ, ಸಭೆ ಸೇರಿ ಚಹಾ ಕುಡಿಯುವುದು ಅನಂತರ ಹೊರಕ್ಕೆ ಬರುತ್ತಾ ಏನು ಹೇಳುತ್ತಾರೆಂದರೆ, ಇವತ್ತಿನ ಮಾತುಕತೆ ವಿಫಲವಾಯಿತು ಮತ್ತೆ ಇನ್ನೊಂದು ಕಮಿಟಿ ರಚನೆ ಮಾಡಿದ್ದೇವೆ. ಆದ್ದರಿಂದ ಮಾತುಕತೆಯನ್ನು ಮತ್ತೆ ಮುಂದುವರಿಸುತ್ತೇವೆ. ಈಗ ಮಾತುಕತೆ ಮುರಿದು ಬಿದ್ದಿಲ್ಲವೆಂದು ಹೇಳುತ್ತಾರೆ. ಹಾಗಾದರೆ, ಮಾನ್ಯ ಮುಖ್ಯಮಂತ್ರಿಯವರು ಇರುವುದು ಯಾರಿಗೋಸ್ಕರ?

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅರಗಜ್ಞಾನೇಂದ್ರರವರು ಹಿರಿಯ ಸದಸ್ಯರಾಗಿದ್ದು, ಒಂದು ಒಳ್ಳೆಯ ಕೆಲಸವನ್ನೂ ಕೂಡ ಮಾಡುತ್ತಿದ್ದಾರೆ. ಮತ್ತೆ ಇದು ನಮ್ಮ ಜವಾಬ್ದಾರಿ ಕೂಡ ಇದೆ. ಇದೊಂದು ಜ್ವಲಂತವಾದ ಸಮಸ್ಯೆ ಮತ್ತು ಅನೇಕ ವಿದ್ಯಾರ್ಥಿಗಳ ಭವಿಷ್ಯ ಇದರಲ್ಲಿ ಅಡಗಿದೆ ಎನ್ನತಕ್ಕಂಥದ್ದು ನಿಜ. ಸರ್ಕಾರ ಗಟ್ಟಿಯಾಗಬೇಕಾದರೆ ಅವರಿಗೆ ಹೊಡೆಯಬೇಕೇ ಬಡಿಯಬೇಕೇ ಎಂಬುದನ್ನು ತಾವೇ ಹೇಳಿ. ಯಾವುದೇ ಒಂದು ಸರ್ಕಾರ ಸಂವಿಧಾನ ಮತ್ತು ಕಾನೂನು ಚೌಕಟ್ಟಿನೊಳಗೆ ಕೆಲಸ ಮಾಡಬೇಕಾಗುತ್ತದೆ. ಮಾನ್ಯ ಸಚಿವರು ಈಗಾಗಲೇ ಹೇಳಿದ್ದಾರೆ? ಆದ್ದರಿಂದ, ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುವುದೇನೆಂದರೆ, ಈ ಸಮಸ್ಯೆಯ ಬಗ್ಗೆ ಮತ್ತು ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಹಾಗೂ ಈಗ ಹೆಚ್ಚಾಗಿರುವ ಫೀ ಬಗ್ಗೆ ಇಲ್ಲಿರತಕ್ಕಂಥ 225 ಜನ ಸದಸ್ಯ ರದ್ದು ಯಾರದ್ದೂ ಭಿನ್ನಾಭಿಪ್ರಾಯ ಇಲ್ಲವೆಂದು ನನಗೆ ಕಾಣಿಸುತ್ತದೆ. ಇಲ್ಲಿರತಕ್ಕಂಥ ಎಲ್ಲರಿಗೂ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಚಿಂತನೆ ಇದೆ. ಆದ್ದರಿಂದ, ಇದರ ಬಗ್ಗೆ ಯಾರದ್ದೂ ಭಿನ್ನಾಭಿಪ್ರಾಯವಿಲ್ಲ. ಒಂದು ಕಾನ್‌ಸೆನ್ಸ್ ಅನ್ನು ನಿರ್ಮಾಣ ಮಾಡಬೇಕಾದರೆ ತಮ್ಮಂಥ ಅನುಭವಿ ಸದಸ್ಯರು ಸರ್ಕಾರಕ್ಕೆ ಮಾರ್ಗದರ್ಶನ ಮಾಡಬೇಕು. ಯಾವ ಪ್ರಕಾರ ಸರ್ಕಾರ ಹೋಗಬೇಕೆಂಬುದನ್ನು ತಾವು ಹೇಳಬೇಕಾಗುತ್ತದೆ. ಮತ್ತೆ ಫ್ಲೋರ್ ಲೀಡರ್ಸ್ ಜೊತೆ ಮತ್ತು ವಿದ್ಯಾರ್ಥಿ ಸಂಘಟನೆಗಳ ಜೊತೆ ಮಾತನಾಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಯವರು ಈಗಾಗಲೇ ಹೇಳಿದ್ದಾರೆ. ಈಗ ಮಾನ್ಯ ಗೋವಿಂದ ಕಾರ್‌ಜೋಳರವರು ಮಾತನಾಡುತ್ತಾ ಸರ್ಕಾರ ಮ್ಯಾನೇಜ್‌ಮೆಂಟ್ ಜೊತೆ.... ಮಾನ್ಯ ಜಾಲಪ್ಪನವರು ನಾವು ನೀವು ಜನತಾದಳದಲ್ಲಿದ್ದಾಗ ಅವರು ನಮ್ಮ ಜೊತೆಯಲ್ಲಿದ್ದರಲ್ಲವೇ? ಆದ್ದರಿಂದ, ಇವೆಲ್ಲಾ these are all accidents ಆದ್ದರಿಂದ, ಅದರ ಬಗ್ಗೆ ಇಲ್ಲಿ ಚರ್ಚೆ ಮಾಡುವುದು ಬೇಡ. ನಮ್ಮ ಕಡೆಯೂ ಕೂಡ ಕೆಲವು ಜನ ಮ್ಯಾನೇಜ್‌ಮೆಂಟ್ ಪ್ರತಿನಿಧಿಗಳಿರಬಹುದು. ಮತ್ತೆ ನಿಮ್ಮ ಕಡೆಯೂ ಕೂಡ ಈ

ರೀತಿಯ ಜನರಿದ್ದಾರೆ. ಅದಕ್ಕಿಂತ ನಾವೀಗ we are career, to worry about the interest of the students. ಮತ್ತೆ ಅವರ ಎಜುಕೇಷನ್ ಸ್ಟ್ಯಾಂಡರ್ಡ್‌ನ್ನು ಕೂಡ ಮೆಂಟೇನ್ ಮಾಡಬೇಕು. You cannot compromise the education standard. 21 ನೇ ಶತಮಾನದಲ್ಲಿ ಇದ್ದೀರಿ. If you understand ನಿಮ್ಮ ಹುಡುಗರು ಇಂಜಿನಿಯರ್ ಮತ್ತು ಡಾಕ್ಟರ್ ಆಗಬೇಕಾದರೆ ಅವರಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಸಿಗಬೇಕು. ಹಾಗೆಯೇ ಸಂಬಂಧಪಟ್ಟಂಥ ಸಂಸ್ಥೆಯಲ್ಲಿ ಮೂಲಭೂತವಾದ ವ್ಯವಸ್ಥೆ ಇರಬೇಕು. ಆಗ ಮಾತ್ರ ಒಳ್ಳೆಯ ಮಾನವ ಸಂಪನ್ಮೂಲ ನಿರ್ಮಾಣವಾಗುತ್ತದೆ. ಇದು ಒಳ್ಳೆಯ ವಿಚಾರವಿದೆ ಮತ್ತು ತಮಗೆ ಒಳ್ಳೆಯ ಮನಸ್ಸು ಇದೆ. ಮತ್ತೆ ನಮಗೂ ಕೂಡ ಅಧಿಕಾರ ಇದೆ. ಆದ್ದರಿಂದ ದಯಮಾಡಿ ಆ ಪ್ರಕಾರ ಒಳ್ಳೆಯ ಸಲಹೆ ಕೊಟ್ಟರೆ ನಮಗೂ ಅನುಕೂಲವಾಗಬಹುದೆಂದು ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಅರಗಜ್ಞಾನೇಂದ್ರ : ಮಾನ್ಯ ಛೇರ್ಮನ್‌ರವರೆ, ಮಾನ್ಯ ದೇಶಪಾಂಡೆಯವರೂ ಕೂಡ ಹಿಂದಿನ ಸರ್ಕಾರದಲ್ಲಿದ್ದರು. 2003ನೇ ಇಸವಿಯಲ್ಲಿ ಸುಪ್ರೀಂ ಕೋರ್ಟ್ ಒಂದು ತೀರ್ಮಾನ ನೀಡಿತು. ಅದರಲ್ಲಿ ಏನು ಹೇಳಿದೆ ಎಂದರೆ, ಆಡಳಿತ ಮಂಡಳಿ ಸೀಟ್ ಕೋಟಾವನ್ನು ಸ್ಥಳೀಯ ಅವಶ್ಯಕತೆಯ ಆಧಾರದ ಮೇಲೆ ನಿಗದಿಪಡಿಸುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದೆ ಎಂದು ಹೇಳಿತು. 2003ರ ತೀರ್ಪು ಬಂದು ಎಷ್ಟು ಸಮಯ ಆಯಿತು?

ಛೇರ್ಮನ್ : ಮಾತನಾಡುವವರು ನೋಟೀಸ್‌ನ್ನು ಕೊಟ್ಟಿರಬೇಕು, ನೋಟೀಸ್‌ಗೆ ಸಹಿ ಮಾಡಿದವರಿಗೆ ಮಾತ್ರ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕಾಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ : 2003ರಲ್ಲಿ ಸರ್ವೋಚ್ಚ ನ್ಯಾಯಾಲಯದಿಂದ ತೀರ್ಪು ಬಂದು ಎಷ್ಟು ಸಮಯವಾಗಿದೆ? ಇದು ನಿಮಗೆ ವೈಯಕ್ತಿಕವಾಗಿ ಅಲ್ಲ, ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ನಾವೆಲ್ಲರೂ ಕೆಟ್ಟ ಬಡತನದಿಂದ ಬಂದವರಾಗಿದ್ದೇವೆ, ನಾನು ಅಂತಹ ಕುಟುಂಬದಿಂದ ಬಂದವನಾಗಿದ್ದೇನೆ. ಇವತ್ತು ಆ ಮಕ್ಕಳ ಅಲೆದಾಟವನ್ನು ನೋಡಿದರೆ ಒಂದು ಬಿ.ಎ. ಡಿಗ್ರಿ ಮಾಡುವುದಕ್ಕೆ ಗತಿ ಇಲ್ಲದೆ ಇರುವಂತಹವನ ಮಗ 97,98,99, ಮಾರ್ಕ್ಸ್‌ನ್ನು ಪಡೆದುಕೊಂಡು ಶಾಲೆ ಬಿಡುತ್ತಾನೆ, ಆತನು ಸಿ.ಇ.ಟಿ.ನಲ್ಲಿ ಪಾಸಾದರೂ ಕೂಡ ಹೊರಗೆ ಬರುತ್ತಾನೆ ಎಂದು ಆದರೆ ನಾವು ನೀವುಗಳು ಅಧಿಕಾರದಲ್ಲಿ ಕುಳಿತುಕೊಂಡರೆ ಏನು ಸ್ವಾಮಿ ಪ್ರಯೋಜನ? 2003ರಲ್ಲಿ ಈ ತೀರ್ಪನ್ನು ಸುಪ್ರೀಂಕೋರ್ಟ್ ಕೊಟ್ಟಿದ್ದರೆ ಇದುವರೆವಿಗೂ ಸರ್ಕಾರ ಈ ಬಗ್ಗೆ ಕ್ರಮವನ್ನು ತೆಗೆದುಕೊಂಡಿಲ್ಲ ಏತಕ್ಕೆ? ಎಲ್ಲವನ್ನೂ ಮಾಡಬಹುದಾಗಿತ್ತಲ್ಲವೇ? ಚುನಾವಣೆಯ ಸಂದರ್ಭದಲ್ಲಿ ತಾವು ಇರಲಿಲ್ಲ. ಆಗ ಅಧಿಕಾರಿಗಳೆಲ್ಲರೂ ಇದ್ದರು, ಈ ಎಲ್ಲದರ ಬಗ್ಗೆಯೂ ಕೂಡ ಸರಿಪಡಿಸಬಹುದಾಗಿತ್ತು. ಇದರ ಕಡೆಗೆ ನಾವು ಗಮನವನ್ನು ಕೊಡಲಿಲ್ಲ, ಇದರ ಪರಿಣಾಮವನ್ನು ನಾವು ಅನುಭವಿಸುತ್ತಿದ್ದೇವೆ. ಮಾನ್ಯ ಛೇರ್ಮನ್‌ರವರೇ ಈಗಾಗಲೇ ತಮಗೆ ಗೊತ್ತಿದೆ, ಈ ಫೀ ಸ್ಟ್ರಕ್ಚರ್‌ನ್ನು ಮಾಡಿದರು. ಯಾವ ಆಧಾರದ ಮೇಲೆ ಸಮಿತಿಯವರು ಮಾಡಿದರು? ಎಂತಹದು ಎಂಬುದರ ಬಗ್ಗೆ ನನಗಂತೂ ಗೊತ್ತಿಲ್ಲ. ಇಂಜಿನಿಯರಿಂಗ್ ಸೀಟ್‌ಗೆ 8590 ರೂಪಾಯಿಗಳು ಇದ್ದದ್ದು 35000 ರೂಗಳನ್ನು ಖರ್ಚು ಮಾಡಿದ್ದು, ದಂತ ವೈದ್ಯಕೀಯ ಸೀಟು 15 ಪಟ್ಟು ಜಾಸ್ತಿಯಾಯಿತು. 13990 ರೂಪಾಯಿಗಳು ಇದ್ದದ್ದು 2 ಲಕ್ಷ ರೂಗಳಿಗೆ ಹೆಚ್ಚಾಯಿತು. ವೈದ್ಯಕೀಯದಲ್ಲಿ 19 ಪಟ್ಟು ಜಾಸ್ತಿ ಮಾಡಿದರು. 16200 ರೂಗಳಿಂದ 3 ಲಕ್ಷ ರೂಗಳಿಗೆ ಮಾಡಿದರು. ಇದರಿಂದಾಗಿ ಯಾವ ಸಾಮಾನ್ಯನ

ಮಗ ಒಂದು ಇಂಜಿನಿಯರಿಂಗ್ ಕೋರ್ಸ್‌ನಲ್ಲಿ 4 ವರ್ಷದಲ್ಲಿ ಮುಗಿಸಬೇಕಾದರೆ 21/2 ಲಕ್ಷ ದಿಂದ 5 ಲಕ್ಷ ರೂಪಾಯಿಗಳವರೆಗೆ ಆಗುತ್ತದೆಯೇ ಹೇಳಿ. ದಂತ ವೈದ್ಯಕೀಯ ಡಾಕ್ಟರ್ ಆಗಿ ಹೊರಬರಬೇಕಾದರೆ 10 ಲಕ್ಷ ರೂಪಾಯಿಗಳು ಖರ್ಚು ಆಗುವುದಾದರೆ, ವೈದ್ಯಕೀಯದಿಂದ ಬರಬೇಕಾದರೆ ಬರೀ ಫೀ 15 ಲಕ್ಷ ರೂಪಾಯಿಗಳನ್ನು ಕಟ್ಟುವುದಾದರೆ ಅವರುಗಳು ಹೊರಗೆ ಬಂದು ಮಾಡುವುದಾದರೂ ಏನು? ಅವರುಗಳು ಕಿಡ್ನಿ ತೆಗೆಯಬೇಕು. ಏನೇನು ಕದಿಯಬೇಕು, ಪಾರ್ಟ್ ಕದ್ದು ಮಾರಾಟ ಮಾಡಬೇಕು. ಆ ಇಂಜಿನಿಯರ್ ಸೇತುವೆ ಕಟ್ಟುವುದರೊಳಗಾಗಿ ಸೇತುವೆಯೂ ಬಿದ್ದುಹೋಗಬೇಕು. ಕಟ್ಟುವುದರೊಳಗಾಗಿ ಡ್ಯಾಂ ಬಿದ್ದುಹೋಗಬೇಕು ಅವರು ಇನ್ನೇನು ಬೇರೆ ಮಾಡುವುದಕ್ಕೆ ಸಾಧ್ಯ? ಇವತ್ತಿನದಿವಸ ಜಾಗತೀಕರಣದ ಸವಾಲುಗಳು ನಮ್ಮ ಎದುರುಗಡೆ ಬರುವಾಗ ಕರ್ನಾಟಕ ರಾಜ್ಯದ ವಿದ್ಯಾವಂತ ಯುವಜನರನ್ನು ತಯಾರು ಮಾಡತಕ್ಕಂತಹ ಆದ್ಯ ಕರ್ತವ್ಯ ಸರ್ಕಾರದ್ದು ಅಲ್ಲವೇ? ಉನ್ನತ ಶಿಕ್ಷಣದ ಮಹತ್ತರವಾದಂತಹ ಪಾತ್ರವನ್ನು ಜಾಗತೀಕರಣದ ವ್ಯವಸ್ಥೆಯಲ್ಲಿ ನಿರ್ವಹಿಸಬೇಕಾಗುತ್ತದೆ. ಇದರ ಬಗ್ಗೆ ನಾವು ಈಗಾಗಲೇ ಹೇಳಿದ್ದೇವೆ, ಮಾನ್ಯ ದೇಶಪಾಂಡೆಯವರು ತಾವೆಲ್ಲರೂ ನೋಡಬೇಕು, ಬಿ.ಎಂ. ಪಾಟೀಲ್ ಮೆಡಿಕಲ್ ಕಾಲೇಜ್ ಬಿಜಾಪುರ ಇದಕ್ಕೆ 2,52,000 ರೂಪಾಯಿಗಳು ಫೀ, ಫಿಕ್ಸ್ ಮಾಡುತ್ತೇವೆ, ಒಪ್ಪಿಕೊಳ್ಳುತ್ತಾರೇನೊ? ಸೆಂಟ್‌ಜಾನ್ಸ್ ಮೆಡಿಕಲ್ ಕಾಲೇಜ್ 1,47,000 ರೂ ಫೀ, ಅಲ್ಲಿರುವಂತಹ ಸೌಲಭ್ಯಗಳೇನು? ಸೆಂಟ್ ಜಾನ್ಸ್ ಮೆಡಿಕಲ್ ಕಾಲೇಜಿನಲ್ಲಿರುವಂತಹ ಸೌಲಭ್ಯಗಳೇನು? ಬೇರೆ ಬೇರೆ ಕಾಲೇಜುಗಳು 6–7 ಕಾಲೇಜುಗಳು ರಾತ್ರೋರಾತ್ರಿ ನಾವು ಈ ಮುರುಗೋಡು ಸಮಿತಿಗೆ ನಮಗೆ ಸಂಬಂಧವಿಲ್ಲವೆಂದು ರಾತ್ರೋ ರಾತ್ರಿ ಫೀ ಸ್ಟ್ರಕ್ಚರ್‌ನ್ನು ಜಾಸ್ತಿ ಮಾಡಿ ಇವತ್ತಿನದಿವಸ ಸುಪ್ರಿಂಕೋರ್ಟಿನ ಎದುರುಗಡೆ ಹೇಳುವುದಾದರೆ ನೀವು ಅದಕ್ಕೆ ಅವಕಾಶವನ್ನು ಕೊಡುವುದಾದರೆ ಇದನ್ನು ಇವರು ಯಾವ ಆಧಾರದ ಮೇಲೆ ಮಾಡಕಾಗುತ್ತದೆ?

ಶ್ರೀ ಆರ್.ವಿ. ದೇಶಪಾಂಡೆ : ಸರ್ಕಾರ ಯಾವುದಕ್ಕೂ ಹೆಚ್ಚು ಮಾಡಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ನೀವು ಮುರುಗೋಡು ಸಮಿತಿಯ ಫೀಯನ್ನು ಒಪ್ಪಿಕೊಳ್ಳುತ್ತಿಲ್ಲವೇ?

ಛೇರ್ಮನ್ : ಅವರು ಉತ್ತರವನ್ನು ಕೊಡುತ್ತಾರೆ.

ಶ್ರೀ ಅರಗ ಜ್ಞಾನೇಂದ್ರ : ಅಲ್ಲಾ, ಅಲ್ಲಾ ರಾತ್ರೋರಾತ್ರಿ ಫೀಯನ್ನು ಸರ್ಕಾರ ಹೆಚ್ಚು ಮಾಡಿದ್ದಲ್ಲಾ, ಈ 7 ಕಾಲೇಜುಗಳು ಹೆಚ್ಚು ಮಾಡಿಕೊಂಡು, ನಾವು ಈ ಫೀ ಸ್ಟ್ರಕ್ಚರ್ಸ್ ಮುರುಗೋಡು ಸಮಿತಿಯ ಫೀ ಸ್ಟ್ರಕ್ಚರ್‌ಗೂ ನಮಗೂ ಸಂಬಂಧವಿಲ್ಲವೆಂದು ಹೇಳಿ ರಾತ್ರೋರಾತ್ರಿ ಇವರು ಹೇಳಿದರು. ಈ ದುರವಸ್ಥೆಯಲ್ಲಿ ಇವತ್ತಿನದಿವಸ ನಾವು ಮತ್ತು ನೀವುಗಳೆಲ್ಲರೂ ಒಂದು ತರಹ ಅಸಹಾಯಕರಾಗಿ ಕುಳಿತುಕೊಳ್ಳುವಂತಹ ವ್ಯವಸ್ಥೆ ಬಂತಲ್ಲಾವೆಂದು ಹೇಳುವತಂಹದ್ದು. ನಾನು ಇವತ್ತು ಹೇಳುತ್ತೇನೆ, ಇದರ ಬಗ್ಗೆ ನನ್ನ ಸಲಹೆಯೂ ಇಷ್ಟೇ ತಾವು ಹೇಳಿದಿರಿ, ಎಸ್‌ಸಿ:ಎಸ್‌ಟಿ ಅಭ್ಯರ್ಥಿಗಳಿಗೆ ನಾವು ಅಷ್ಟನ್ನು ತುಂಬಿಕೊಡುವುದಾದರೆ 4 ಕೋಟಿ 20 ಲಕ್ಷ ರೂಪಾಯಿಗಳೂ ಬರುತ್ತದೆ. ನಮ್ಮ ಒಂದು ಕ್ಯಾಲ್ಕುಕಲೇಷನ್ ಪ್ರಕಾರ ಅಷ್ಟು ಹಣ ಬರುತ್ತದೆ. ಎಸ್‌ಸಿ:ಎಸ್‌ಟಿ ಒಟ್ಟಾರೆ ಸೀಟ್‌ನಲ್ಲಿ ಎಸ್‌ಸಿ:ಎಸ್‌ಟಿಗೆ ಇರತಕ್ಕಂತಹದ್ದು 268 ಸೀಟುಗಳು 4 ಕೋಟಿ 20 ಲಕ್ಷ ರೂಪಾಯಿಗಳಾಗುತ್ತದೆ. ವೈದ್ಯಕೀಯ ವಿದ್ಯಾರ್ಥಿಗಳ ಸೀಟಿಗೆ 50 ಪರ್ಸೆಂಟ್ ಎಂದು ಹೇಳಿದರೆ ಎಲ್ಲಾ ಸೀಟನ್ನು ತುಂಬಿಕೊಡುವುದಾದರೆ

ನಿಮಗೆ 15 ಕೋಟಿ ರೂಪಾಯಿಗಳು ಹಿಡಿಯುತ್ತದೆ. ಇಂಜಿನಿಯರಿಂಗ್ ಸೀಟು 50 ಪರ್ಸೆಂಟ್ ಎಂದು ಫೀ ತುಂಬಿಕೊಡುವುದಾದರೆ, 42 ಕೋಟಿ ರೂಪಾಯಿಗಳಾಗುತ್ತದೆ. ಒಟ್ಟಾರೆಯಾಗಿ ನೀವು 65 ಕೋಟಿ ರೂಪಾಯಿಗಳನ್ನು ಒಟ್ಟಾರೆಯಾಗಿ ನೀವು 65 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಮೀಸಲಾಗಿಟ್ಟರೆ 50 ಪರ್ಸೆಂಟ್ ಯಾವ ಸೀಟನ್ನು ಅಂದರೆ ಬಡವರು ಮಕ್ಕಳಿಗೆ ದಲಿತರ ಮಕ್ಕಳಿಗೆ ತುಂಬಬೇಕೋ ನಾವು ಎಲ್ಲವನ್ನು ಕೊಟ್ಟು ತುಂಬಬೇಕಾಗುತ್ತದೆ. ಈಗಾಗಲೇ ಇದರ ಬಗ್ಗೆ ಮಾನ್ಯ ಹಿರಿಯ ಸದಸ್ಯರು ಪ್ರಸ್ತಾಪ ಮಾಡಿದರು. ಸಾಧ್ಯವಾಗುವುದಾದರೆ ಎಲ್ಲವನ್ನೂ ಕೂಡ ಮಾಡಬೇಕು, ಮೆಡಿಕಲ್ ಕಾಲೇಜ್ ಮತ್ತು ಎಂಜಿನಿಯರಿಂಗ್ ಕಾಲೇಜುಗಳನ್ನು ರಾಷ್ಟ್ರೀಕರಣ ಮಾಡಲಿಕ್ಕೆ ಸಾಧ್ಯವಾ? ಇದನ್ನೂ ಕೂಡ ನಾವು ನಿಮ್ಮ ಹಿಂದೆ ಇದ್ದೇವೆ, ಏಕೆಂದರೆ ಇವತ್ತು ಪ್ರತಿಭಾವಂತರು ನಿರ್ಮಾಣವಾಗಬೇಕು, ಆ ಪ್ರತಿಭಾವಂತರೂ ಯಾರ ಮನೆಯಲ್ಲಿ ಹುಟ್ಟುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಹೋಟೆಲ್‌ನಲ್ಲಿ ಕೆಲಸ ಮಾಡತಕ್ಕಂತಹ ಒಬ್ಬ ಸಾಮಾನ್ಯ ಮಾಣಿಯ ಮಗನಾಗಿರಬಹುದು, ಅಥವಾ ಮೂಟೆ ಹೊರತಕ್ಕಂತಹ ಒಬ್ಬ ಹಮಾಲಿಯ ಮಗ ಆಗಿರಬಹುದು, ಈ ಪ್ರತಿಭಾವಂತರಿಗೆ ಕರ್ನಾಟಕ ರಾಜ್ಯದಲ್ಲಿ ಅವಕಾಶ ಸಿಗಬೇಕು. ಇದಕ್ಕೆ ನಮ್ಮ ನಾಗರೀಕ ಸರ್ಕಾರ ವಿಶೇಷವಾದಂತಹ ಒತ್ತನ್ನು ಕೊಡಬೇಕಾಗುತ್ತದೆ. ಇದನ್ನು ಹೊರತುಪಡಿಸಿ ಬೇರೆ ಏನು ಇದೆ? ದುರಸ್ಥಿ ಮಾಡುವುದು ಇನ್ನೆರಡು ವರ್ಷ ಹೋದರೂ ಅಡ್ಡಿಯಿಲ್ಲ, ಇವತ್ತು ನಮ್ಮ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕಾಗಿ ಮೊದಲನೆಯ ಆದ್ಯತೆಯನ್ನು ಕೊಡೋಣ. ಒಂದಿಷ್ಟು ಡಾಕ್ಟರ್‌ಗಳನ್ನು, ಒಂದಿಷ್ಟು ಎಂಜಿನಿಯರ್‌ಗಳನ್ನು ಪ್ರಾಮಾಣಿಕವಾಗಿ ದುಡಿಯುವಂತಹವರನ್ನು ನಿರ್ಮಾಣ ಮಾಡೋಣ. ಇಷ್ಟಿಷ್ಟು ಫೀಯನ್ನು ಕಟ್ಟಿ, ಇದನ್ನು ದುಡಿಮೆ ಮಾಡುವುದಕ್ಕೋಸ್ಕರ, ಸಮಾಜದ ಆರೋಗ್ಯವನ್ನು ಹಾಳು ಮಾಡತಕ್ಕಂತಹ ವ್ಯಕ್ತಿಗಳನ್ನು ನಿರ್ಮಾಣ ಮಾಡತಕ್ಕಂತಹ ಅವಶ್ಯಕತೆ ಇಲ್ಲ. ಈ ನಿಟ್ಟಿನಲ್ಲಿ ತಾವು ಆಲೋಚನೆಯನ್ನು ಮಾಡಬೇಕು. 65 ಕೋಟಿ ರೂಪಾಯಿಗಳ ಬಗ್ಗೆ ಇವತ್ತೇ ಅನೌನ್ಸ್ ಮಾಡಬೇಕು. ನಮ್ಮ ಸಂಪೂರ್ಣ ಸಹಮತಿ ಇದೆ, ನಮ್ಮ ನಾಯಕರೂ ಕೂಡ ಈಗಾಗಲೇ ಹೇಳಿದ್ದಾರೆ. ಇದಕ್ಕಾಗಿ 65 ಕೋಟಿ ರೂಪಾಯಿಗಳನ್ನು ಮೀಸಲಾಗಿಡಿ. ಇವರಷ್ಟು ಜನರಿಗೆ ಅಷ್ಟು ಹಣವನ್ನು ತುಂಬಿ. ಈ ರಾಜ್ಯದಲ್ಲಿ ಶಿಕ್ಷಣವನ್ನು ನಾವು ಕೊಡೋಣ. ಮುಂದಿನ ದಿನಗಳಲ್ಲಿ ಸರ್ಕಾರಕ್ಕೆ ಏನು ಅವಕಾಶವಿದೆ, ಕೋರ್ಟಿನ ಆದೇಶದ ಪ್ರಕಾರ ಸೀಟ್‌ನ್ನು ಅಲಾಟ್ ಮಾಡಿ ಅವರನ್ನು ಹಿಡಿತದಲ್ಲಿಡುವಂತಹ ಕೆಲಸವನ್ನು ತಾವು ಮಾಡಬೇಕು. ಮುಂದಿನ ದಿನಗಳಲ್ಲಿ ಹೆಚ್ಚು ಸರ್ಕಾರಿ ಮೆಡಿಕಲ್ ಕಾಲೇಜುಗಳನ್ನು ಮತ್ತು ಎಂಜಿನಿಯರಿಂಗ್ ಕಾಲೇಜುಗಳನ್ನು ಪ್ರಾರಂಭ ಮಾಡಿ ಉನ್ನತ ಶಿಕ್ಷಣವನ್ನು ಉಚಿತವಾಗಿ ಕೊಡುವಂತಹ ವ್ಯವಸ್ಥೆಯನ್ನು ಇವತ್ತು ಮಾಡಬೇಕಾಗುತ್ತದೆ. ಇನ್ನೂ ಒಂದು ಸಲ ಇದರ ಬಗ್ಗೆ ಹೇಳುತ್ತೇನೆ, ತಮಗೆ ಕಾಲೇಜುಗಳಿವೆ, ಮಾನ್ಯ ದೇಶಪಾಂಡೆಯವರೆ, ತಾವು ಗಮನಿಸಿ, ನಿಮ್ಮ ಭಾಗದಲ್ಲಿಯೂ ಕೂಡ ಇದೆ, ಇವತ್ತು ಖಾಸಗಿ ಆರ್ಡಿನರಿ ಡಿಗ್ರಿ ಕಾಲೇಜುಗಳಿವೆ, ಖಾಸಗಿ ನಿಮ್ಮ ಅನುದಾನಿತ ಕಾಲೇಜುಗಳಲ್ಲಿ ಲೆಕ್ಚರರ್ಸ್ ಪೋಸ್ಟ್ ನಿವೃತ್ತಿಯಿಂದಾಗಿ ಖಾಲಿಯಾದರೆ ನೀವು ತುಂಬಿಕೊಳ್ಳುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ. ಅವರು ಕೈಯಿಂದ ಹಾಕಿ ಮಕ್ಕಳಿಂದ ವಸೂಲಿ ಮಾಡಿ ಹಾಕುತ್ತಿದ್ದಾರೆ, ಅಲ್ಲಿ ಆರ್ಡಿನರಿ ಡಿಗ್ರಿ ಕೂಡ ನಿಮ್ಮ ಸರ್ಕಾರದಲ್ಲಿ ಇವತ್ತು ಪ್ರವೇಶ ಮಾಡುವ ಹಾಗಿಲ್ಲ. ಖಾಸಗಿ ಅನುದಾನಿತ ಕಾಲೇಜುಗಳಲ್ಲಿ 3 ರಿಂದ 4 ಸಾವಿರ ರೂಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಮೊನ್ನೆ ದಿವಸ ಸದನದಲ್ಲಿ ಈ ವಿಷಯದ ಬಗ್ಗೆ ಹೇಳಿದಿರಿ, ಇಲ್ಲ, ಡಿಸಿಯವರ

ನೇತೃತ್ವದಲ್ಲಿ ಒಂದು ಕಮಿಟಿ ಇದೆ, ಅವರು ಅವರ ಮಾನ್ಯತೆಯನ್ನು ರದ್ದು ಮಾಡುತ್ತಾರೆ. ಅವೆಲ್ಲ ಕಾನೂನುಗಳು ಸರಿಯಾಗಿದೆ. ಇದಕ್ಕೇನು ಹೇಳುತ್ತೀರಿ? ಅವರು ಎಲ್ಲಿಂದ ಹಾಕಬೇಕಾಗುತ್ತದೆ, ಅವರುಗಳು ಲೆಕ್ಚರರ್ಸ್‌ನ್ನು ಅಪಾಯಿಂಟ್ ಮೆಂಟ್ ಮಾಡಿಕೊಳ್ಳುವುದಕ್ಕೆ ನೀವು ಅವಕಾಶವನ್ನು ಮಾಡಿಕೊಡಬೇಕಲ್ಲಾ? ಇವತ್ತು ಪಿ.ಯು.ಸಿ. ನಲ್ಲಿ ಡೊನೇಷನ್‌ನ್ನು ಕೊಡುವುದಕ್ಕಾಗುವುದಿಲ್ಲವೆಂದು ತುಂಬುತ್ತಾರೆ, ನಾವು ಉನ್ನತ ಶಿಕ್ಷಣದ ಬಗ್ಗೆ ಹೇಳುತ್ತೇನೆ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಈಗಾಗಲೇ ಇದರ ಬಗ್ಗೆ ನಿಮ್ಮಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ. ಈಗ ಇದನ್ನು ಯಾವ ರೀತಿಯಲ್ಲಿ ಇತ್ಯರ್ಥ ಮಾಡಬೇಕು, ಇದರ ಬಗ್ಗೆ ನಿಮ್ಮ ಸಲಹೆಯನ್ನು ಕೊಡಿ ಎಂದು ನಾನು ಹೇಳಿದ್ದೇನೆ. ಅದನ್ನು ಬಿಟ್ಟು ತಾವು ಪಿ.ಯು.ಸಿ. ಮತ್ತು ಡಿಗ್ರಿ ಎಲ್ಲಾ ವಿಚಾರದ ಬಗ್ಗೆ ಏತಕ್ಕಾಗಿ ಹೇಳುವುದಕ್ಕೆ ಹೋಗುತ್ತಿದ್ದೀರಿ.

ಶ್ರೀ ಅರಗ ಜ್ಞಾನೇಂದ್ರ : ನಾನು ಉದಾಹರಣೆಯನ್ನು ಅಷ್ಟೇ ಹೇಳಿದ್ದೇನೆ. ಇವತ್ತಿನದಿವಸ ಈ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುನವರುಗಳ ಹಣದ ದಾಹ ಎಷ್ಟಿದೆ. ಎಂದರೆ ಮೊನ್ನೆ ಮೊನ್ನೆ ಅಶ್ವಥ್ ನಾರಾಯಣ ಅಂತ ಯಾರನ್ನೋ ಕಿಡ್ನಾಪ್ ಆಯಿತು, 35 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಸೀಟು ಕೊಡುತ್ತೇನೆಂದು ಹಣವನ್ನು ತಿಂದು ಅಲ್ಲಿಂದ ಬಂದು ಹೊಟ್ಟೆಹುರಿದು ಅವನನ್ನು ಎತ್ತಿಕೊಂಡು ಹೋದರು. ಇವತ್ತು ಏನಾಗುತ್ತಿತ್ತು ಹೇಳಿ, ಇಲ್ಲಿರುವಂತಹ ರೌಡಿಗಳಿಗೆ ಹಫ್ತ ಕೊಟ್ಟು ಅವರನ್ನು ಕಡಿದುಹಾಕು ಎಂದು ಹೇಳುತ್ತಾರೆ. ಯಾವ ತಂದೆ ತಾಯಿಗಳು ಸ್ವಾಮಿ 35 ಲಕ್ಷ ರೂಪಾಯಿಗಳನ್ನು ಕಳೆದುಕೊಂಡು ಇವತ್ತು ಬದುಕಿರುವ ಬದಲು ಇವರನ್ನು ತೆಗೆಯೋಣ ಎಂದು ಬರುತ್ತಾನೆ. ಇಂತಹ ಒಂದು ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಹಾಳಾಗಿ ಹೋಗುವಂತಹ ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿ ನಿರ್ಮಾಣವಾಗುವುದಿಲ್ಲವೇ? ಆದ್ದರಿಂದಾಗಿ ತಮ್ಮ ಬಗ್ಗೆ ಕೇಳುತ್ತೀರಿ, ತಾವು ಸಲಹೆಯನ್ನು ಕೊಡಿ ಎಂದು ಹೇಳುತ್ತೀರಿ, ನಾನು ಕೇಳುತ್ತೇನೆ, ನಾವು ಕೊಟ್ಟ ಎಲ್ಲಾ ಸಲಹೆಯನ್ನು ತಾವು ಪಡೆಯುತ್ತೀರಾ? ನಾವು ಇಲ್ಲಿ ಎದ್ದುನಿಂತುಕೊಂಡು ಪ್ರತಿಭಟನೆ ಮಾಡುತ್ತಿದ್ದರೆ, ನೀವು ಓಟಿಗೆ ಹಾಕಿಕೊಂಡು ಹೋಗುವುದಿಲ್ಲವೇ? ನೀವು ಹೇಳಿದರಲ್ಲಾ, ಮಾನ್ಯ ಸಿಂಧ್ಯಾರವರು ಇಲ್ಲಿ ಎಲ್ಲಿಯೋ ಇದ್ದಾರೆ? ಅವರು ಹೇಳಿದ್ದು ಏನು ಎಂದು ಹೇಳುತ್ತೇನೆ. ಅವರು ಏನು ಹೇಳಿದರು ಅಂದರೆ "ಸರ್ಕಾರ ಆಡಳಿತ ಮಂಡಳಿಯ ಕೈಗೊಂಬೆಯಾಗಿದೆ, ಈ ವರ್ಷ ಪರಿಶಿಷ್ಟರು ಮತ್ತು ಬಡವರು ಇತರ ಹಿಂದುಳಿದ ವಿದ್ಯಾರ್ಥಿಗಳಿಗೆ ವೃತ್ತಿತರ ಶಿಕ್ಷಣದ ಸೀಟುಗಳು ದೊರೆಯದೆ ಇವರ ಭವಿಷ್ಯ ನಾಶವಾದಂತೆ ಆಗಿದೆ. ಇದು ರಾಜ್ಯದ ಬಡವರಿಗೆ ಮಾಡಿದಂತಹ ಮಹಾದ್ರೋಹವಾಗಿದೆ. ಇದಕ್ಕಾಗಿ ಮುಖ್ಯಮಂತ್ರಿಗಳು ಕ್ಷಮೆಯನ್ನು ಕೇಳಬೇಕು." ಎಂದು ಹೇಳಿದ್ದರು. ಈ ಕಡೆಗೆ ಇದ್ದಾಗ ಒಂದು ಮಾತನ್ನು ಆಡಬಾರದು ಆ ಕಡೆಗೆ ಇದ್ದಾಗ ಒಂದು ಮಾತನ್ನು ಆಡಬಾರದು, ಇವತ್ತು ತಾವೆಲ್ಲರೂ ಅವರ ಜೊತೆಗೆ ಇದ್ದೀರಿ, ಟ್ರಜರಿ ಬೆಂಚಿನಲ್ಲಿದ್ದೀರಿ, ನಮಗೆ ನಂಬಿಕೆ ಇದೆ. ಈ ಮಾತುಗಳಿಗೆ ನಿಮ್ಮ ಬದ್ಧತೆ ಇರಲಿ, ಅಲ್ಲಿ ಅವರ ಜೊತೆ ಸೇರಿಕೊಂಡು ನಿಮಗೆ ಇನ್ನೊಂದಿಷ್ಟು ಶಕ್ತಿ ಜಾಸ್ತಿಯಾಗಿದೆ. ದಯವಿಟ್ಟು ಆ ಶಕ್ತಿಯನ್ನು ಕ್ರೋಢೀಕರಣ ಮಾಡಿ, ಆ ಶಕ್ತಿಯನ್ನು ಉಪಯೋಗಿಸಿಕೊಂಡು ಮಾಡಿ. ನಮ್ಮ ಸಲಹೆ ಎಂದು ತಿಳಿದುಕೊಳ್ಳಬೇಡಿ, ನಮ್ಮ ಸಲಹೆ ಎಂದು ಹೇಳಬೇಡಿ, ನಾವು ಹೀಗೆ ಮಾಡಿದ್ದೇವೆ ಎಂದು ಜನರ ಎದುರುಗಡೆ ಹೇಳಿ. ನಿಮಗೆ ಇನ್ನೊಂದಿಷ್ಟು, ಶಕ್ತಿ ಜಾಸ್ತಿಯಾಗುತ್ತದೆ. ಬಡವರ ಮಕ್ಕಳು ನಿಮ್ಮನ್ನು ಭವಿಷ್ಯದಲ್ಲಿ ನೆನಪು

ಮಾಡಿಕೊಂಡು ವ್ಯಾಸಂಗ ಮಾಡುತ್ತಾರೆ. ಆದ್ದರಿಂದ ದಯವಿಟ್ಟು ನಮ್ಮ ಸಲಹೆ ಏನೆಂದು ತಾವು ಕೇಳಿದರೆ, ನಮ್ಮ ಸಲಹೆ ಏನೆಂದರೆ ಇಮ್ಮೀಡಿಯೇಟಾಗಿ 65 ಕೋಟಿ ರೂಪಾಯಿಗಳನ್ನು ಇವತ್ತೇ ಅನೌನ್ಸ್ ಮಾಡಬೇಕು. ನಿಮಗೆ ಬದ್ಧತೆ ಇದ್ದರೆ ನೀವು ಏನೆಂದು ಅನೌನ್ಸ್ ಮಾಡಿ. ಒಟ್ಟಾರೆ ಆ ವಿದ್ಯಾರ್ಥಿಗಳಿಗೆ ದಿಕ್ಕನ್ನು ತೋರಿಸಿ. ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ಧನ್ಯವಾದಗಳು.

† **ಶ್ರೀ ವೈಜನಾಥ ಪಾಟೀಲ (ಚಿಂಚೋಳಿ)** : ಮಾನ್ಯ ಛೇರ್ಮನ್‌ರವರೆ ಸಿಇಟಿ ಬಗ್ಗೆ ಒಂದು ಕಡೆ ರಾಜ್ಯ ಸರ್ಕಾರ 75:25 ಎಂದು ಹೇಳುತ್ತದೆ, ಇನ್ನೊಂದು ಕಡೆ ಸುಪ್ರೀಂಕೋರ್ಟ್ 50:50 ಎಂದು, ಇದೆಲ್ಲಕ್ಕಿಂತ ಹೆಚ್ಚಿನ ಸಮಸ್ಯೆ ಎಂದರೆ ಫೀಸ್ ಸ್ಟ್ರಕ್ಚರ್ ಬಗ್ಗೆ, 100 ಪರ್ಸೆಂಟ್ ಎಲ್ಲಾ ಸೀಟ್ ಗೌರ್ನಮೆಂಟ್ ಕಡೆ ಇದ್ದರೂ ಕೂಡ ಫೀಸ್ ಕಟ್ಟುವುದು ಮೆರಿಟೋರಿಯಸ್ ವಿದ್ಯಾರ್ಥಿಗಳಿಗೆ ಸಾಧ್ಯವೇ ಇಲ್ಲ. ಇವತ್ತು ಮ್ಯಾನೇಜ್‌ಮೆಂಟ್‌ನವರು 25 ಪರ್ಸೆಂಟ್‌ಗೆ ಒಪ್ಪುತ್ತಿಲ್ಲ, ಟರ್ಮ್ಸ್ ಹೀಗೆಯೇ ಇರಬೇಕೆಂದು ಡಿಕ್ಟೇಟ್ ಮಾಡುತ್ತಿದ್ದಾರೆ. ಈಗಾಗಲೇ ನಮ್ಮ ಮಿತ್ರರು ಹೇಳಿದ ಹಾಗೆ ಮೆಡಿಕಲ್ ಲಾಬಿ ಬಹಳ ಸ್ಟ್ರಾಂಗ್ ಆಗಿದೆ. ನಮ್ಮ ಮಿತ್ರರು ಹೇಳಿದ ಹಾಗೆ ಯಾವ ತರಹ ಲಿಕ್ಕರ್ ಲಾಬಿ ಸ್ಟ್ರಾಂಗ್ ಆಗಿದೆ, ಅದೇ ತರಹ ಮೆಡಿಕಲ್ ಲಾಬಿ ಅಷ್ಟೊಂದು ಸ್ಟ್ರಾಂಗ್ ಆಗಿದೆ ಒಂದು ಕಡೆ ಹಣ ಬಹಳ ಕಾನ್‌ಸೆಂಟ್ರೇಟ್ ಆಯಿತು ಎಂದರೆ, ಅದು ಸಮಾಜಕ್ಕೆ ಒಳ್ಳೆಯದು ಅಲ್ಲ. ಒಂದು ಕಡೆ ಲಿಕ್ಕರ್ ಕಾಂಟ್ರಾಕ್ಟ್ಸ್ ಹೆಚ್ಚಾಗುತ್ತಿದೆ, ಇನ್ನೊಂದು ಕಡೆ ವಿಶೇಷವಾಗಿ ಮೆಡಿಕಲ್ ಕಾಲೇಜ್ ಏನು ನಡೆಸುತ್ತಿದ್ದಾರೆ, ಅವರು ಏನು ಬೇಕಾದರೂ ಮಾಡುತ್ತಿದ್ದಾರೆ. ಇವತ್ತು ಗೌರ್ನಮೆಂಟ್ ಪರವಾಗಿ ಕೋರ್ಟಿಗೆ ವಕೀಲರು ಹೋಗುತ್ತಾರೆ, ಅವರು ವಾದ ಮಾಡುವುದಿಲ್ಲ. ಮುರುಗೋಡ ಕಮಿಟಿ ಎಂದು ಮಾಡಿದ್ದಾರೆ, ಆ ಕಮಿಟಿ ರಿಪೋರ್ಟ್ ಏನು ಮಾಡಿದ್ದಾರೆ ಮ್ಯಾನೇಜ್‌ಮೆಂಟ್‌ನವರೇ ಅದನ್ನು ಡ್ರಾಫ್ಟ್ ಮಾಡಿಕೊಟ್ಟಿದ್ದಾರೆ, ಅದನ್ನೇ ಅವರು ಸೈನ್ ಮಾಡಿ ಕೊಟ್ಟಿದ್ದಾರೆ, draft is made by that management. ಮುರುಗೋಡು ವರದಿ ಅಲ್ಲ. ಮತ್ತೆ ಅದರ ವಿರುದ್ಧ ಹೈಕೋರ್ಟಿಗೆ ಅಪೀಲ್ ಹೋಗುತ್ತಾರೆ, ಅದು ಇದಕ್ಕಿಂತ ಹೆಚ್ಚಿನದು ಬೇಕೆಂದು. ಅಂದರೆ ಹೆದರಿಕೆಯನ್ನು ತೋರಿಸುವ ಸಲುವಾಗಿ ಮುರುಗೋಡು ವರದಿ ಮಾಡಿದ್ದು ಇವರೇ ಅದನ್ನು ಒಪ್ಪಬೇಕೆಂದು ತೋರಿಸಲಿಕ್ಕೆ ಮತ್ತೆ ಹೈಕೋರ್ಟಿಗೆ, ಅದು ಅದರ ವಿರುದ್ಧವಾಗುತ್ತದೆ. ಉಲ್ಟಾ ಚೋರ್ ಕೊತ್ವಾಲ್ ಕೋ ಡಾಂಟೇ ಅಂತ ನಮ್ಮ ಕಡೆ ಅಂತಾರೆ. ಅಂದರೆ, ಕಳ್ಳನೇ ಆ ಪೋಲೀಸರಿಗೆ ಸರಿಯಾಗಿ ನೋಡುತ್ತಿದ್ದಿಯೋ ಇಲ್ಲವೋ ಎಂದು ಆ ರೀತಿ ಆಗಿದೆ ಈ ಮ್ಯಾನೇಜ್‌ಮೆಂಟ್‌ನವರ ಪರಿಸ್ಥಿತಿ. ಸರ್ಕಾರ ಇಂತಹದ್ದಕ್ಕೆ ಈಲ್ಡ್ ಆಗಬಾರದು. ಎಲ್ಲಾ ರೀತಿಯ ಕೋ–ಆಪರೇಷನ್ ಕೊಡುವುದಕ್ಕೆ ಇವತ್ತು ಎಲ್ಲಾ ಪಕ್ಷದವರೂ ಕೂಡ ಹೇಳುತ್ತಿದ್ದಾರೆ. ಕಳೆದ ಅನೇಕ ವರ್ಷಗಳಿಂದ ಇದು ಏನು ನಡೆದುಕೊಂಡು ಬರುತ್ತಿದೆ, ಇಂತಹ ಇರೆಗ್ಯುಲ್ಯಾರಿಟೀಸ್ ಇದು ತಮಗೆ ಗೊತ್ತಿರಬಹುದು 1993 ರಿಂದ 1998 ರವರೆಗೆ ಒಂದು ನೋಟಿಫಿಕೇಶನ್‌ನ್ನು ಈ ತರಹ ಹೊರಡಿಸಿದ್ದರು. ಹಳ್ಳಿಗಳಿಗೆ 15, ಅರ್ಬನ್ 85 ಇದೇ ತರಹಃ ಅಡ್ಮಿಶನ್ ಕೊಟ್ಟುಕೊಂಡು ಹೋದರು, ಎಷ್ಟು ಕೋಟಿಯಾಯಿತು, ಬೇರೆ ರಾಜ್ಯಗಳವರಿಗೆ ಮಾರಿಕೊಂಡರು. ಅರ್ಬನ್ 85 ಎಂದು ಏಕೆ ಮಾಡಿದರು ಎಂದರೆ, ಯಾವುದೋ ಒಂದು ಸ್ಥಳದ ಸರ್ಟಿಫಿಕೇಟ್ ತೆಗೆದುಕೊಂಡು ಕೇರಳದವನಿಗೆ ಬೆಂಗಳೂರಿನ ವಾಸಿ ಎಂದು ಸರ್ಟಿಫಿಕೇಟ್ ಕೊಟ್ಟು ಸೀಟು ಕೊಟ್ಟು ಬಿಡುವುದು. 85 ಪರ್ಸೆಂಟ್ ಇರುವ ಸೀಟ್‌ಗಳನ್ನು

ಕೋಟ್ಯಾಂತರ ರೂಪಾಯಿಗಳಿಗೆ ಮಾರಿಕೊಂಡಿದ್ದಾರೆ. ಈ ತರಹ ಮಾಡಿದವರಿಗೆ, ಸರ್ಕಾರದವರು ಈಗ ಸದಸ್ಯರುಗಳಿಗೆ ಸಲಹೆ ಕೊಡಿ ಎಂದು ಹೇಳುತ್ತಿದ್ದಾರೆ, ನನ್ನ ಸಲಹೆಯಂತೆ ಆರ್ಡಿನೆನ್ಸ್ ತರಬೇಕು, ಈಗ ವಿಧಾನಸಭೆ ಅಧಿವೇಶನ ನಡೆಯುತ್ತಿದೆ ಒಂದು ಕಾನೂನನ್ನು ಮಾಡಬೇಕು, ಸರ್ಕಾರದ ವಶದಲ್ಲಿ ತೆಗೆದುಕೊಂಡು 75:25 ಗೆ ಅವರು ಒಪ್ಪಿಕೊಳ್ಳಬೇಕು. ಒಪ್ಪದಿದ್ದರೆ ಒಂದು ಆರ್ಡಿನೆನ್ಸ್ ತಂದು ಅಥವಾ ಬೇರೆ ಒಂದು ವ್ಯವಸ್ಥೆಯನ್ನು ಮಾಡಿ ಸರ್ಕಾರ ತನ್ನ ವಶದಲ್ಲಿ ತೆಗೆದುಕೊಳ್ಳಬೇಕು. ಕೆಲವೊಂದು ಸಲ ಕೋರ್ಟ್‌ಗಳು ಅಡ್ಡ ಬರುತ್ತವೆ, ಕಾಂಪೆನ್‌ಸೇಷನ್ ಕೊಡುವಂತಾಗಬಹುದು, ಕಾಂಪೆನ್‌ಸೇಷನ್ ದುಡ್ಡು ಕೊಡುವುದು ಜರೂರತೆ ಇಲ್ಲ. ಯಾವ ಸೊಸೈಟಿಗಳಿಗೂ ಕಾಂಪೆನ್‌ಸೇಷನ್ ಕೊಡುವ ಜರೂರತೆ ಇಲ್ಲವೇ ಇಲ್ಲ. ಅವರೆಲ್ಲಾ ಜನರ ಹಣದಿಂದಲೇ ಬಿಲ್ಡಿಂಗ್‌ನ್ನು ಕಟ್ಟಿಸಿರುವುದರಿಂದ ಅವರಿಗೆ ಯಾವ ಕಾಂಪೆನ್‌ಸೇಷನ್. ಅವರು ತಮ್ಮ ಹೊಲ, ಮನೆಗಳನ್ನು ಮಾಡಿ ಬಿಲ್ಡಿಂಗ್ ಕಟ್ಟಿಸಿದ್ದಾರೆಯೇ? ಅಂತಹ ಒಂದು ಕಾನೂನನ್ನು ಮಾಡಿ. without compensation, acquisition without compensation ಅಂಥ ಒಂದು ಆಕ್ಟ್ ಮಾಡಬೇಕು. ಅಂತಹ ಒಂದು ಬಿಲ್ ತರಬೇಕು, ಏಕೆ ಕಾಂಪೆನ್‌ಸೇಷನ್ ಕೊಡಬೇಕು? ಇಂತಹ ಒಂದು ಕಾನೂನನ್ನು ವಿಧಾನಸಭೆ ನಡೆಯುತ್ತಿರುವಾಗಲೇ ತರಬೇಕು. ಇದನ್ನು ಕರ್ನಾಟಕ ರಾಜ್ಯದಲ್ಲಿ ತಂದರೆ, ಇದೊಂದು ದೇಶಕ್ಕೆ ಹೊಸ ಮಾದರಿಯಾಗಬೇಕು. ಅವರು ಏನು ಬೇಕಾದಂತೆ ನಡೆಸುತ್ತಾರೆಯೆ? ನನಗೆ ಗೊತ್ತಿರುವಂತೆ ಗುಲ್ಬರ್ಗಾದ ಒಂದು ಮೆಡಿಕಲ್ ಕಾಲೇಜಿನಲ್ಲಿ ಜರ್ಮನಿಯಿಂದ ಬಂದು ಎರಡನೆಯ ಮಹಾ ಯುದ್ಧದಲ್ಲಿ ಒಬ್ಬ ನಿಜಾಮನು ಕಟ್ಟಿದ್ದು ಅದರ ಪ್ಲಾಂಟಿನಮ್, ಮತ್ತೊಂದು ಏನೇನೊ ಇತ್ತು, ಅದು ಏನು ಎನ್ನುವುದು ಗೊತ್ತಿರಲಿಲ್ಲ. 10 ಕೋಟಿ 20 ಕೋಟಿ ರೂಪಾಯಿಗಳಿಗೆ ಸೊಸೈಟಿಯವರು ಮಾರಿಕೊಂಡು ಬಿಟ್ಟರು. 10 ಕೋಟಿ ರೂಪಾಯಿಗಳಿಗೆ 20 ಕೋಟಿ ರೂಪಾಯಿಗಳು ಎಂದು ಹೇಳುತ್ತಾರೆ, ಅವರ ವಿರುದ್ಧ ಕ್ರಮ ಕೈಗೊಳ್ಳುವುದಕ್ಕಾಗುತ್ತದೆಯೆ ಈ ಸರ್ಕಾರಕ್ಕೆ; ಧೈರ್ಯಎಲ್ಲಿದೆ. ನಾಮಿನಲ್ ಆಗಿ ಒಂದು ಕೇಸ್‌ನ್ನು ಹಾಕಿಬಿಟ್ಟರು, ಅವರು ಜಾಮೀನು ಮಾಡಿಕೊಂಡು ಹೊರಗೆ ಬಂದರು. ಅಲ್ಲಿ ಒಂದು ಗಾಂಧಿಭವನ ಎಂದು ಒಂದು ಟ್ರಸ್ಟ್, ಮಾನ್ಯ ವೀರೇಂದ್ರ ಪಾಟೀಲ್‌ರು ಕಾಂಗ್ರೆಸ್ ಅಧ್ಯಕ್ಷರಾಗಿದ್ದರು, ಅನೇಕ ಕಡೆ ಟ್ರಸ್ಟ್‌ಗಳು ಇದ್ದವು, ಕಾಂಗ್ರೆಸ್ ಆಫೀಸಿನದ್ದು, ಅದರಲ್ಲಿ ಒಂದನ್ನು ಹೆಚ್.ಕೆ. ಸೊಸೈಟಿಗೆ ಕೊಟ್ಟರು. ಆ ಗಾಂಧಿಭವನ ಎನ್ನುವ ಹೆಸರಿನ ಮೇಲೆ ಸುಮಾರು ಒಂದು ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಅದರ ಕಟ್ಟಡದ ಸಲುವಾಗಿ ಖರ್ಚು ಮಾಡಿದರು. ಅಲ್ಲಿ ಗಾಂಧಿಭವನವೂ ಇಲ್ಲ ಯಾವ ಭವನವೂ ಇಲ್ಲ. ಆ ಒಂದು ಕೋಟಿ ರೂಪಾಯಿಗಳಿಗೆ ಯಾವ ಲೆಕ್ಕವೂ ಇಲ್ಲ. ಇವತ್ತು ಅವನಿಗೆ ಸಂಬಳವನ್ನು ಕೊಡುತ್ತಿದ್ದೇವೆ. ಮುರುಗೋಡ ಕಮಿಟಿಯವರು ಏನು ರಿಪೋರ್ಟ್‌ನ್ನು ಕೊಟ್ಟಿದ್ದಾರೆ, ಅದರ ಆಧಾರದ ಮೇಲೆ ಇಷ್ಟು ಲೆಕ್ಚರರ್, ಇಷ್ಟು ಸ್ಟಾಫ್, ಇಷ್ಟು ಇನ್‌ಸ್ಟ್ರುಮೆಂಟ್ಸ್, ಇದರ ಸಲುವಾಗಿ ಒಂದು ಸೀಟ್‌ಗೆ ಒಬ್ಬರಿಗೆ 1.60 ಲಕ್ಷ 1.70 ಲಕ್ಷ ಫೀಸ್ ಎಂದು ಮಾಡಿಬಿಟ್ಟಿದ್ದಾರೆ. ಅವರು ಅಲ್ಲಿ ಮೈಂಡೇ ಅಪ್ಲೈ ಮಾಡಿಲ್ಲ, ಏಕೆಂದರೆ ಆ ಮುರುಗೋಡ ಸಮಿತಿ ರಾಜೀನಾಮೆ ಕೊಟ್ಟಿದೆ. ಅವರ ರಿಪೋರ್ಟ್‌ನ್ನು ಮೊನ್ನೆ ನಾನು ಡಸ್ಟ್‌ಬಿನ್‌ಗೆ ಒಗೆಯಿರಿ ಎಂದು ಪತ್ರಿಕೆಗೆ ಹೇಳಿದ್ದೇನೆ. ಯಾವ ಒಳ್ಳೆಯ ರಿಪೋರ್ಟ್‌ಗಳು ಇರುತ್ತವೆ, ಆ ಕಡೆ ಸರ್ಕಾರದವರು ನೋಡುವುದಿಲ್ಲ. ಡಸ್ಟ್‌ಬಿನ್‌ಗಳಿಗೆ ಹಾಕಬೇಕಾದಂಥ ರಿಪೋರ್ಟ್‌ಗಳಿಗೆ ಒತ್ತು ಕೊಡುತ್ತಾರೆ ಈ

ಮ್ಯಾನೇಜ್‌ಮೆಂಟ್‌ನವರು. ಆದ್ದರಿಂದ ಸರ್ಕಾರದವರು ಸ್ವಲ್ಪ ಚುರುಕ ಮುಟ್ಟಿಸಿರಿ, ಈ ಸೊಸೈಟಿಯವರು ಎಷ್ಟು ಶಕ್ತಿಶಾಲಿಯಾಗಿದ್ದಾರೆ ಎನ್ನುವುದು ನಮಗೆ ಗೊತ್ತಿಲ್ಲವೆ? ಅವರು ನಾಳೆ ಅಥವಾ ನಾಡಿದ್ದು ನಿಮಗೆ ಬಂದು ಕಾಲು ಹಿಡಿದುಕೊಳ್ಳುತ್ತಾರೆ. ಕೋರ್ಟ್ ಒಂದು ಸಲ ಅಡ್ಡ ಬಂದರೂ ಕೂಡ ಮತ್ತೆ ಅದರ ವಿರುದ್ಧವಾಗಿ ಹೋಗುವುದು. ಮಹಾರಾಷ್ಟ್ರದಲ್ಲಿ ಕೂಡ ಕೋರ್ಟ್‌ಗಳು ಅಡ್ಡ ಬಂದಿದ್ದವು ಮೆಡಿಕಲ್ ಅಡ್ಮಿಶನ್ ಬಗ್ಗೆ, ಆಗ ಅಧಿವೇಶನ ಇರಲಿಲ್ಲ, ಮತ್ತೆ ಆಗ ಸರ್ಕಾರ ಆರ್ಡಿನೆನ್ಸ್ ತಂದಿತು. ಮತ್ತೆ ಸುಪ್ರೀಂಕೋರ್ಟಿಗೆ ಹೋದರು, ಪುನಃ ಪುನಃ ಹೋಗುತ್ತಾರೆ. ಈ ದೇಶದಲ್ಲಿ ಬ್ಯಾಂಕ್‌ಗಳು ನ್ಯಾಷನಲೈಸ್ಡ್ ಆಗಿವೆ, privy purse ಅಬಾಲಿಷ್ ಆಯಿತು. ಆಗ ಕೂಡ ಸುಪ್ರೀಂಕೋರ್ಟ್ ಅಡ್ಡ ಬಂದಿತು. ಪುನಃ ಪುನಃ ಸರ್ಕಾರ, ಪಾರ್ಲಿಮೆಂಟ್ ಅಥವಾ ಜುಡಿಸಿಯರಿ confrontation ಆಗಿ, ಕೊನೆಗೆ ಜುಡಿಸಿಯರಿ ಕೊನೆಗೆ ಈಲ್ಡ್ ಆಗಬೇಕಾಯಿತು ಬ್ಯಾಂಕ್ ನ್ಯಾಷನಲೈಸೇಷನ್‌ನಲ್ಲಿ. ಆ ತರಹ ಪಬ್ಲಿಕ್ ಒಪೀನಿಯನ್ ಬಿಲ್ಡ್ ಆಫ್ ಮಾಡಿದರೆ ಕೋರ್ಟ್ ಅವರದೇ ನಡೆಸುತ್ತಾರೆಂದು ಆಗ ಕೋರ್ಟಿನವರು ಪಬ್ಲಿಕ್ ಒಪೀನಿಯನ್ ನೋಡುತ್ತಾರೆ. ಜನರ ಭಾವನೆಗಳು ಏನು? ಜನರಿಗೆ ಏನು ಬೇಕು, ಇಲ್ಲಿ ಅಂತಹ ಒಂದು ಧೈರ್ಯವನ್ನು ನಾವು ಮಾಡುತ್ತಿಲ್ಲ. ಅದರ ಸಲುವಾಗಿ ಕೋರ್ಟಿನವರು, ನಮ್ಮ ಗೌರ್ನಮೆಂಟ್ ವಕೀಲರು, ಮ್ಯಾನೇಜ್‌ಮೆಂಟ್ ಎಲ್ಲರೂ ಕೂಡಿಕೊಂಡು ಲೂಟಿಯನ್ನು ಹೊಡೆಯುತ್ತಿದ್ದಾರೆ. ಆ ದೃಷ್ಟಿಯಿಂದ ಸರ್ಕಾರ ಇದಕ್ಕೆ ಒಂದು ಕಾನೂನನ್ನು ಮಾಡಲಿ. ಅದಕ್ಕೆ ಒಪ್ಪದಿದ್ದರೆ ಒಂದು ಆರ್ಡಿನೆನ್ಸ್ ತಂದು, immediately without compensation ಎಲ್ಲಾ ಮ್ಯಾನೇಜ್‌ಮೆಂಟ್‌ಗಳನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು, ಇಲ್ಲಿ ಹೊಸದಾದ ಒಂದು ಐತಿಹಾಸಿಕ ಇತಿಹಾಸವನ್ನು ಈ ಸರ್ಕಾರದವರು ನಿರ್ಮಾಣ ಮಾಡಬೇಕು. ಬಹುಶಃ ಇದನ್ನು ಮಾಡಿದರೆ ಜನ ನಮ್ಮ ಜೊತೆ ಇರುತ್ತಾರೆ. ಇದರಿಂದ ಮಾನ್ಯ ಧರ್ಮಸಿಂಗ್‌ರವರ ಸರ್ಕಾರ ಹೋದರೂ ಪರವಾಗಿಲ್ಲ. ಮತ್ತೆ ಪುನಃ ಜನರ ಎದುರು ಹೋದರೆ ಆಗ ಜನರು ಅಪ್ರೀಷಿಯೇಟ್ ಮಾಡುತ್ತಾರೆ. ಜನರು ನಮ್ಮನ್ನು ಇದಕ್ಕಿಂತ ಭಾರಿ ಬಹುಮತದಿಂದ ಆರಿಸಿ ತರಬಹುದು, ಇದೊಂದು ದೊಡ್ಡ ಇಷ್ಯು ಇದೆ, ಅವರು exploitation ಮಾಡುತ್ತಿದ್ದಾರೆ? ಒಬ್ಬರ ಕೈಮೇಲೆ ಕೈ ಇಟ್ಟುಕೊಂಡು ಕುಳಿತರೆ, ಈ ಮ್ಯಾನೇಜ್‌ಮೆಂಟ್‌ನವರು ಹೇಗೆ ಕುಣಿಯುತ್ತಾರೆ, ನೀವು ಹಾಗೆಯೇ ಕುಣಿಯಿರಿ ಎಂದು ಜನರು ನಮ್ಮನ್ನು ಆರಿಸಿ ಕಳುಹಿಲ್ಲ. ಜನರ ಹಿತವನ್ನು ಮಾಡಲಿಕ್ಕೆ ಆರಿಸಿ ಕಳುಹಿಸಿದ್ದಾರೆ. ಆ ದೃಷ್ಟಿಯಿಂದ ಈ ಸರ್ಕಾರ ಇದರ ಬಗ್ಗೆ ಬಹಳ prompt ಬಹಳ ಧೈರ್ಯದಿಂದ ಒಂದು ಐತಿಹಾಸಿಕ ನಿರ್ಣಯವನ್ನು ತೆಗೆದುಕೊಂಡು ಏನು ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರು ತಲೆ ಎತ್ತುತ್ತಿದ್ದಾರೆ ಅವರನ್ನು ಬಗ್ಗು ಬಡಿಯಬೇಕೆಂದು ಹೇಳಿ, ನಾನು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್ : ಮಾನ್ಯ ಬಸವರಾಜ್‌ರವರೆ, ನೇರವಾಗಿ ತಮ್ಮ ಸಲಹೆಗಳನ್ನು ಕೊಡಿ.

† **ಶ್ರೀ ಹೆಚ್.ಡಿ. ಬಸವರಾಜು (ವೀರಾಜ್‌ಪೇಟೆ)** : ಮಾನ್ಯ ಅಧ್ಯಕ್ಷರೆ, ಈ ಸಿ.ಇ.ಟಿ. ವಿಚಾರದಲ್ಲಿ ಇದುವರೆಗೆ ಹಲವಾರು ಜನ ಗೌರವಾನ್ವಿತ ಸದಸ್ಯರುಗಳು ತಮ್ಮದೇ ಆದಂಥ ಅಭಿಪ್ರಾಯವನ್ನು ಮಂಡನೆ ಮಾಡಿದ್ದಾರೆ. ಈ ಮಂಡನೆ ಮಾಡಿದಂಥ ವಿಷಯಗಳನ್ನು ಅವಲೋಕನೆ ಮಾಡಿದಾಗ ಉಚ್ಚನ್ಯಾಯಾಲಯ ತನ್ನ ತೀರ್ಪನ್ನು ಕೊಡುವಂಥ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದ್ದನ್ನು ಇಲ್ಲಿ ಉಲ್ಲೇಖ ಮಾಡಲಿಕ್ಕೆ ಮತ್ತು ಅದನ್ನು ತಮ್ಮ ಗಮನಕ್ಕೆ ತರಲು ಇಚ್ಛೆಪಡುತ್ತೇನೆ.

"ಶಿಕ್ಷಣ ಎಂಬುದು ಮಾರಾಟದ ಸರಕಲ್ಲ, ಅದೊಂದು ಸೇವಾಕ್ಷೇತ್ರ" ಉಚ್ಚನ್ಯಾಯಾಲಯ ಹೇಳಿದೆ. ತನ್ನ ಒಂದು ತೀರ್ಪಿನಲ್ಲಿ ಈ ಸಿಇಟಿ ಯ ಹಂಚಿಕೆಯ ಒಂದು ವಿಚಾರದಲ್ಲಿ ಪ್ರಸ್ತಾವನೆ ಅದರ ಮುಂದೆ ಇರುವಂಥ ಒಂದು ಸಂದರ್ಭದಲ್ಲಿ ಈ ಒಂದು ವಾಕ್ಯವನ್ನು ನುಡಿದು ಅದರ ಮಹತ್ವವನ್ನು ತಿಳಿಸಿ ಹೇಳುವಂಥ ಒಂದು ಪ್ರಯತ್ನವನ್ನು ಮಾಡಿದರು. ಬಹುಶಃ ಆ ಒಂದು ಪ್ರಯತ್ನಕ್ಕೆ ತಕ್ಕದಾದಂಥ ರೀತಿಯಲ್ಲಿ, ಶಿಕ್ಷಣ ಸಂಸ್ಥೆಗಳು ಯಾವರೀತಿ ಇವತ್ತು ನಡೆದುಕೊಂಡು ಬರುತ್ತಿವೆಯೋ ಯಾವ ಉದ್ದೇಶಕ್ಕೋಸ್ಕರ ಅವರು ಅದನ್ನು ರೂಪಿಸಿದರೋ ಆ ಉದ್ದೇಶದ ಸಫಲತೆ ಇವತ್ತು ಈಡೇರುತ್ತಿಲ್ಲ.

5.10 ಪಿಎಂ

ಆದರೆ ಬಹುಶಃ ಈ ಒಂದು ಸಂದರ್ಭದಲ್ಲಿ ಒಂದು ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಶಿಕ್ಷಣ ಶುಲ್ಕ 3,560 ರೂಪಾಯಿ ಇದ್ದದ್ದು ಇವತ್ತು 35,000 ರೂಪಾಯಿಗಳಿಗೆ ಏರಿದೆ. ಒಬ್ಬ ಸಾಮಾನ್ಯ ಗ್ರಾಮೀಣ ಪ್ರದೇಶದ ಮನುಷ್ಯ ತನ್ನ ಮಗನನ್ನು ಏನಾದರೂ ಇಂಜಿನಿಯರಿಂಗ್ ಮಾಡಬೇಕೆಂದರೆ ನಾಲ್ಕು ವರ್ಷಗಳಿಗೆ ಎರಡೂವರೆ ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕಾಗುತ್ತದೆ. ಅಧ್ಯಕ್ಷರೇ, ನಾನೂ ಕೂಡ ಇಂಜಿನಿಯರಿಂಗ್ ಓದಿದ್ದೇನೆ. ಬಹುಶಃ ತಾವು ನಂಬಲಿಕ್ಕೆ ಸಾಧ್ಯವಿಲ್ಲವೆಂದು ಕಾಣಿಸುತ್ತದೆ. ನಾನು ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜಿನಲ್ಲಿ ವರ್ಷಕ್ಕೆ ಇಪ್ಪತ್ತೈದು ರೂಪಾಯಿಗಳನ್ನು ಮಾತ್ರ ಕಟ್ಟುತ್ತಿದೆ. ಅದನ್ನು ಲ್ಯಾಬ್ ಫೀ ಅಂತ ಹೇಳುತ್ತಿದ್ದರು ಮತ್ತು ಬೇರೆ ಇನ್ನೇನೂ ಇಲ್ಲ. ಅಂದರೆ ಆ ಮಟ್ಟದಲ್ಲಿ ಪರಿಶಿಷ್ಟರಿಗೆ ಒಂದು ಸೌಕರ್ಯ, ಸೌಲಭ್ಯ ಇತ್ತು. ಇವತ್ತು ಯಾವ ಮಟ್ಟದಲ್ಲಿ ನೀವು ರೂಪಿಸುತ್ತಿದ್ದೀರಿ ಎನ್ನತಕ್ಕದ್ದು ಗೊತ್ತಿಲ್ಲ. ಮಾನ್ಯ ಶಿಕ್ಷಣ ಮಂತ್ರಿಗಳು ಸ್ವಲ್ಪ ಗಮನಿಸಬೇಕು. ಏಕೆಂದರೆ ಪರಿಶಿಷ್ಟರ ವಿಚಾರ ಬಂದಂಥ ಸಂದರ್ಭದಲ್ಲಿ ಇವತ್ತು ಅನುಪಾತಕ್ಕೆ ಹೋಗಿದ್ದೀರಿ. 50:50 ರ ಅನುಪಾತ ಅಂತ ಇದೆ. ಇವತ್ತು ಪರಿಶಿಷ್ಟ ಜಾತಿ ಮತ್ತು ಪಂಗಡದವರ ಹಣವನ್ನು ನೀವು ಯಾವರೀತಿ ಭರಿಸುತ್ತೀರಿ? ಅವರಿಗೆ ನಿಮ್ಮದೇ ಆದಂಥ ನೀತಿನಿಯಮಗಳು ಏನು? ಇವತ್ತು ಬಡತನದಿಂದ ಬಂದಿರತಕ್ಕಂಥ ಆ ವರ್ಗದವರು ಓದಬೇಕು ಎಂದರೆ ನಿಮ್ಮ ಈ ಒಂದು ನೀತಿಯಲ್ಲಿ ಅವರಿಗೆ ಏನು ಸೌಲಭ್ಯವನ್ನು ಕಲ್ಪಿಸಿಕೊಟ್ಟಿದ್ದೀರಿ? ಪ್ರತಿವರ್ಷ ಹೆಚ್ಚಳ ಆಗುತ್ತಿದೆಯಲ್ಲಾ. ಇದು ನನಗೆ ಅರ್ಥವಾಗುತ್ತಿಲ್ಲ. ಇದೇನು ಷೇರುಮಾರುಕಟ್ಟೇನಾ? ಷೇರು ಮಾರುಕಟ್ಟೆಯಾಗಿದ್ದರೆ ಅಲ್ಲಿ ಷೇರುಗಳ ಬೆಲೆ ಇಳಿಯುತ್ತದೆ ಮತ್ತು ಏರುತ್ತದೆ. ಆದರೆ ಇದು ಇಳಿಯುತ್ತಿಲ್ಲ. ಬರೇ ಏರುತ್ತಲೇ ಇದೆ. ಈ ಏರುವಂತಹ ಒಂದು ಪದ್ಧತಿ ಇರುವಾಗ ಯಾವ ಕಾರಣಕ್ಕೋಸ್ಕರ ಈ ಶುಲ್ಕವನ್ನು ಏರಿಸಬೇಕು ಮತ್ತು ಇದು 50:50 ಅನುಪಾತಕ್ಕೋ, 75:25ರ ಅನುಪಾತಕ್ಕೋ ಏಕೆ ಒಪ್ಪಿಕೊಳ್ಳುತ್ತಿಲ್ಲ? ಏನಾದರೂ ಪ್ರತಿವರ್ಷ ಅಲ್ಲಿ ಕೆಲಸ ಮಾಡುವಂಥ...

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗ ಸುಪ್ರೀಂಕೋರ್ಟ್ ಗೈಡ್‌ಲೈನ್ಸ್ ಪ್ರಕಾರವೇ ವೆಂಕಟರಾಮನ್ ಕಮಿಟಿ ಆಗಿದ್ದು ಮತ್ತು ಮುರುಗೋಡ್ ಕಮಿಟಿ ಆಗಿದ್ದು, ಸರ್ಕಾರ ಇವತ್ತಿನ ದಿವಸ ಈ ಏರಿಕೆಯನ್ನು ಮಾಡಿಲ್ಲ. ಆ ಕಮಿಟಿಯ ಮುಂದೆ ಸರ್ಕಾರವೂ ಹೋಯಿತು ಮತ್ತು ಆಮೇಲೆ ಮ್ಯಾನೇಜ್‌ಮೆಂಟ್‌ನವರೂ ಹೋಗಿ ಕೊನೆಗೆ ಇಬ್ಬರ ಕಡೆಯಿಂದಲೂ ಹೇಳಿಕೆಯನ್ನು ಕೇಳಿ ಅವರು ಫಿಕ್ಸ್ ಮಾಡಿರುವುದು. ಇದು ಸರ್ಕಾರ ಫಿಕ್ಸ್ ಮಾಡಿದ್ದು ಅಲ್ಲ, ಇದನ್ನು ದಯವಿಟ್ಟು ಅರ್ಥಮಾಡಿಕೊಳ್ಳಿ. ನೀವು ಸರ್ಕಾರ ಏರಿಸುತ್ತಲೇ ಹೋಯಿತು ಎಂದು ಹೇಳಿದಿರಿ.

ಶ್ರೀ ಗೋವಿಂದ ಎಂ. ಕಾರಜೋಳ : ಸರ್ಕಾರ ಮಾಡಿರಲಿಕ್ಕಿಲ್ಲ. ಆದರೆ ಸರ್ಕಾರ ಇದಕ್ಕೆ ಅವಕಾಶ ಮಾಡಿಕೊಟ್ಟಿದೆ.

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಮಂತ್ರಿಗಳೇ, ಈಗ ನನಗೆ ಒಂದು ಅರ್ಥ ಆಗಿಲ್ಲ. ತಾವು ಹಿರಿಯ ಸಚಿವರು ಇದ್ದೀರಿ. ಸಕಾರ ಅನುವು ಮಾಡಿಕೊಟ್ಟಿತು ಎಂದರೆ ಪ್ರತಿವರ್ಷ ಆ ಅಧ್ಯಾಪಕರಿಗೆ ಸಂಬಳ ಜಾಸ್ತಿಯೇನಾದರೂ ಕೊಡುತ್ತೀರಾ? ನೀವು ಹೇಳಿ. ಅನುಪಾತ ಯಾವರೀತಿ ಮಾಡಿಕೊಳ್ಳುವುದಕ್ಕೆ ನೀವು ಅವಕಾಶವನ್ನು ಕೊಟ್ಟಿರೋ ಆ ಅನುಪಾತದ ಪ್ರಕಾರ ಅಲ್ಲಿ ಕಲಿಸುವಂತಹ ಅಧ್ಯಾಪಕರಿಗೆ ಸಂಬಳ ಏನಾದರೂ ಜಾಸ್ತಿಯಾಗಿದೆಯಾ ಅಥವಾ ಹೊಸ ಕಟ್ಟಡ ಏನಾದರೂ ಬಂದಿದೆಯಾ? ಅಥವಾ ಹೊಸ ಕಟ್ಟಡ ಏನಾದರೂ ಬಂದಿದೆಯಾ? ಅಥವಾ ವಿದ್ಯಾರ್ಥಿಗಳಿಗೆ ಬೇರೆಬೇರೆ ರೀತಿಯ ಸೌಲಭ್ಯಗಳು ದೊರೆತಿದೆಯಾ? ಇಲ್ಲ, ಖಂಡಿತ ಇದು ಆಗಿಲ್ಲ. ನಾನು ಕೆಲವು ಕಾಲೇಜುಗಳಿಗೆ ಹೋಗುತ್ತೇನೆ. ಹಾಗೆ ಹೋಗುವ ಅಭ್ಯಾಸವನ್ನು ಇಟ್ಟುಕೊಂಡಿದ್ದೇನೆ. ಅಲ್ಲಿ ಹೋಗಿ ನೋಡಿದಾಗ ಐದು ವರ್ಷಗಳ ಹಿಂದೆ ಏನು ಇತ್ತೋ ಈಗಲೂ ಹಾಗೆಯೇ ಇದೆ. ಆದರೆ ಐದು ವರ್ಷಗಳ ಹಿಂದೆ ಇದ್ದಂಥ ಶಿಕ್ಷಣ ಶುಲ್ಕ ಇವತ್ತು ನಾಲ್ಕು ಪಟ್ಟು ಏರಿಬಿಟ್ಟಿದೆ. ಇದಕ್ಕೆ ಕಾರಣ ಏನು? ಎಲ್ಲಿಯಾದರೂ ಒಂದು ರೀತಿಯಲ್ಲಿ ಶುಲ್ಕವನ್ನು ನಿಗದಿಪಡಿಸುವಾಗ ಯಾವುದಾದರೂ ಒಂದು ತಕ್ಕಡಿ ಇಟ್ಟು ಮಾನದಂಡದಿಂದ ಅಳೆಯಬೇಕಲ್ಲಾ ಮಾನ್ಯಮಂತ್ರಿಗಳೇ? ಆದರೆ ಅದು ಇವತ್ತು ಕಾಣುತ್ತಿಲ್ಲ. ನಮ್ಮ ಈ ಒಂದು ಹೊಸ ಸಮಸ್ಯೆಯಿಂದ ನಮ್ಮ ರಾಜ್ಯದಲ್ಲಿ 107 ಇಂಜಿನಿಯರಿಂಗ್ ಕಾಲೇಜುಗಳು ಇವೆ. ಈ 107 ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಒಟ್ಟು 31,395 ವಿದ್ಯಾರ್ಥಿಗಳಿಗೆ ಅವಕಾಶ ಇದೆ. ಇದು ತಮಗೆ ಗೊತ್ತಿದೆ. 31,395 ವಿದ್ಯಾರ್ಥಿಗಳಲ್ಲಿ ಈ ಹಿಂದೆ ಮೆರಿಟ್ ಅಂತಲೇ 15,700 ವಿದ್ಯಾರ್ಥಿಗಳಿಗೆ ಅವಕಾಶವನ್ನು ಒದಗಿಸುತ್ತಿದ್ದಿರಿ ಇವತ್ತು ಬದಲಾದ ವ್ಯವಸ್ಥೆಯಲ್ಲಿ ಏನಾಗಿ ಹೋಗಿಬಿಟ್ಟಿದೆಯೆಂದರೆ ಇದು ಬರೇ ಇಂಜಿನಿಯರಿಂಗ್ ಮಾತ್ರ ನಾನು ಹೇಳುತ್ತಿದ್ದೇನೆ. ವೈದ್ಯಕೀಯ ಶಿಕ್ಷಣಕ್ಕೆ ಹೋದರೆ ಇವತ್ತು ಅವರು ಮಾಡಬೇಕಾದ ವೆಚ್ಚವನ್ನು ತಾವು ಕೇಳಿದರೆ ಬಹುಶಃ ನಮ್ಮ ಬಡವರಿಗೆ, ಗ್ರಾಮಾಂತರ ಪ್ರದೇಶಗಳಲ್ಲಿ ಇರುವವರಿಗೆ, ಸಾಮಾನ್ಯರಿಗೆ ತಮ್ಮ ಮಗನಿಗೆ ಆಗಲಿ, ಮಗಳಿಗೆ ಆಗಲಿ ವೈದ್ಯಕೀಯ ಶಿಕ್ಷಣವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಏನಾದರೂ ಒಬ್ಬ ದಂತವೈದ್ಯರನ್ನು ಮಾಡಬೇಕಾದರೆ ಈಗಿನ ಒಂದುಶುಲ್ಕ ಪದ್ಧತಿಯಿಂದ ಕನಿಷ್ಟ ಹತ್ತು ಲಕ್ಷ ರೂಪಾಯಿಗಳನ್ನು ವೆಚ್ಚಮಾಡಬೇಕು. ಮತ್ತೆ ವೈದ್ಯಕೀಯ ಪರವೀಧರರನ್ನಾಗಿ ಮಾಡಬೇಕು ಎಂದರೆ ಸುಮಾರು ಹದಿನೈದು ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕು. ಇದು ಸಾಧ್ಯವೇ? ಇದಕ್ಕೆ ಎಲ್ಲಿಯಾದರೂ ಒಂದು ತಡೆಯನ್ನು ಹಾಕಬೇಕಲ್ಲಾ ಈ ಹಿಂದೆ ಈ ಎಲ್ಲ ಕಾಲೇಜುಗಳು ಇದ್ದುವಲ್ಲ, ಆಗ ಮಾತ್ರ ಇಷ್ಟೊಂದು ಶುಲ್ಕ ಇಲ್ಲದೇನೆ ಆ ಕಾಲೇಜುಗಳಿಂದ ವೈದ್ಯರುಗಳು ಕಲಿತು ಹೇಗೆ ಹೊರಬರುತ್ತಿದ್ದರು? ಇಂಜಿನಿಯರುಗಳು ಹೇಗೆ ಬರುತ್ತಿದ್ದರು? ಆಗ ಆ ಕಾಲೇಜುಗಳನ್ನು ಸರ್ಕಾರ ಹೇಗೆ ನಡೆಸಿಕೊಂಡು ಹೋಗುತ್ತಿತ್ತು? ಈಗ ಮಾತ್ರವೇ ಈ ಒಂದು ವ್ಯವಸ್ಥೆಯಲ್ಲಿ ಹಣಕ್ಕೆ ಒಂದು ಬೆಲೆಯೇ ಇಲ್ಲದೇ ಇರುವ ರೀತಿಯಲ್ಲಿ ಜನಸಾಮಾನ್ಯರಿಗೆ ದೊರಕದೇ ಇರುವ ರೀತಿಯಲ್ಲಿ ಈ ವಿದ್ಯಾಭ್ಯಾಸದ ಹಂತವನ್ನು ತಲುಪುತ್ತಿದೆ ಎಂದರೆ ಈ ವಿದ್ಯಾಭ್ಯಾಸ ಬಡವರಿಗೆ ಅಲ್ಲ, ಬರೇ ಕೇವಲ ದುಡ್ಡಿದವರಿಗೆ, ಶ್ರೀಮಂತರಿಗೆ ಮಾತ್ರ ದೊರಕುವಂತಹ ಒಂದು ವ್ಯವಸ್ಥೆಯಾಗುತ್ತಿದೆ ಎಂದರೆ ಇದಕ್ಕೆ ಯಾರು ಕಾರಣಕರ್ತರು? ಸುಧಾರಣೆಗಳನ್ನು ಕೊಡಿ ಎಂದು ತಾವು ಹೇಳುತ್ತೀರಿ. ಸುಧಾರಣೆಯನ್ನು

ಕೊಡೋಣ. ಆದರೆ ಸುಧಾರಣೆಯನ್ನು ಯಾವರೀತಿಯಲ್ಲಿ ಕೊಡಬೇಕು? ಹಿಂದಿದ್ದ ವ್ಯವಸ್ಥೆಯನ್ನು ತಾವು ದಯವಿಟ್ಟು ಅವಲೋಕನ ಮಾಡಿ. ನಾವು ಹೊಸದಾಗಿ ಹೇಳಬೇಕಾಗಿಲ್ಲ. ತಾವು ಏನಾದರೂ ಹೊಸದಾಗಿ ಹೇಳಬೇಕು ಎಂದರೆ ಅದರಲ್ಲಿ ಇರುವ ಒಳ್ಳೆಯ ಅಂಶಗಳನ್ನು ಗುರುತಿಸಿ ಆ ಕಾರಣಕ್ಕೋಸ್ಕರ ನಾವು ಹಾಗೆ ಸುಧಾರಣೆ ಮಾಡಿ ಎಂದು ಹೇಳಬಹುದು. ಆದ್ದರಿಂದ ಹಳೆಯ ಪದ್ಧತಿಯನ್ನು ಕೈಬಿಡಬೇಡಿ. ಹಳೆಯ ಪದ್ಧತಿಯಲ್ಲಿ ಅಭ್ಯಾಸಮಾಡಿಕೊಂಡು ಬಂದ ಬಡ ಕುಟುಂಬದಿಂದ ಬಂದಂತಹ ವಿದ್ಯಾರ್ಥಿಗಳು ಹೇಗೆ ಡಾಕ್ಟರ್‌ಗಳು, ಇಂಜಿನಿಯರುಗಳು ಆದರೋ ಹಾಗೆ ಅವರಿಗೆ ಈಗಲೂ ಕೂಡ ಆ ಸಮಾನ ಅವಕಾಶವನ್ನು ಕಲ್ಪಿಸುವಂತಹ ಜವಾಬ್ದಾರಿ ತಮ್ಮ ಮೇಲಿದೆ. ಆ ಜವಾಬ್ದಾರಿಯನ್ನು ಸಮರ್ಥವಾಗಿ ನಡೆಸಿಕೊಂಡು ಹೋಗುವಂಥ, ನಿಯಂತ್ರಣ ಮಾಡುವಂಥ ಇಚ್ಛಾಶಕ್ತಿಯನ್ನು ತಾವು ಪಡೆದುಕೊಳ್ಳಬೇಕು. ಇವತ್ತು ಇಚ್ಛಾಶಕ್ತಿಯ ಕೊರತೆ ಇದೆಯೆಂದು ನನಗನ್ನಿಸುತ್ತದೆ. ಆಂಧ್ರಕ್ಕೆ ಹೋಗಿ ನೋಡಿ. ಅಲ್ಲಿನ ಸರ್ಕಾರ ನೂರಕ್ಕೆ ಎಂಬತ್ತರಷ್ಟು ಸೀಟುಗಳನ್ನು ಮೆರಿಟ್ ವಿದ್ಯಾರ್ಥಿಗಳಿಗೆ ಕೊಟ್ಟಿದೆ. ನೀವು ಅದರ ಬಗ್ಗೆ ಮಾಹಿತಿಯನ್ನು ಪಡೆದುಕೊಂಡು ಗಮನಿಸಿ. ಶೇಕಡಾ ಇಪ್ಪತ್ತರಷ್ಟು ಸೀಟುಗಳನ್ನು ಮಾತ್ರ ಅವರು ಖಾಸಗಿಯವರಿಗೆ ಕೊಟ್ಟಿದ್ದಾರೆ. ಅಲ್ಲಿ ಮಾತ್ರ ವೈದ್ಯಕೀಯ ಶಿಕ್ಷಣವೇ ಆಗಲಿ, ಇತರ ಶಿಕ್ಷಣವೇ ಆಗಲಿ ಹೀಗೆ ನಡೆಯುತ್ತಿದೆ. ಆ ಒಂದು ಸೌಲಭ್ಯ ಆ ರಾಜ್ಯದಲ್ಲಿ ಮಾತ್ರವೇ ಹೇಗೆ ದೊರಕುತ್ತಿದೆ? ಆದರೆ ನಮ್ಮ ರಾಜ್ಯದಲ್ಲಿ ಏನಾಗಿದೆ? ನಾವು ಏಕೆ ಅದನ್ನು ಅಳವಡಿಸಿಕೊಳ್ಳುವುದಕ್ಕೆ ಯೋಚನೆಯನ್ನು ಮಾಡಬಾರದು? ತಾವು ಇದನ್ನು ಯೋಚನೆ ಮಾಡಿ, ಸುಧಾರಣೆ ಕೊಡುವುದು ಅಂತಲ್ಲ. ಬೇರೆ ಎರಡು–ಮೂರು ರಾಜ್ಯಗಳಲ್ಲಿ ಏನು ಮಾಡುತ್ತಿದ್ದಾರೆ ಎಂದು ನೋಡಿ. ಮಹಾರಾಷ್ಟ್ರವನ್ನು ನೋಡಬೇಡಿ. ಎಲ್ಲಿ ಜಾಸ್ತಿ ಇರುತ್ತದೆಯೋ ಅಲ್ಲಿ ನಮ್ಮ ಒಂದು ರಾಜ್ಯದ ಹೋಲಿಕೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಿ. ಎಲ್ಲಿ ಅನುಕೂಲಕರವಾಗುವುದಿಲ್ಲವೋ ಅದನ್ನು ತಾವು ಕೈಬಿಡುತ್ತೀರಿ. ಈ ಒಂದು ದೃಷ್ಟಿಯಿಂದ ನಾನು ತಮ್ಮ ಗಮನಕ್ಕೆ ತರಬಯಸುವುದು ಏನೆಂದರೆ ತಾವು ಈ ಶಿಕ್ಷಣ ವಿಚಾರದಲ್ಲಿ ಆಂಧ್ರಪ್ರದೇಶ ಏನು ಮಾಡಿದೆಯೋ ಅದಕ್ಕಿಂತ ಒಂದು ಹೆಜ್ಜೆ ಮುಂದೆಹೋಗಿ ಹೌದು, ನಮಗೆ ಇಚ್ಛಾಶಕ್ತಿ ಇದೆ. ಈ ಒಂದು ಶಿಕ್ಷಣ ಕ್ಷೇತ್ರದಲ್ಲಿ ನಮ್ಮ ಸರ್ಕಾರ ಹೊಸ ಕ್ರಾಂತಿಯನ್ನು ಮಾಡುತ್ತದೆ. ಶೇಕಡಾ ಎಂಬತ್ತೈದು ಭಾಗವನ್ನು ಮೆರಿಟ್ ವಿದ್ಯಾರ್ಥಿಗಳಿಗೆ, ಪ್ರತಿಭಾವಂತರಿಗೆ ನಾವು ಕೊಡುತ್ತೇವೆ. ಇನ್ನು ಹದಿನೈದು ಸೀಟುಗಳನ್ನು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಕೊಡುತ್ತೇವೆ. ಬೇಕಾದರೆ ನೀವು ಇದನ್ನು ನಡೆಸಿಕೊಂಡು ಹೋಗುವಂಥ ಕೆಲಸ ಮಾಡಿ, ಇಲ್ಲದೇ ಹೋದರೆ ಅದನ್ನು ಮುಚ್ಚಿ ನಿಮ್ಮ ಕೆಲಸವನ್ನು ನೀವು ನೋಡಿಕೊಳ್ಳಿ ಎಂದು ಹೇಳುವಂಥ ದಿಟ್ಟತನವನ್ನು ನೀವು ತೋರಿಸಿ.

(ಮಾನ್ಯ ಅಧ್ಯಕ್ಷರಾದ ಶ್ರೀ ಕೃಷ್ಣ ಅವರು ತಮ್ಮ ಪೀಠದಲ್ಲಿ ಉಪಸ್ಥಿತರಾದರು)

ತಮ್ಮ ಬಳಿಗೆ ಏಕೆ ಅವರು ಚೌಕಾಶಿಗೆ ಬರುವುದಿಲ್ಲ? ಇವತ್ತು ಒಂದನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇವತ್ತು ಈ ರಾಜಕಾರಣಿಗಳನ್ನು ಶಿಕ್ಷಣ ಕ್ಷೇತ್ರದಿಂದ ದೂರ ಇಡುವಂಥ ಪ್ರಯತ್ನ ಮಾಡಿದರೆ ತುಂಬಾ ಒಳ್ಳೆಯದೆಂದು ನನ್ನ ಸಲಹೆ. ಏಕೋ ಒಂದು ಹಂತದಲ್ಲಿ ನಾನು ಕೇಳಿದೆ. ನಮ್ಮ ಸಂಸತ್ ಸದಸ್ಯರಾಗಿದ್ದವರು ಬೇಕಾದರೆ ರಾಜೀನಾಮೆ ಕೊಡುತ್ತೇನೆ ಎಂದರು. ಅವರು ಗೆದ್ದಿದ್ದು ಜನತೆಯ ಸೇವೆಗೋಸ್ಕರ. ಆದರೆ ಅವರು ಅದನ್ನು ಮರೆತುಬಿಟ್ಟರು. ಅದನ್ನು ಮರೆತುಬಿಟ್ಟು ಅವರು ಹೇಳುತ್ತಾರೆ ಏನೆಂದರೆ ಬೇಕಾದರೆ ನಾನು ಸಂಸತ್ತಿಗೆ ರಾಜೀನಾಮೆ ಕೊಡುತ್ತೇನೆ.

ಆದರೆ ಈ ವಿಷಯದಲ್ಲಿ ರಾಜಿ ಇಲ್ಲ ಎಂದು. ಈ ಮನೋಭಾವ ಇರುವವರನ್ನು ಅವರ ಕ್ಷೇತ್ರದಲ್ಲಿ ಜನರು ಅವರನ್ನು ಗೆಲ್ಲಿಸಿದ್ದು ಯಾವ ಉದ್ದೇಶಕ್ಕೆ ಎನ್ನುವುದನ್ನು ಅವರು ಮನವರಿಕೆ ಮಾಡಿಕೊಳ್ಳದೇ ಇರುವುದು..

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಅವರು ಇಲ್ಲಿ ಇಲ್ಲ. He can't defend himself.

ಶ್ರೀ ಹೆಚ್.ಡಿ. ಬಸವರಾಜು : ನಾನು ಅವರ ಹೆಸರನ್ನು ಉಲ್ಲೇಖ ಮಾಡುತ್ತಿಲ್ಲ. ವಿಚಾರವನ್ನು ಉಲ್ಲೇಖ ಮಾಡುತ್ತಿದ್ದೇನೆ. ಈ ರೀತಿಯ ಪ್ರವೃತ್ತಿ ಎಲ್ಲರಲ್ಲೂ ಬರುವುದು ಬೇಡ ಎನ್ನುವಂಥ ಸದುದ್ದೇಶದಿಂದ ಇವುಗಳಿಗೆ ಒಂದು ನಿಯಂತ್ರಣವನ್ನು ತೆಗೆದುಕೊಂಡುಬನ್ನಿ. ಇವರನ್ನು ಒಂದು ರೀತಿಯಲ್ಲಿ ದೂರು ಇಟ್ಟು ನೀವು ನಿಮ್ಮದೇ ಆದಂಥ ಒಂದು ಹೊಸ ಪದ್ಧತಿಯನ್ನು ತೆಗೆದುಕೊಂಡು ಬನ್ನಿ. ಇವತ್ತು ಪರಿಶಿಷ್ಟರಿಗೆ ಮತ್ತು ಇತರ ಬಡ ವಿದ್ಯಾರ್ಥಿಗಳಿಗೆ ತಾವು ಯಾವರೀತಿ ಸೌಲಭ್ಯವನ್ನು ಕಲ್ಪಿಸಬೇಕು ಎನ್ನುವಂಥ ವಿಚಾರದಲ್ಲಿ ಯಾವ ಯೋಚನೆ ಮಾಡಿದ್ದೀರೋ, ಅದಕ್ಕೆ ತಕ್ಕನಾದಂಥ ರೀತಿಯಲ್ಲಿ ಅನುದಾನವನ್ನು ಮುಡುಪಾಗಿಡುವುದರ ಬಗ್ಗೆ ಗಮನ ಕೊಡಿ. ಏಕೆಂದರೆ ಆ ಒಂದು ವರ್ಗಕ್ಕೆ ಒತ್ತು ಕೊಡುತ್ತೇವೆ ಎನ್ನುವಂಥ ವಿಚಾರವನ್ನು ಮಾನ್ಯ ಹಣಕಾಸಿನ ಮಂತ್ರಿಗಳಾದ ಸಿದ್ಧರಾಮಯ್ಯನವರು ಉಲ್ಲೇಖ ಮಾಡಿದ್ದಾರೆ. ಆ ಒಂದು ನಿಟ್ಟಿನಲ್ಲಿ ತಾವು ಬಹುಶಃ ಪ್ರಯತ್ನವನ್ನು ಮಾಡಿ ತಮ್ಮ ಒಂದು ದೃಢ ಮನಸ್ಸಿನಿಂದ ಮುಂದುವರೆದರೆ ಇವತ್ತು ಏನು ಖಾಸಗಿ ಕಾಲೇಜಿನವರಿಗೆ ಸಿಂಹಪಾಲು ಹೋಗುತ್ತಿದೆಯೋ ಅದು ನಿಲ್ಲುತ್ತದೆ ಎನ್ನತಕ್ಕಂಥಾದ್ದು ನನ್ನ ಭಾವನೆಯಾಗಿದೆ. ಸನ್ಮಾನ್ಯ ಸಭಾಧ್ಯಕ್ಷರೇ, ಇವತ್ತು ಶಿಕ್ಷಣ ಕ್ಷೇತ್ರದಲ್ಲಿ ಇನ್ನೊಂದು ರೀತಿಯಲ್ಲೂ ಕೂಡ ಪರಿಶಿಷ್ಟರಿಂದ ಶುಲ್ಕವನ್ನು ವಸೂಲು ಮಾಡುತ್ತಾರೆ. ಇದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ.

ಪೇಮೆಂಟ್ ಸೀಟು ಮಾಡುತ್ತಿದ್ದಾರೆ, ಆ ಪೇಮೆಂಟ್ ಸೀಟನ್ನು ಸರ್ಕಾರದವರು ಸರ್ಕಾರಿ ಕಾಲೇಜುಗಳಲ್ಲೇ ಮಾಡುತ್ತಿದ್ದಾರೆ. ಆ ಸರ್ಕಾರಿ ಕಾಲೇಜುಗಳಲ್ಲಿ ಮಾಡುತ್ತಿರುವಂಥ ಪೇಮೆಂಟ್ ಸೀಟನ್ನು ಪರಿಶಿಷ್ಟ ಜಾತಿಯವರಿಗೂ ಕೂಡ ಅನ್ವಯವಾಗುವಹಾಗೆ ಮಾಡಿದ್ದಾರೆ. ಆದರೆ, ದುರ್ದೈವ ದುರಂತ ಏನೆಂದರೆ ಆ ಪೇಮೆಂಟ್ ಸೀಟು ನೇರವಾಗಿ ಸರ್ಕಾರಿ ಕಾಲೇಜುಗಳ ಮೂಲಕ ಆ ಯೂನಿವರ್ಸಿಟಿಗೆ ಹೋದರೂ ಕೂಡ ಆ ಪೇಮೆಂಟ್ ಸೀಟುಗಳನ್ನು ಪರಿಶಿಷ್ಟರಿಗೆ, ಪೇಮೆಂಟ್ ಸೀಟಿಗೆ ಕೊಟ್ಟಂಥ ಶುಲ್ಕವನ್ನು ಪರಿಶಿಷ್ಟ ವಿದ್ಯಾರ್ಥಿಗಳಿಗೆ ವಾಪಸ್ ಕೊಡಿಸುವಂಥ ಕೆಲಸವನ್ನು ಸರ್ಕಾರದ ಯಾವುದೇ ಅಧಿಕಾರಿಗಳು ಮಾಡುತ್ತಾ ಇಲ್ಲ. ಅದಕ್ಕೆ ನಿಯಮ ಇಲ್ಲವೆಂದು ಹೇಳುತ್ತಿದ್ದಾರೆ. ಹಾಗಾದರೆ, ನಿಯಮ ಇಲ್ಲ ಎಂದರೆ ಆ ಪೇಮೆಂಟ್ ಸೀಟುಗಳನ್ನು ಸರ್ಕಾರಿ ಕಾಲೇಜುಗಳಲ್ಲಿ ಹೇಗೆ ಭರಿಸಬೇಕೆಂಬ ನಿಯಮವನ್ನು ಮಾಡಿದರು. ಅದರ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಮತ್ತೆ ಆ ಪೇಮೆಂಟ್ ಸೀಟುಗಳನ್ನು ಎಲ್ಲೆಲ್ಲಿ, ಯಾವ ಯಾವ ಸರ್ಕಾರಿ ಕಾಲೇಜುಗಳಲ್ಲಿ ನಿಗದಿ ಮಾಡಿದೆಯೋ, ಆ ನಿಗದಿ ಮಾಡಿರುವಂಥ ಪೇಮೆಂಟ್ ಸೀಟುಗಳ ಹಣವನ್ನು ಪರಿಶಿಷ್ಟ ವಿದ್ಯಾರ್ಥಿಗಳಿಗೆ ವಾಪಸ್ ಮಾಡುವಂಥ ಒಂದು ಕೆಲಸವನ್ನು ಕೂಡ ಮಾಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯಿಸುತ್ತಾ, ಯಾವುದೇ ಕಾರಣಕ್ಕೂ ತಾವು ತೆಗೆದುಕೊಳ್ಳುವಂಥ ನಿರ್ಧಾರದಲ್ಲಿ ಶೇಕಡ 85 ಭಾಗ ಸೀಟುಗಳನ್ನು ಮೆರಿಟ್‌ಗೆ ನೀಡುವುದರ ಮೂಲಕ ಈ ರಾಜ್ಯದ ವಿದ್ಯಾರ್ಥಿಗಳ ಹಿತವನ್ನು ಕಾಪಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ಧನ್ಯವಾದಗಳು.

† **ಡಾ: ವೀರ ಬಸವಂತರೆಡ್ಡಿ ಮುದ್ನಾಳ (ಯಾದಗಿರಿ)** : ಮಾನ್ಯ ಅಧ್ಯಕ್ಷರೆ, ಇವತ್ತಿನದಿವಸ ಈ ಸದನದಲ್ಲಿ ಎಲ್ಲಾ ಸದಸ್ಯರೂ ವಿದ್ಯಾರ್ಥಿಗಳ ಮತ್ತು ಅವರ ಪಾಲಕರ ಬಗ್ಗೆ ಚಿಂತನೆ ವ್ಯಕ್ತಪಡಿಸಿದ್ದಾರೆ. ಈ ಒಂದು ಚಿಂತನೆಯಲ್ಲಿ ಎರಡು ವಿಚಾರ ಇವೆ. ಒಂದು emotional point of view. ಒಂದು Practical point of view. Emotionally ನಾವೆಲ್ಲರೂ ಅವರ ಸಂಗಡ ಇದ್ದೇವೆ. ಅಡ್ಮಿಷನ್ ಸಿಗುವುದಿಲ್ಲ, ಏನು ಮಾಡಬೇಕೆಂಬ ಚಿಂತನೆಯಲ್ಲಿದ್ದೇವೆ. ಇದರ ಬಗ್ಗೆ ನಾವೆಲ್ಲರೂ ಮಾತನಾಡಿದ್ದೇವೆ. Practical point of view ನೋಡೋಣ. What are the practical difficulties Govt. is facing? ಸರ್ಕಾರದವರು ಇದಕ್ಕೆ ಅಸಹಾಯಕರಾಗಿದ್ದಾರೆ. ಸರ್ಕಾರಕ್ಕೆ ನನ್ನ ರಿಕ್ವೆಸ್ಟ್ ಇಷ್ಟೆ. ತಮ್ಮ ಕೈಯಲ್ಲಿ ಮೆಡಿಕಲ್ ಕಾಲೇಜುಗಳು ಇವೆ. ಬಳ್ಳಾರಿ ಮೆಡಿಕಲ್ ಕಾಲೇಜು ಇದೆ ಬೆಂಗಳೂರು ಮೆಡಿಕಲ್ ಕಾಲೇಜು ಮತ್ತು ಮೈಸೂರು ಮೆಡಿಕಲ್ ಕಾಲೇಜು ಹಾಗೂ ಹುಬ್ಬಳ್ಳಿ ಮೆಡಿಕಲ್ ಕಾಲೇಜು. ಇದರಲ್ಲಿ ನಾವು ನೋಡೋಣ. ಸರ್ಕಾರ ಒಬ್ಬೊಬ್ಬ ವಿದ್ಯಾರ್ಥಿಗೆ ಎಷ್ಟು ಹಣ ಖರ್ಚು ಮಾಡುತ್ತದೆ? ಸರ್ಕಾರಿ ಕಾಲೇಜಿನಲ್ಲಿ ಒಂದೊಂದು ವಿದ್ಯಾರ್ಥಿಗೆ ಎಷ್ಟು ಹಣ ಖರ್ಚು ಮಾಡುತ್ತೇವೆ ಮತ್ತು ಇಂಡಿಯನ್ ಮೆಡಿಕಲ್ ಕೌನ್ಸಿಲ್ has become very strict. ಅವರು ಇಷ್ಟಿಷ್ಟು ರಿಕ್ವೈರ್‌ಮೆಂಟ್ ಇಲ್ಲ ಎಂದರೆ, de-recognization. College will not be recognized. ಅದರಲ್ಲಿ you need so much instruments, you need so much laboratories, C.T. scan etc. ಇವೆಲ್ಲವೂ ಬೇಕಲ್ಲಾ. ಅದಕ್ಕೆ ಸರ್ಕಾರದವರು, ಸರ್ಕಾರಿ ಮೆಡಿಕಲ್ ಕಾಲೇಜಿನಲ್ಲಿ ಒಂದು ವಿದ್ಯಾರ್ಥಿಗೆ ಎಷ್ಟು ಖರ್ಚು ಮಾಡುತ್ತೀರಿ, ಅದೇ ರೀತಿಯಲ್ಲಿ ಪ್ರೈವೇಟ್‌ನವರಿಗೂ ನೋಡೋಣ. ಇವೆರಡೂ ಲೆಕ್ಕ ಮಾಡಿ ಒಂದು ಹಂತಕ್ಕೆ ಬಂದರೆ, there should be no problem. ಅದಕ್ಕಾಗಿ ನಾನು ಹೇಳುವುದಿಲ್ಲ. Government Colleges, how much they are/ spending per student ಪ್ರೈವೇಟ್ ಕಾಲೇಜುನಲ್ಲಿ ಎಷ್ಟಾಗಬಹುದು? ಇವೆರಡೂ ಲೆಕ್ಕ ಮಾಡಿದರೆ ಅಷ್ಟೇ ಅಮೌಂಟ್ ಇಲ್ಲಿಂದ ಬರಬೇಕು ಎಂದು ಯೋಚನೆ ಮಾಡಿ ಅದರ ಬಗ್ಗೆ ಒಂದು ನಿರ್ಧಾರ ತೆಗೆದುಕೊಳ್ಳಬೇಕು. ಎಲ್ಲಾ ಜನರ ಬಗ್ಗೆ ನಮಗೆ ಅನುಕಂಪ ಇದೆ. ಆದರೆ, ಪ್ರಾಕ್ಟಿಕಲ್ ಡಿಫಿಕಲ್ಟೀಸ್ ಏನಿದೆ ಎಂಬುದನ್ನು ಯೋಚನೆ ಮಾಡಿ. ಈ ರೂಲ್ಸನ್ನು ಸರ್ಕಾರದವರು ಅಪ್ಲೈ ಮಾಡಿದರೆ ಚಲೋ ಆಗಬಹುದು. We are all talking about nationalization of medical education. How much will that cost the exchequer of the Government. ಅದನ್ನು ನಾವು ನೋಡೋಣ. If it is feasible we are all for it. ನ್ಯಾಷನಲೈಸೇಷನ್ ಮಾಡುತ್ತೀರಿ, ಮಾಡಿ. ಆದರೆ, How much amout will the Government have to pay for taking over all these Colleges? Is it practically possible? ಅದಕ್ಕಾಗಿ ಈ ಒಂದು ಪ್ರಾಕ್ಟಿಕಲ್ ಪಾಯಿಂಟ್‌ನಿಂದಲೂ ಡಿಸೈಡ್ ಮಾಡಬೇಕೆಂದು ಹೇಳುತ್ತೇನೆ. ನಾವು ಒಂದು ಸಂದೇಶ ಕಳುಹಿಸುತ್ತಿದ್ದೇವೆ, ಎಲ್ಲಾ ವಿದ್ಯಾರ್ಥಿಗಳಿಗೆ. ನಿಮ್ಮ ಸಂಗಡ ನಾವಿದ್ದೇವೆ, ಸದನ ನಿಮ್ಮ ಜೊತೆಗೆ ಇದೆ ಎಂದು ಹೇಳುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† **ಶ್ರೀ ಗೋವಿಂದ ಎಂ. ಕಾರಜೋಳ (ವಿರೋಧ ಪಕ್ಷದ ಉಪ ನಾಯಕರು)** : ಸನ್ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಜಾತಿವಾರು ಮತ್ತು ಭಾಷಾವಾರು ಯಾರು ಪ್ರಾರಂಭ ಮಾಡಿದ್ದಾರೋ ಅವರಿಗೆ ಸರ್ಕಾರ ಎಲ್ಲಾ ಸಹಾಯ ಸವಲತ್ತುಗಳನ್ನು ಕೊಟ್ಟು ಸುಮಾರು

ಈ ರಾಜ್ಯದಲ್ಲಿ 10 ವೈದ್ಯಕೀಯ ಕಾಲೇಜುಗಳನ್ನು ಮಂಜೂರು ಮಾಡಿದೆ. 107 ಈ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸುಮಾರು 25 ಕಾಲೇಜುಗಳನ್ನು ಮಂಜೂರು ಮಾಡಿದೆ ಮತ್ತು 35. ಡೆಂಟಲ್ ಕಾಲೇಜುಗಳಲ್ಲಿ ಸುಮಾರು 10 ಭಾಷಾ ಅಲ್ಪಸಂಖ್ಯಾತರಿಗೆ ಮತ್ತು ಧಾರ್ಮಿಕ ಅಲ್ಪಸಂಖ್ಯಾತರಿಗೆ ಈ ರೀತಿಯಾಗಿ ಕೊಟ್ಟಿದೆ. ಸನ್ಮಾನ್ಯ ಅಧ್ಯಕ್ಷರೇ, ನಾವು ಯಾವುದೇ ಒಂದು ಸಮಾಜದವರು ಇರಬಹುದು, ಯಾವುದೇ ಒಂದು ಧರ್ಮದವರು ಇರಬಹುದು, ಯಾವುದೇ ಒಂದು ವರ್ಗದವರು ಇರಬಹುದು. ಸರ್ಕಾರದ ಮುಂದೆ ಅರ್ಜಿಯನ್ನು ಕೈಯಲ್ಲಿ ಹಿಡಿದುಕೊಂಡು ಬಂದಾಗ ನಾವು ಹೇಳುತ್ತೇವೆ, ನಮ್ಮ ಜನಾಂಗ ಬಹಳ ಹಿಂದುಳಿದಂಥ ಜನಾಂಗ, ನಾವು ಅಲ್ಪಸಂಖ್ಯಾತರರು, ನಾವು ಭಾಷೆಯಿಂದ ಅಲ್ಪಸಂಖ್ಯಾತರರು, ನಾವು ಜಾತಿಯಿಂದ ಅಲ್ಪಸಂಖ್ಯಾತರರು, ನಾವು ಪರಿಶಿಷ್ಟರು, ನಾವು ಊರ ಹೊರಗೆ ಇರುವವರು ನಮಗೆ ಅವಕಾಶ ಸಿಕ್ಕಿಲ್ಲ. ಅದಕ್ಕಾಗಿ ಶಿಕ್ಷಣ ಸಂಸ್ಥೆಗಳನ್ನು ವೈದ್ಯಕೀಯ ಕಾಲೇಜುಗಳನ್ನು, ಡೆಂಟಲ್ ಕಾಲೇಜುಗಳನ್ನು, ಇಂಜಿನಿಯರಿಂಗ್ ಕಾಲೇಜುಗಳನ್ನು ಕೊಡಬೇಕೆಂದು ಸರ್ಕಾರದ ಮುಂದೆ ಅರ್ಜಿಯನ್ನು ಹಿಡಿದುಕೊಂಡು ಬಂದಾಗ, ಸರ್ಕಾರ ಯಾವ ಘನ ಉದ್ದೇಶದಿಂದ ಭಾಷಾ ಅಲ್ಪಸಂಖ್ಯಾತರಿಗೆ, ಧಾರ್ಮಿಕ ಅಲ್ಪಸಂಖ್ಯಾತರಿಗೆ, ಪರಿಶಿಷ್ಟಜಾತಿ, ಜನಾಂಗದವರಿಗೆ ವೈದ್ಯಕೀಯ ಕಾಲೇಜುಗಳನ್ನು ಮತ್ತು ಇಂಜಿನಿಯರಿಂಗ್ ಕಾಲೇಜುಗಳನ್ನು ಮಂಜೂರು ಮಾಡಿದೆ, ಆ ಉದ್ದೇಶ ಇವತ್ತು ಈಡೇರುತ್ತಾ ಇಲ್ಲ. ಸರ್ಕಾರ ಒಂದು ಕಂಡೀಷನ್ ಮೇಲೆ ಕೊಟ್ಟಿದೆ. ಏನು ಕಂಡೀಷನ್ ಮೇಲೆ ಕೊಟ್ಟಿದೆ? ಅಲ್ಪಸಂಖ್ಯಾತರರೇ ಆಗಿರಲಿ, ಪರಿಶಿಷ್ಟ ಜಾತಿ ಜನಾಂಗದವರೇ ಆಗಿರಲಿ, ಭಾಷಾ ಅಲ್ಪಸಂಖ್ಯಾತರರೇ ಆಗಿರಲಿ ಅವರು ಸಮಾಜದಲ್ಲಿರತಕ್ಕ ಬಡವರ ಮಕ್ಕಳಿಗೆ ಉನ್ನತ ಶಿಕ್ಷಣದಿಂದ ವಂಚಿತರಾಗಬಾರದು. ಆ ಸಮಾಜಕ್ಕೆ ಸಹಾಯವಾಗಬೇಕು, ಆ ಸಮಾಜದ ಮಕ್ಕಳು ಓದಬೇಕು ಎನ್ನುವ ಕಾರಣಕ್ಕಾಗಿ ಇವತ್ತು ಎಲ್ಲಾ ಸವಲತ್ತುಗಳನ್ನು ಕೊಟ್ಟು ಸರ್ಕಾರ ಮಂಜೂರು ಮಾಡಿದೆ. ಆದರೆ, ಆ ಉದ್ದೇಶ ಈಡೇರಿದೆಯೇ? ಸರ್ಕಾರದವರು ದಯಮಾಡಿ ಹೇಳಬೇಕಾಗುತ್ತದೆ. ಶೇಕಡ 50 ರಷ್ಟು ಅನುಪಾತದಲ್ಲಿ, ಆಡಳಿತ ಮಂಡಳಿಗೆ 50, ಸರ್ಕಾರಕ್ಕೆ 50 ಎನ್ನತಕ್ಕಂಥ ಒಪ್ಪಂದದ ಮೇರೆಗೆ, ಇವತ್ತು ಸುಮಾರು 10 ಮೆಡಿಕಲ್ ಕಾಲೇಜುಗಳು, 10 ಡೆಂಟಲ್ ಕಾಲೇಜುಗಳು, 25 ಇಂಜಿನಿಯರಿಂಗ್ ಕಾಲೇಜುಗಳು ಈ ರಾಜ್ಯದಲ್ಲಿ ಇವೆ. ಆದರೆ, ಸರ್ಕಾರದವರು ಒಂದು ನಿರ್ದಿಷ್ಟವಾದಂಥ ಕಂಡೀಷನ್ ಹಾಕಿ, ಅವರ ಮೇಲೆ ಒತ್ತಡ ಹೇರಿ ಯಾವ ಸಮಾಜದವರು, ಯಾವ ಧರ್ಮದವರು ತೆಗೆದುಕೊಂಡಿದ್ದಾರೆ. 50 ಸೀಟನ್ನು ಅದೇ ಸಮಾಜದವರಿಗೆ ಕೊಡಬೇಕು ಅನ್ನತಕ್ಕಂಥಾದ್ದರ ಬಗ್ಗೆ ಏಕೆ ಕಟ್ಟುನಿಟ್ಟಾದ ನಿಯಮವನ್ನು ಜಾರಿಗೆ ತರಲಿಲ್ಲ? ಈ ರೀತಿ ತೆಗೆದುಕೊಂಡು ಯಾವ ಸಮಾಜದವರೇ ಆಗಿರಲಿ, ತಮ್ಮ ಸಮಾಜದ ಮಕ್ಕಳಿಗೆ ಸೀಟು ಕೊಟ್ಟಿಲ್ಲ. ಅವರು ಹೊರ ರಾಜ್ಯದವರಿಗೆ ಮಾರಾಟ ಮಾಡಿ ಹಣ ಗಳಿಸುವಂಥ ದಂಧೆಯಲ್ಲಿ ತೊಡಗಿದ್ದಾರೆ. ಇವತ್ತು ಸರ್ಕಾರ ಬಡವರ ಬಗ್ಗೆ, ಜನಸಾಮಾನ್ಯರ ಬಗ್ಗೆ ಒಂದುವೇಳೆ ಕಳಕಳಿ ಇದ್ದದ್ದೇ ಆದರೆ, ಕಳೆದ ವರ್ಷ ಏನು ಖಾಸಗಿ ಮೆಡಿಕಲ್ ಕಾಲೇಜಿನವರು 75:25 ರ ಅನುಪಾತದಲ್ಲಿ ಒಪ್ಪಿಕೊಂಡು ಕಾಲೇಜುಗಳನ್ನು ಪ್ರಾರಂಭ ಮಾಡಿದರು, ಅದೇ ಖಾಸಗಿ ಮೆಡಿಕಲ್ ಕಾಲೇಜಿನ ಆಡಳಿತ ಮಂಡಳಿಯವರು 2004-05ರಲ್ಲಿ ಏಕೆ ತಕರಾರು ತೆಗೆಯುತ್ತಾ ಇದ್ದಾರೆ? ಇದಕ್ಕೆ ಸರ್ಕಾರ ಏಕೆ ಅವಕಾಶ ಮಾಡಿಕೊಟ್ಟಿತು? ಅವರು ಮೊದಲನೇ ಸಲ ಒಪ್ಪಿಕೊಂಡಾಗ, ಸರ್ಕಾರ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಬೇಕಾಗಿತ್ತು. ಅವರು ಕೋರ್ಟಿಗೆ ಹೋಗುವುದಕ್ಕೆ ಅವಕಾಶ ಕೊಡಬಾರದಾಗಿತ್ತು. ಏಕೆ, ಆ

ಕೆಲಸ ಮಾಡಲಿಲ್ಲ? ಅಂದಮೇಲೆ ಸರ್ಕಾರ ಮೆಡಿಕಲ್ ಕಾಲೇಜಿನವರಿಗೆ ಹೆದರಿದೆಯೇ ಅಥವಾ ಅವರಿಗೆ ಏನಾದರೂ ಸಹಾಯ ಸವಲತ್ತು ಮಾಡಬೇಕೆಂದು ಸುಮ್ಮನೆ ಕುಳಿತಿದೆಯೋ ಗೊತ್ತಿಲ್ಲ. ಈ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳೂ ಇವತ್ತು ಹೇಳಿದ್ದಾರೆ. ನಿರ್ದಿಷ್ಟವಾದಂಥ ಸಲಹೆಗಳನ್ನು ಕೊಡಿ ಎಂದು ಹೇಳಿದ್ದಾರೆ. ನಮ್ಮ ನಿರ್ದಿಷ್ಟವಾದಂಥ ಸಲಹೆಗಳು ಇಷ್ಟೆ. ಶೇಕಡ 75:25 ರ ಅನುಪಾತದಲ್ಲಿ ಒಪ್ಪಿಗೆ ಆಗಬೇಕು. 2001 ಕ್ಕಿಂತಲೂ ಮುಂಚೆ ಏನು ಫೀ ಸ್ಟ್ರಕ್ಚರ್ ಇತ್ತೋ ಅದೇ ಮುಂದುವರಿಯಬೇಕು. ಈ ರಾಜ್ಯದಲ್ಲಿ ಅಲ್ಪಸಂಖ್ಯಾತರ ಹೆಸರಿನಲ್ಲಿ, ಪರಿಶಿಷ್ಟ ಜಾತಿ ಜನಾಂಗದವರ ಹೆಸರಿನಲ್ಲಿ, ಭಾಷಾ ಅಲ್ಪಸಂಖ್ಯಾತರ ಹೆಸರಿನಲ್ಲಿ ಮತ್ತು ಧಾರ್ಮಿಕ ಅಲ್ಪ ಸಂಖ್ಯಾತರ ಹೆಸರಿನಲ್ಲಿಯೂ ಏನು ತೆಗೆದುಕೊಂಡಿದ್ದಾರೆ. ನೂರಕ್ಕೆ ಐವತ್ತರಷ್ಟು ಸೀಟು ಅದೇ ಜನಾಂಗದ ಮಕ್ಕಳಿಗೆ ಕೊಡಬೇಕು. ಇವು ನಮ್ಮ ನಿರ್ದಿಷ್ಟವಾದಂಥ ಸಲಹೆ. ಅದನ್ನು ಮಾಡಲಿಕ್ಕೆ ಸರ್ಕಾರ ನಾಳೆ ಬೆಳಿಗ್ಗೆ 11 ಗಂಟೆಯೊಳಗಾಗಿ ಸುಗ್ರೀವಾಜ್ಞೆ ಹೊರಡಿಸಿದರೆ ನಾವು ಇದೇ ಸದನದಲ್ಲಿ ಸರ್ಕಾರವನ್ನು ಅಭಿನಂದಿಸುತ್ತೇವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು : (ರಾಜಾಜಿನಗರ) ಮಾನ್ಯ ಅಧ್ಯಕ್ಷರೆ, ವೃತ್ತಿವರ ಶಿಕ್ಷಣ ಸಮಸ್ಯೆಯು ಸುಪ್ರೀಂ ಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ಇವತ್ತು ಕರ್ನಾಟಕ ರಾಜ್ಯಾದಂತ್ಯ ಏನು ಹೊಂಗನಸನ್ನು ಕಾಣುತ್ತಿದ್ದರು ವಿದ್ಯಾರ್ಥಿ ಸಮುದಾಯ ವೃತ್ತಿಪರ ಶಿಕ್ಷಣಕ್ಕೆ ಪ್ರವೇಶವನ್ನು ಪಡೆಯಬೇಕು ಅಂತ ಹೇಳಿ ಆ ತೀರ್ಪಿನ ಹಿನ್ನೆಲೆಯಲ್ಲಿ ಇವತ್ತು ವಿದ್ಯಾರ್ಥಿ ಮತ್ತು ಪೋಷಕ ಸಮುದಾಯ ಆಘಾತಕ್ಕೆ ಒಳಗಾಗಿದೆ. ಅವರ ಸಿಟ್ಟನ್ನು, ಸೇಡವನ್ನು ಇವತ್ತು ಎಲ್ಲೆಡೆ ವ್ಯಕ್ತಪಡಿಸುತ್ತಾ ಇರುವುದನ್ನು ನಾವು ಕಾಣುತ್ತಿದ್ದೇವೆ. ಬೆಳಿಗ್ಗೆಯಷ್ಟೆ ಮಾತನಾಡುತ್ತಾ, ಸನ್ಮಾನ್ಯ ಮುಖ್ಯಮಂತ್ರಿಗಳು ಆಶಾದಾಯಕವಾದ ಒಂದು ಮಾತು ಆಡಿದ್ದಾರೆ. ನಿಜವಾಗಿಯೂ ಅದನ್ನು ನಾನು ಸ್ವಾಗತಿಸುತ್ತೇನೆ. ಇವತ್ತು ವಿದ್ಯಾರ್ಥಿಗಳ ಪರವಾಗಿ ನಾವು ನಿಲ್ಲುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ ನನ್ನದೊಂದು ಕ್ರಿಯಾಲೋಪವಿದೆ. ಅದೇನೆಂದರೆ ನಿಲುವಳಿ ಸೂಚನೆಗೆ ಸಹಿ ಮಾಡದೇ ಅದೂ ರೂಲಿಂಗ್ ಪಾರ್ಟಿಯಲ್ಲಿದ್ದುಕೊಂಡು ಮಾತನಾಡುವುದು ಇದು ಒಂದು ಹೊಸ ಪದ್ಧತಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ನಿಲುವಳಿ ಸೂಚನೆಯನ್ನು ನಿಯಮ 69ಕ್ಕೆ ಕನ್ವರ್ಟ್ ಮಾಡಿದ್ದಾರೆ.

ಅಧ್ಯಕ್ಷರು : ನಿಲುವಳಿ ಸೂಚನೆಯನ್ನು ನಾನು ನಿಯಮ 69ಕ್ಕೆ ಕನ್‌ವರ್ಟ್ ಮಾಡಿದ್ದೇನೆ. ಸಾರ್ವಜನಿಕ ಮಹತ್ವದ ವಿಷಯವಾಗಿರುವುದರಿಂದ.

Sri K.R. Rameshkumar : Matter of Urgent Public importance.

ಶ್ರೀ ನೆ.ಲ. ನರೇಂದ್ರಬಾಬು : ಮಾನ್ಯ ಅಧ್ಯಕ್ಷರೆ, ಈ ಒಂದು ಸಮಸ್ಯೆಯ ಬಗ್ಗೆ ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿರತಕ್ಕಂಥಾದ್ದು ಪ್ರತಿಪಕ್ಷದ ಎಲ್ಲಾ ನಾಯಕರುಗಳು ಮತ್ತು ಆಸಕ್ತಿ ಇರತಕ್ಕಂಥ ನಾಯಕರುಗಳೆಲ್ಲಾ ಸೇರಿ ಇದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ತಾವುಗಳು ಸಲಹೆ ಕೊಡಬೇಕೆಂದು ಹೇಳಿರುವುದನ್ನು ಬಹಳ ದಿವಸಗಳಿಂದ ಮರೀಚಿಕೆಯಂತೆ ಕಾಯುತ್ತಿದ್ದಂತಹ, ನನ್ನಂತಹ ಒಬ್ಬ ಸದಸ್ಯನಿಗೆ ಯುವಕರ ಮತ್ತು ವಿದ್ಯಾರ್ಥಿಗಳ ಸಮಸ್ಯೆಗಳ ಬಗ್ಗೆ ಏನಾದರೂ ಪರಿಹಾರ ಸಿಗುತ್ತದೆಯೇ ಎನ್ನುವ ಕುತೂಹಲದಿಂದ ನಾನು ನನ್ನ ಸಲಹೆಯನ್ನು

ಕೊಡುವುದಕ್ಕೆ ಬಯಸುತ್ತೇನೆ. ನಾನು ಈ ಹಿಂದೆ ಇದೇ ಸಭೆಯಲ್ಲಿ ಮಾತನಾಡುತ್ತಾ, ಹೇಳುತ್ತಿದ್ದೆ, ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಆಗ ಒಂದು ಮಾತನ್ನು ಹೇಳುತ್ತಿದ್ದರು. ಸರ್ಕಾರ ಪಿ.ಯು.ಸಿ. ಅಥವಾ ಡಿಗ್ರಿಗಳಿಗೆ ಕಾಮನ್ ಆಗಿ ಏನು ಸಿ.ಇ.ಟಿ. ಮಾಡುತ್ತಿದೆಯಲ್ಲಾ, ಆ ರೀತಿ ಒಂದು ಮಾತು ಹೇಳುತ್ತೇನೆ ಸಿ.ಇ.ಟಿ. ಅಲ್ಲ, ಕಾಮನ್ ಅಡ್ಮಿಷನ್ ಸಿಸ್ಟಂ ಅನ್ನು ತರಬೇಕು ಎನ್ನತಕ್ಕಂಥಾದ್ದನ್ನು ಹಿಂದೆ ಪ್ರತಿಪಾಸಿದಿದ್ದೆವು. ಅದರ ಉದ್ದೇಶವಾದರೂ ಇಷ್ಟೇ ಕಾಮನ್ ಅಡ್ಮಿಷನ್ಸ್ ಸಿಸ್ಟಂ ತರುವುದರಿಂದ ಏನಾಗುತ್ತದೆ 20 ಕಡೆ ಒಂದೆ ಒಂದು ಅಡ್ಮಿಷನ್‌ಗೆ ಅರ್ಜಿ ಹಾಕುವುದನ್ನು ತಪ್ಪಿಸಿದಂತೆ ಆಗುತ್ತದೆ. ಈ ಸಂದರ್ಭದಲ್ಲಿ ನಾನು ಮತ್ತೊಮ್ಮೆ ಪುನರುಚ್ಚಾರ ಮಾಡುವುದಕ್ಕೆ ಬಯಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ ನಾನು ಸರ್ಕಾರದಿಂದ ಬಯಸುವುದಾದರೂ ಇಷ್ಟೆ, ಏನು ಖಾಸಗೀ ಶಿಕ್ಷಣ ಸಂಸ್ಥೆಗಳು ಆರಂಭದಲ್ಲಿ ಸೇವಾ ಮನೋಭಾವನೆಯಿಂದ ಆರಂಭವಾದಂಥಹ ಸಂಸ್ಥೆಗಳು, ಇವತ್ತು ನಮ್ಮ ಕೈಯಲ್ಲಿ ಆಗುತ್ತಿಲ್ಲ, ಇಷ್ಟು ಶುಲ್ಕವನ್ನು ಹೆಚ್ಚು ಮಾಡಬೇಕು ಎನ್ನುವಂತಹ ಧೋರಣೆ ಒಂದು ಕಡೆ ಆಗುತ್ತಿದೆ. ಮುರುಗೋಡು ವರದಿ ಆದ ಮೇಲಂತೂ ಅವರ ವರದಿಯಲ್ಲಿ ಏನು ಶುಲ್ಕವನ್ನು ನಿಗದಿಪಡಿಸಿದೆ ಅದನ್ನು ಖಂಡಿತವಾಗಿಯೂ ಸಾಮಾನ್ಯ ಜನ ಆ ಶುಲ್ಕವನ್ನು ಭರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನಾನು ಇವತ್ತು ಸುಪ್ರೀಂ ಕೋರ್ಟ್ ಏನು 50:50 ಅಂತ ಹೇಳಿದೆ ಅದರಿಂದ ಖಂಡಿತವಾಗಲೂ ಸಾಧ್ಯವಿಲ್ಲ, ಒಂದು ಆಡಳಿತ ನಡೆಸುತ್ತಾ ಇರತಕ್ಕಂಥ ಶಿಕ್ಷಣ ಸಂಸ್ಥೆಗಳಿಗೂ ಸಾಧ್ಯವಿಲ್ಲ. ಕಾಲೇಜು ನಡೆಸುವುದಕ್ಕೆ ಮತ್ತೆ ಸರ್ಕಾರವೂ ಏಕಾಏಕಿ ಇವತ್ತು ರಾಷ್ಟ್ರೀಕರಣ ಮಾಡಿ ಅದನ್ನು ನಡೆಸುವುದಕ್ಕೆ ಕಷ್ಟವಾಗಬಹುದು, ಆದರೆ ಒಂದು ನಾನು ಹೇಳವುದೇನೆಂದರೆ 75:25 ಅನುಪಾತದಂತೆ ಬಹುಶ ಖಾಸಗೀ ಶಿಕ್ಷಣ ಸಂಸ್ಥೆಗಳು ಉಳಿಯಬೇಕು, ಮತ್ತು ಮೆರಿಟ್, ಪ್ರತಿಭಾನ್ವಿತ ವಿದ್ಯಾರ್ಥಿಗಳ ಸಮಸ್ಯೆಯು ಬಗೆಹರಿಯಬೇಕು ಮತ್ತು ಶುಲ್ಕವನ್ನು 2002ರಲ್ಲಿ ಮತ್ತು 2003ರಲ್ಲಿ ಏನು ಇತ್ತು ಶುಲ್ಕ ಆ ಶುಲ್ಕ ಇವತ್ತು ಮೆರಿಟ್ ಸೀಟ್‌ಗೆ 14,200 ರೂ ಇತ್ತು, ವೈದ್ಯಕೀಯ ಮತ್ತು ದಂತ ವೈದಯಕೀಯ 2002–2003ರಲ್ಲಿ ಇದ್ದಂತೆ ಇಟ್ಟರೆ ಬಹುಶ ನಾನು ಹೇಳುತ್ತೇನೆ ಒಬ್ಬ ಹಮಾಲಿಯ ಮಗ ಇರಬಹುದು, ಅಥವಾ ಸರ್ಕಾರೀ ನೌಕರನ ಮಗ ಇರಬಹುದು. ಮೊನ್ನೆ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡುವಾಗ ಹೇಳಿದರು, ಒಬ್ಬ ಡೆಪ್ಯುಟಿ ಕಮೀಷನರ್ ಮಗ ಸಹ ಈ ಶುಲ್ಕವನ್ನು ಭರಿಸಲಿಕ್ಕೆ ಸಾಧ್ಯವಾಗುವುದಿಲ್ಲ ಎಂದು. ಇಂತಹ ವ್ಯವಸ್ಥೆ ಬಹುಶಃ ಮುರುಗೋಡ್–ರವರು ಯಾವ ರೀತಿ ವರದಿ ಕೊಟ್ಟರೋ, ಇದು ಸಂಶಯವಾಗತಕ್ಕಂಥ ರೀತಿಯಲ್ಲಿ ಜನಗಳು ಹೊರಗಡೆ ಮಾತನಾಡುತ್ತಿದ್ದಾರೆ. ಅವರು ವರದಿ ಕೊಟ್ಟಿರತಕ್ಕಂಥಾದ್ದರ ಬಗ್ಗೆ. ಆದ್ದರಿಂದ ನಾನು ಕೇಳಿಕೊಳ್ಳುತ್ತೇನೆ ದಯವಿಟ್ಟು 2002–2003ರಲ್ಲಿ ಇದ್ದಂತಹ ಶುಲ್ಕವನ್ನು ನಿಗದಿಪಡಿಸಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ, ಜೊತೆಗೆ 25–75 ಅನುಪಾತದಲ್ಲಿ ಖಾಸಗೀ ಶಿಕ್ಷಣ ಸಂಸ್ಥೆಗಳ ಮನವೊಲಿಸುವುದು, ಇಲ್ಲ ಅಂದರೆ ಒಂದು ಆರ್ಡಿನೆನ್ಸ್‌ನ್ನು ಹೊರಡಿಸಿ ಒಂದು ಸ್ಪಷ್ಟ ನಿಲುವನ್ನು, ಒಂದು ಲಕ್ಷ್ಮಣ ರೇಖೆಯನ್ನು ಎಳೆಯದೇ ಹೋದರೆ ಪ್ರತಿ ವರ್ಷ ಈ ಪ್ರವೇಶ ಸಂದರ್ಭದಲ್ಲಿ ಈ ಒಂದು ಗೊಂದಲಮಯ ಮತ್ತು ಢೋಲಾಯಮಾನ ಸ್ಥಿತಿಗೆ ವಿದ್ಯಾರ್ಥಿಗಳು ಬರುತ್ತಾರೆ. ಈ ಹಿಂದೆ ಈ ಸಿ.ಇ.ಟಿ ಕಾಮೆಡ್–ಕೆ ಬರತಕ್ಕಂಥ ಎರಡು ಪರೀಕ್ಷೆಗಳು ಸೂಕ್ತವಲ್ಲ. ಈ ಎರಡು ಪರೀಕ್ಷೆಗಳಿಂದ ವಿದ್ಯಾರ್ಥಿಗಳು ಎರಡು ಪರೀಕ್ಷೆಗಳಿಗೆ ಅಪೀಯರ್ ಮಾಡಬೇಕಾದರೆ ಬಹಳ ಕಷ್ಟವಾಗುತ್ತದೆ. ಒಂದು ಕಡೆ ಪಿ.ಯು.ಸಿ. ಪಾಸ್ ಮಾಡಿ ಸಿ.ಇ.ಟಿ. ಬರೆದು ಮತ್ತೆ ಸೀಟು ಸಿಗಲಿಲ್ಲ ಅಂತ ಹೇಳಿ ಪ್ರೈವೇಟ್

ಕಾಲೇಜುಗಳಿಗೆ ಇದು ಯಾವ ಸ್ಥಿತಿ? ದಯವಿಟ್ಟು ಬಹುಶ ಮುಂದಿನ ದಿನಗಳಲ್ಲಿ ನಾನು ಹೇಳುತ್ತೇನೆ ಒಂದು ಆರ್ಡಿನೆನ್ಸ್‌ನ್ನು, ಕಳೆದ 72 ಗಂಟೆಗಳಲ್ಲಿ ಅಥವಾ ಈ ಸದನ ನಡೆಯುವಂತಹ ಸಂದರ್ಭದಲ್ಲಿ ಒಂದು ಆರ್ಡಿನೆನ್ಸ್‌ನ್ನು ಹೊರಡಿಸಿ ಒಂದು ಸ್ಥಿತಿಗೆ ತರದೇ ಹೋದರೆ ಬಹಳಷ್ಟು ಕಷ್ಟವಾಗುತ್ತದೆ. ಮತ್ತು ಮುಂದಿನ ದಿನಗಳಲ್ಲಿ ಉಳ್ಳವರಿಗೆ ಮಾತ್ರ ಆ ಒಂದು ವಿದ್ಯಾಭ್ಯಾಸವಾಗುತ್ತದೆ. ಈ ಉನ್ನತ ಶಿಕ್ಷಣವಾಗುತ್ತದೆ, ದಯವಿಟ್ಟು ಆ ಸ್ಥಿತಿಯನ್ನು ತರುವುದು ಬೇಡ. ಒಟ್ಟಾರೆ ಪ್ರತಿಷ್ಠೆಗಳನ್ನು ಬಿಟ್ಟು ಏನಾದರೂ ಒಂದು ತೀರ್ಮಾನಕ್ಕೆ ಬರುವುದಕ್ಕೆ ನಾವೆಲ್ಲ ಒಗ್ಗಟ್ಟಿನಿಂದ ಸರ್ಕಾರಕ್ಕೆ ದನಿಗೂಡಿಸೋಣ ಎನ್ನತಕ್ಕಂಥ ಒಂದು ಸಲಹೆಯನ್ನು ಕೊಡುತ್ತಾ ಯಾವುದೇ ಕಾರಣಕ್ಕೂ ಈ ಒಂದು ಮುರಗೋಡ್ ಕಮಿಟಿಯ ವರದಿಯ ಶುಲ್ಕವನ್ನು ಜಾರಿಗೆ ತರಬಾರದು, ಮತ್ತೆ ಜೊತೆಗೆ 50–50 ಅನುಪಾತ ಸೂಕ್ತವಲ್ಲ ಖಾಸಗೀ ಶಿಕ್ಷಣ ಸಂಸ್ಥೆಗಳವರು 25ರ ಅನುಪಾತದಲ್ಲಿ ಹಣ ಮಾಡಿ ಬೇರೆಯದನ್ನು ಭರಿಸಲಿ. ಆದರೆ 75ರ ಅನುಪಾತದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಮತ್ತು ಸರ್ಕಾರ ಶಿಫಾರಸ್ಸು ಮಾಡತಕ್ಕಂಥ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಮನವಿ ಮಾಡಿಕೊಂಡು ಸನ್ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† **ಶ್ರೀ ಸಿ.ಟಿ ರವಿ** : (ಚಿಕ್ಕಮಗಳೂರು) ಮಾನ್ಯ ಅಧ್ಯಕ್ಷರೆ, ಹತ್ತಾರು ವರ್ಷಗಳ ಕಾಲ ವಿದ್ಯಾರ್ಥಿಗಳ ಪ್ರತಿನಿಧಿಯಾಗಿ ಹೋರಾಟ ಮಾಡಿದಂತಹ ವ್ಯಕ್ತಿಯಾಗಿ ಇಲ್ಲಿ ಅವರ ಪ್ರತಿನಿಧಿಯಾಗಿ ಸರ್ಕಾರಕ್ಕೆ ಸಲಹೆ ಕೊಡುವುದೇನೆಂದರೆ ಸಿಂಗಲ್ ವಿಂಡೋ ಸಿಸ್ಟಂ ಮೂಲಕವೇ ಅಡ್ಮಿಷನ್ಸ್ ಮಾಡುವಂತಹ ವ್ಯವಸ್ಥೆ ಆಗಬೇಕು. ಈಗ ಒಂದೊಂದು ಕಾಲೇಜು ಒಂದು ಕಡೆ ಮಾಡುತ್ತಿದೆ. ಕಾಮೆಡ್–ಕೆ. ಒಂದು ಕಡೆ ಸಿ.ಇ.ಟಿ. ಒಂದು ಕಡೆ. ಈ ಗೊಂದಲದಲ್ಲಿ ವಿದ್ಯಾರ್ಥಿಗಳು ತ್ರಿಶಂಕು ನರಕದಲ್ಲಿದ್ದಾರೆ. ತ್ರಿಶಂಕು ಸ್ವರ್ಗದಲ್ಲಿ ಅಲ್ಲ. ಆದ್ದರಿಂದ ಈ ಗೊಂದಲದಿಂದ ಪಾರು ಮಾಡುವಂತಹ ವ್ಯವಸ್ಥೆಯನ್ನು ತುರ್ತಾಗಿ ಮಾಡಬೇಕು. ಸರ್ಕಾರ ಹೇಳಿದೆ ನಾವು ವಿದ್ಯಾರ್ಥಿಗಳ ಪರವಾಗಿದ್ದೇವೆ, ಸಾಮಾನ್ಯ ಜನರ ಪರವಾಗಿದ್ದೇವೆ ಎಂದು ಈಗಾಗಲೇ ಹೇಳಿದ್ದಾರೆ. ಆದರೆ ಅವರ ಪರವಾಗಿರತಕ್ಕಂಥವರು ಗೊಂದ ನಿರ್ಮಾಣ ಮಾಡಿದ್ದು ಏಕೆ? ಮತ್ತೆ ಸುಪ್ರೀಂ ಕೋರ್ಟ್ ಬ್ರಹ್ಮಾಸ್ತ್ರ ಇತ್ಯಾದಿ ಪದಗಳನ್ನೆಲ್ಲಾ ಇಲ್ಲಿ ಬಳಸಿದರು. ಹೈಕೋರ್ಟಿನಲ್ಲಿ ಕೇಸ್ ಇದ್ದಾಗ ಆ ಕೇಸ್‌ನಲ್ಲಿ ಹರೀಶ್ ಸಾಳ್ವೆಯವರು ಕಾಮೆಡ್–ಕೆ–ಪರವಾಗಿ ವಾದ ಮಾಡುತ್ತಿರಬೇಕಾದರೆ ಕಾಮೆಡ್–ಕೆ ಪರವಾಗಿ, ನಮ್ಮ ವಕೀಲರು ಮೌನವಾಗಿ ಸುಪ್ರೀಂ ಕೋರ್ಟ್‌ಗೆ ಟ್ರಾನ್ಸ್‌ಫರ್ ಮಾಡೋಣವೆಂದಾಗ ಮೌನವಾಗಿ ಕುಳಿತುಕೊಂಡು ಒಂದು ರೀತಿಯಾಗಿ ಸಾರ್ವಜನಿಕರಲ್ಲಿ ಸರ್ಕಾರದ ಬಗ್ಗೆ ಅಪನಂಬಿಕೆ ಬರುವ ರೀತಿಯಲ್ಲಿ ವರ್ತನೆ ಮಾಡಿರುವುದರಿಂದ ಇವತ್ತು ಸರ್ಕಾರದ ಪಾತ್ರದ ಬಗ್ಗೆ ನಮ್ಮೆಲ್ಲರಿಗೂ ಸಂಶಯ ಬರುತ್ತಿದೆ. ಮತ್ತು ಅದರ ಜೊತೆಗೆ ಹೊರಗಡೆ ಮಾತನಾಡುತ್ತಿರುವಂತಹ ಮಾತು ಏನೆಂದರೆ ಪ್ರಕೃತಿಯ ನಿಯಮ ನಾಯಿ ಬಾಲ ಅಲ್ಲಾಡಿಸಬೇಕು. ಬಾಲ ನಾಯಿಯನ್ನು ಅಲ್ಲ. ಆದರೆ ಈ ಕೇಸ್‌ನಲ್ಲಿ ಉಲ್ಟಾ ಆಗುತ್ತಿದೆ. ಇಲ್ಲಿ 4–6 ಕಾಲೇಜುಗಳನ್ನು ಇಟ್ಟುಕೊಂಡಿರತಕ್ಕಂಥ ಪ್ರೈವೇಟ್ ಕಾಲೇಜ್‌ನವರು ಸರ್ಕಾರದ ತೀರ್ಮಾನದ ವಿರುದ್ಧ ಸರ್ಕಾರವನ್ನೇ ಅಲ್ಲಾಡಿಸುತ್ತಾರೆ ಅಂದರೆ ಇದಕ್ಕೆ ಕಾರಣ ಸ್ಪಷ್ಟಾಗುತ್ತದೆ ಇಲ್ಲಿ ಏಕಪಾತ್ರಾಭಿನಯ ನಡೆಯುತ್ತಿದೆ. ಅಲ್ಲಿ ನಿಂತು ಪಾತ್ರ ವಹಿಸತಕ್ಕಂಥವರು ಅವರೇ, ಇಲ್ಲಿ ನಿಂತು ಪಾತ್ರ ನಿರ್ವಹಿಸುವಂತಹವರು ಅವರೇ. ಈ ಏಕ ಪಾತ್ರ ಅಭಿನಯದಿಂದ ಸರ್ಕಾರ ನಡೆಸುವಂಥಹವರ, ಸರ್ಕಾರದ ಇಡೀ ಪಾತ್ರದ ಬಗ್ಗೆ ವಿದ್ಯಾರ್ಥಿಗಳಲ್ಲಿ ಸಂಶಯ ಇದೆ. ಪೋಷಕದಲ್ಲಿ

ಸಂಶಯ ಇದೆ. ಅದಕ್ಕೋಸ್ಕರ ಎರಡು ವರ್ಷಗಳ ಹಿಂದೆ ಯಾವ ಶುಲ್ಕ ಇತ್ತೋ ಅದನ್ನೆ ಮತ್ತೆ ಪರಿಷ್ಕರಣೆ ಮಾಡಿ ಶುಲ್ಕ ಜಾರಿಗೆ ತರಬೇಕು. ಆ ಶುಲ್ಕ ಇದ್ದಾಗಲೇ ಸರ್ಕಾರಕ್ಕೆ, ಮೆಡಿಕಲ್ ಕಾಲೇಜಿಗೆ, ಇಂಜಿನಿಯರಿಂಗ್ ಕಾಲೇಜಿಗೆ ಖಾಸಗೀ ಸಂಸ್ಥೆಯವರು ಅರ್ಜಿ ಹಾಕಿಕೊಂಡು ಮತ್ತಷ್ಟು ಆಸ್ತಿಗಳನ್ನು ನಿರ್ಮಾಣ ಮಾಡಿಕೊಂಡಿದ್ದಾರೆ. ಈಗಂತೂ ಅವರು ಹೇಳಿದಂತೆ ಕೊಟ್ಟುಬಿಟ್ಟರೆ ಸರ್ಕಾರ ಪೂರ್ತಿ ಅವರ ಜುಟ್ಟಿನಲ್ಲಿ ಸಿಕ್ಕಿಹಾಕಿಕೊಳ್ಳುತ್ತೆ, ನಮ್ಮ ಜುಟ್ಟು ಜನಿವಾರ ಅವರ ಕೈಗೆ ಕೊಟ್ಟುಕೊಂಡು ನಾವು ಅಸಹಾಯಕರಾಗಿ ಸರ್ಕಾರ ದಳ್ಳಾಳಿ ಕೆಲಸ ಮಾಡುವುದನ್ನು ಬಿಟ್ಟು, ಸರ್ಕಾರ ಸರ್ಕಾರದ ಪಾತ್ರವನ್ನು ವಹಿಸಬೇಕು. ಇದಕ್ಕೆ ಇರತಕ್ಕಂಥಾದ್ದು ಎರಡೇ ಎರಡು ಪರಿಹಾರ. ಒಂದು ತಾತ್ಕಾಲಿಕ ಪರಿಹಾರ ಇನ್ನೊಂದು ದೂರದೃಷ್ಟಿಯ ಚಿಂತನೆ ನಡೆಸಿ ಭೇಧಿಸತಕ್ಕಂಥ ಪರಿಹಾರ. ತಾತ್ಕಾಲಿಕ ಪರಿಹಾರ ಅಂತ ಹೇಳಿದರೆ ಈಗ ವಿದ್ಯಾರ್ಥಿಗಳನ್ನು ತ್ರಿಶಂಕು ಸ್ವರ್ಗದಲ್ಲಿ ಇಟ್ಟಿದ್ದೇವೆ ಅದರಿಂದ ಮುಕ್ತಗೊಳಿಸಿ ಅವರಲ್ಲಿ ಏನು ಗೊಂದಲ ಉಂಟಾಗಿದೆ ಆ ಗೊಂದಲದಿಂದ ಅವರನ್ನು ನಿವಾರಣೆ ಮಾಡಿ ಸರ್ಕಾರವೇ ಈ ಫೀಸನ್ನು ತುಂಬಿ 68 ಕೋಟಿ ರೂಪಾಯಿ ಏನು ಇದೆ ವಿದ್ಯಾರ್ಥಿಗಳ ಮೇಲೆ ಮಾಡತಕ್ಕಂಥ ವೆಚ್ಚ ಎಂದು ಅಂದುಕೊಳ್ಳದೆ ಅದು ಇನ್‌ವೆಸ್ಟ್‌ಮೆಂಟ್ ಎಂದು ಭಾವಿಸಿಕೊಂಡು ಬಡ ವಿದ್ಯಾರ್ಥಿಗಳ ನೆರವಿಗೆ ಬರಬೇಕು ಮತ್ತು ಉಳಿದಂತೆ ಏನು ಶಾಸನ ಮಾಡುತ್ತೀರೋ, ಪಾರ್ಲಿಮೆಂಟ್‌ನಲ್ಲಿ ತೆಗೆದುಕೊಂಡು ಹೋಗಿ ಇಡೀ ದೇಶದಲ್ಲಿ ಏಕ ರೂಪದ ಶುಲ್ಕ ಇರುವ ರೀತಿಯಲ್ಲಿ ಈ ಒಂದು ಉನ್ನತ ಶಿಕ್ಷಣಕ್ಕೆ ನಿಯಮಗಳನ್ನು ರೂಪಿಸುವುದಕ್ಕೆ ಒತ್ತಡ ಹಾಕುವುದಕ್ಕೆ ಒಂದು ಸರ್ಕಾರವಾಗಿ ಪಾತ್ರ ವಹಿಸಬೇಕು ಆ ಪಾತ್ರವನ್ನು ದೂರದೃಷ್ಟಿ ಇಟ್ಟುಕೊಂಡು ಮಾಡಬೇಕು. ಈಗ ತಕ್ಷಣಕ್ಕೆ ಅಡ್ಮಿಷನ್ಸ್ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟು ಶುಲ್ಕವನ್ನು ಸರ್ಕಾರ ತುಂಬತಕ್ಕಂಥ ಕೆಲಸ ಮಾಡಬೇಕು ಎನ್ನುವ ವಿನಂತಿಯನ್ನು ಮಾಡಿಕೊಂಡು, ಇದಕ್ಕೆ ಖಾಸಗೀ ಸಂಸ್ಥೆಗಳು ಒಪ್ಪದೇ ಇದ್ದರೆ ಅವರ ಯಾವುದೇ ಒಂದು ಒತ್ತಡಕ್ಕೂ ಮಣಿಯದೇ ಏನು ಬದ್ಧತೆಯನ್ನು ಸದನದಲ್ಲಿ ಹಿರಿಯ ಸದಸ್ಯರು ಮತ್ತು ಮಂತ್ರಿಗಳು ಪ್ರಕಟಿಸಿದರು ಆ ಬದ್ಧತೆಯನ್ನು ಸಾರ್ವಜನಿಕವಾಗಿ ಉಳಿಸಿಕೊಂಡು ಆ ಸ್ಥಾನದ ಬಗ್ಗೆ ನಂಬಿಕೆ ಬರುವ ರೀತಿಯಲ್ಲಿ ಆ ಒಂದು ಖಾಸಗೀ ಸಂಸ್ಥೆಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡು ಸರ್ಕಾರ ಖಾಸಗೀ ಸಂಸ್ಥೆಗಳಿಗೆ ಗುಟರು ಹಾಕಿದರೆ ಹೆದರುವುದಿಲ್ಲ ನಮ್ಮಗೆ ಅದನ್ನು ಮಣಿಸಿ ಸರ್ಕಾರ ನಡೆಸುವುದಕ್ಕೆ ಬರುತ್ತದೆ ಉನ್ನತ ಶಿಕ್ಷಣದ ಬಗ್ಗೆ ಸರ್ಕಾರದ ಕಾಳಜಿ ಇದೆ ಎನ್ನುವುದನ್ನು ವ್ಯಕ್ತಪಡಿಸಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತಾ ನನಗೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5.40 ಪಿಎಂ

† **ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ)** : ಮಾನ್ಯ ಅಧ್ಯಕ್ಷರೆ, ಬಹಳ ಜನ ಬಹಳ ನಿಖರವಾಗಿ ತಮ್ಮ ಅಭಿಪ್ರಾಯವನ್ನು ಈ ವಿಚಾರದಲ್ಲಿ ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಒಂದು ಹಂತದಲ್ಲಿ ಪ್ರವೇಶ ಮಾಡಿ ತಮ್ಮ ಸರ್ಕಾರದ ಉದ್ದೇಶವನ್ನು ಕೂಡ ಪರೀಕ್ಷವಾಗಿ ನಮಗೆ ತಿಳಿಸಿದ್ದಾರೆ. ಸ್ವಲ್ಪ ಹೊತ್ತಿನ ಮೊದಲು ನಮ್ಮ ಗೆಳೆಯ ವೀರಬಸಂತ ರೆಡ್ಡಿಯವರ ಮಾತು ಕೇಳಿದೆ. ಅವರನ್ನು ಅಭಿನಂದಿಸಬೇಕು ಅಂತ ನನಗೆ ಆಸೆಯಾಗುತ್ತಾ ಇದೆ. ಹೆಚ್ಚು ಹೊತ್ತು ತೆಗೆದುಕೊಳ್ಳಲೇ ಇಲ್ಲ. ಬಹಳ ಸರಳವಾಗಿ ಅವರು ತಮ್ಮ ಅಭಿಪ್ರಾಯ ಕೊಟ್ಟರು. ಸರ್ಕಾರಿ ವೈದ್ಯಕೀಯ ಕಾಲೇಜುಗಳೇನು ಇವತ್ತಿವೆ ಅಲ್ಲಿ ಒಬ್ಬ ವಿದ್ಯಾರ್ಥಿಯನ್ನು ಡಾಕ್ಟರ್ ಮಾಡಲು ಎಷ್ಟು ವೆಚ್ಚವಾಗುತ್ತದೆ

ಎಂದು ಒಂದು ಅಂದಾಜು ಮಾಡಬೇಕು. ಅದರ ಆಧಾರದ ಮೇಲೆ ಇವರು ಹೇಗೆ ಹೋಗಬೇಕು ಎಂದು ತೀರ್ಮಾನ ಮಾಡೋಣ ಎಂದರು. ಮನಸ್ಸಿಗೆ ಬಹಳ ನೋವಾಗುತ್ತದೆ. ಯಾರು ಯಾರನ್ನು ಶಾಪಿಸಬೇಕೋ ನಮಗೆ ಅರ್ಥವಾಗುವುದಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಯಾ ಮತಕ್ಷೇತ್ರ ವ್ಯವಸ್ಥೆಯಲ್ಲಿ ಮತದಾನದಲ್ಲಿ ಪಾಲ್ಗೊಳ್ಳುವ ಅಧಿಕ ಜನರ ಅಭಿಪ್ರಾಯದ ಆದೇಶದ ಮೇರೆಗೆ ನಾವಿಲ್ಲಿಗೆ ಬಂದಿರುವುದು. ಅದರರ್ಥ ಒಟ್ಟಾರೆ ನಾವಿಲ್ಲಿರುವ ಜನಪ್ರತಿನಿಧಿಗಳು ಈ ಸದನದ ಆಯಸ್ಸು ಇರುವವರೆಗೆ ನಾವು ವ್ಯಕ್ತಪಡಿಸುವುದು ಜನಪರವಾದ ಅಭಿಪ್ರಾಯ ಎಂಬುದೊಂದು ರೀತಿಯ ಸಿದ್ಧಾಂತ. ಅದು ಆಗಿರಲೇಬೇಕು ಎಂಬ ಭಯ ಕೂಡ ನಮ್ಮಲ್ಲಿರಬೇಕು. ಇವತ್ತು ಸಾಮಾನ್ಯ ಜನ ಯಾರ ಪ್ರತಿನಿಧಿಗಳಾಗಿ ನಾವಿಲ್ಲಿಗೆ ಬಂದಿದ್ದೇವೆ. ಅವರು ಅಳಲು ಗೋಳನ್ನು ಈ ಸದನದಲ್ಲಿ ನಾವು ಪ್ರಸ್ತಾಪ ಮಾಡುತ್ತಿದ್ದೇವೆ. ನಾನು ಆಗಲೇ ಮಧ್ಯಪ್ರವೇಶ ಮಾಡಿ ಒಂದು ಮಾತು ಹೇಳಿದೆ, ಅಧ್ಯಕ್ಷರೆ, ಅಗ್ನಿಯ ಅವಿಷ್ಕಾರವಾಗಿ ಮಾನವನ ನಾಗರೀಕತೆ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಭೂಮಿಗೆ ಮನುಷ್ಯನಿಗೆ ವಿಶೇಷವಾದ ಒಂದು ರೀತಿಯ ಸಂಬಂಧವಿದೆ. ಭೂಮಿಯ ಒಡೆತನವನ್ನು ಆಧರಿಸಿ ಸಮಾಜದಲ್ಲಿ ಅವನಿಗಿರುವ ಸ್ಥಾನ ಸ್ಥೈರ್ಯ ಇವೆಲ್ಲವೂ ಕೂತ ಅವಲಂಬಿತವಾಗಿವೆ. ಭೂಮಿಯ ಒಡೆತನ ಒಬ್ಬ ಮನುಷ್ಯನಿಗೆ ವಿಶೇಷವಾಗಿ ಒಬ್ಬ ಒಂದು ರೀತಿಯ ಶಕ್ತಿ ಒಂದು ರೀತಿ ನಿಶಾ ಕೊಡುತ್ತಾ ಇದೆ. ಕ್ರಮೇಣ ಕಾಲ ಕಳೆಯುತ್ತಾ ಕಳೆಯುತ್ತಾ ಭೂಮಿಯ ಒಡೆತನದ ಕಾರಣದಿಂದಾಗಿ ಸವಾಜದ ಇತರ ಜನರ ಮೇಲೆ ದೌರ್ಜನ್ಯ ವಾಡುತ್ತಾನೆ ಅವಾನವೀಯತೆಯಿಂದ ನಡೆದುಕೊಳ್ಳುತ್ತಾನೆ ಎಲ್ಲೋ ಒಂದು ಕಡೆ ಶಕ್ತಿ ಕೇಂದ್ರೀಕೃತವಾಗುತ್ತಾ ಇದೆ ಎಂದು ನಾವು ಒಂದು ಹೆಜ್ಜೆ ಮುಂದೆ ಹೋಗಬೇಕು ಬದುಕನ್ನು ಸುಧಾರಿಸಬೇಕು ಎಂದು ಭೂಸುಧಾರಣೆಯನ್ನು ಆಲೋಚನೆ ಮಾಡುತ್ತೇವೆ. ಆ ಭೂಮಿಯ ಒಡೆತನದಿಂದ ಭೂಮಿಯನ್ನು ಬಿಡಿಸಿ ಉಳುವವನಿಗೇ ಭೂಮಿ ವಹಿಸಿಕೊಡಬೇಕಾಗಿದ್ದರೆ ಅದೇನೂ ಅಷ್ಟು ಸುಲಭದ ವಿಚಾರವೇನಲ್ಲ. ಅದಕ್ಕಾಗಿರುವಂತಹ ಸಂಘರ್ಷವೇನೂ ಕಡಿಮೆಯಿಲ್ಲ. ಆದರೂ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೆಚ್ಚು ಹಿಂಸೆಗೆ ಅವಕಾಶ ಕೊಡದೆ ತನ್ನದೇ ಆದ ವ್ಯಾಜ್ಯವ್ಯವಹಾರಗಳು ನಡೆದು ಯಶಸ್ವಿಯಾಗಿ ನಾವು ಈ ಸುಧಾರಣೆಯನ್ನು ಜಾರಿಗೆ ತರುವುದು ಸಾಧ್ಯವಾಗಿದೆ. ಹಿಂದಿನ ಸದನದಲ್ಲಿ ಇರುವ ಅವಕಾಶ ನಮಗಿರಲಿಲ್ಲ. ಹಿಂದಿನ ಸರ್ಕಾರ ಯಾರು ಐಎಂಎಫ್‌ಎಲ್ ತಯಾರಿಸುವ ಡಿಸ್ಟಿಲರೀಸ್ ಇದ್ದಾರೆ, ಇವರೆಲ್ಲೋ ಒಂದು ಕಡೆ ಸರ್ಕಾರಕ್ಕೆ ಬರುವ ಆದಾಯವನ್ನು ಮೊಟಕುಗೊಳಿಸುತ್ತಾರೆ ಸೆಕೆಂಡ್ಸ್ ಹಾವಳಿ ಇದೆ, ಇವರು ತಮ್ಮದೇ ಆದ ಪ್ರಭಾವವನ್ನು ಎಲ್ಲಾ ವರ್ಗದ ಜನರ ಮೇಲೆ ಬೀರುತ್ತಾರೆ ಅಂತ ಇವರನ್ನು ಹತೋಟಿಗೆ ತರಬೇಕು ಅಂತ ಬಿವರೇಜ್ ನಿಗಮ ಮಾಡುವ ಸಾಹಸವನ್ನೇ ಮಾಡಿದರು. ಅದರಿಂದ ಕೋಟ್ಯಾಂತರ ರೂಪಾಯಿ ಆದಾಯ ಬಂದಿರುವುದೂ ಇಡೀ ಲೋಕಕ್ಕೇ ಗೊತ್ತಾಗಿದೆ. ನಾನ್ಯಾಕೆ ಈ ವಿಚಾರ ಹೇಳುತ್ತೇನೆ ಅಂದರೆ ಅರಸು ಮುಖ್ಯ ಮಂತ್ರಿಯಾಗಿದ್ದಾಗ ಒಂದು ದಿವಸ ರಾತ್ರೋರಾತ್ರಿ ಟ್ರಾನ್ಸ್‌ಪೋರ್ಟ್ ರಾಷ್ಟ್ರೀಕರಣ ಪ್ರಕಟಿಸಿದರು. ನೂರಾರು ಕಾಂಟ್ರಾಕ್ಟ್ ಬಸ್‌ಗಳು ಎಲ್ಲೆಲ್ಲಿದ್ದವೋ ಅಲ್ಲಿಂದಲೇ ಸೀಜ್ ಮಾಡಿ ತಂದು ಕೆಎಸ್‌ಆರ್‌ಟಿಸಿ ಆಫೀಸ್ ಮುಂದೆ ನಿಲ್ಲಿಸಿಕೊಂಡರು. ಅವರಿಗೆ ಕಾಂಪನ್‌ಸೇಷನ್ ಕೊಡುವುದು ಮತ್ತೊಂದು ಎಲ್ಲಾ ಆಮೇಲೆ ಆಲೋಚನೆ ಮಾಡಿದರು. ಸರ್ಕಾರಕ್ಕೆ ಈ ಸದನಕ್ಕೆ ಜನಪರವಾದ ನಿಲುವನ್ನು ತೆಗೆದುಕೊಳ್ಳುವಂತಹ ನಿರ್ಬಂಧ ಇದೆ. ಹೊಣೆಗಾರಿಕೆ ಇದೆ, ಆ ಕಾರಣದಿಂದಾಗಿ ಯಾರು ಇವರು ಕೆಲವೇ ಜನ ಅದೂ ಇವರೆಲ್ಲಾ ಸರ್ಕಾರದ ಹಂಗಿನಲ್ಲಿದ್ದಾರೆ.

ಇವರು ತಮ್ಮ ಸಂಸ್ಥೆಗಳನ್ನು ಪ್ರಾರಂಭಿಸಬೇಕಾಗಿದ್ದರೆ ನಡೆಸಬೇಕಾಗಿದ್ದರೆ ಪ್ರತಿ ಹಂತದಲ್ಲೂ ಸರ್ಕಾರದ ನೆರವನ್ನು ಪಡೆದುಕೊಂಡು ಸರ್ಕಾರದ ಆಶ್ರಯದಲ್ಲಿ ತಮ್ಮ ಶಕ್ತಿಯನ್ನು ವೃದ್ಧಿ ಮಾಡಿಕೊಂಡು ಸರ್ಕಾರಕ್ಕೆ ಕನಿಷ್ಟ ಗೌರವ ಕೊಡುವ ಸೌಜನ್ಯ ಕೂಡ ಇಲ್ಲದೆ ನಾವಿಲ್ಲದೆ ಸೂರ್ಯೋದಯ ಅಸ್ತಮಾನ ಕೂಡ ಆಗುವುದಿಲ್ಲ ಎಂಬ ಹಂತಕ್ಕೆ ಹೋಗುತ್ತಾರೆ. ಇದು ನಮ್ಮೆಲ್ಲರಿಗೂ ಆಗುವ ಅಪಮಾನ ಎಂದು ನಾನು ಭಾವಿಸುತ್ತೇನೆ. ಸಿಇಟಿಗೆ ಅಪಿಯರ್ ಆಗಿರುವ ಮಕ್ಕಳ ಪೇರೆಂಟ್ಸ್ ಅಥವಾ ಬೇರೆಯವರೆಲ್ಲಾ ಇಲ್ಲಿ ಬಂದು ಹೇಳುವುದಕ್ಕೆ ಆಗುವುದಿಲ್ಲ. ಅವರ ಪರವಾಗೇ ನಮ್ಮನಿಲ್ಲಿಗೆ ಕಳುಹಿಸಿರುವುದು, ರಾಷ್ಟ್ರೀಕರಣ ಮಾಡುವುದು ಬಿಡುವುದು ಎಲ್ಲಾ ನಿಮಗೆ ಬಿಡುತ್ತೇವೆ, ಸದಸ್ಯರುಗಳು ಅದನ್ನು ಪ್ರಸ್ತಾಪ ಮಾಡಿದ್ದಾರೆ, ಆದರೆ ನಾನು ಕೇಳುವುದಿಷ್ಟೆ ಡಾ: ವೀರಬಸಂತರೆಡ್ಡಿ ಹೇಳಿದಂತೆ ಹುಬ್ಬಳ್ಳಿ ಮೆಡಿಕಲ್ ಕಾಲೇಜಿನಲ್ಲಿ ಓದುವ ಒಬ್ಬ ಹುಡುಗ ಕೋರ್ಸನ್ನು ಮುಗಿಸಲು ಅಂದಾಜು ಎರಡು ಲಕ್ಷ ರೂ ಬೇಕು ಅನ್ನುವುದಾದರೆ ನಿಮ್ಮ ಖಾಸಗಿ ಕಾಲೇಜುಗಳಲ್ಲಿ 2ಕ್ಕೆ ನಾಲ್ಕು ಲಕ್ಷ ರೂ ಪಡೆಯಿರಿ. 25,30,40,60 ಲಕ್ಷ ರೂ. ಹಾಗಾದರೆ ಒಂದು ಕೆಲಸ ಮಾಡೋಣ: ಈ ಕಾಲೇಜುಗಳಲ್ಲಿ ಮ್ಯಾನೇಜ್‌ಮೆಂಟ್ ಕೋಟಾ ಯಾರ್‍ಯಾರು ಪ್ರವೇಶ ಪಡೆಯುವರು ಅವರ ಪೋಷಕರ ಸ್ಥಿತಿಗತಿ ತನಿಖೆ ಆಗಬೇಕಾಗುತ್ತದೆ. ಅವರಿಗೆ ಹಣ ಎಲ್ಲಿಂದ ಬಂತು? ಅವರು ಆದಾಯ ತೆರಿಗೆ ಅಸೆಸ್ಸ ಆಗಿದ್ದಾರಾ? ಆಗಿದ್ದರೆ ಎಷ್ಟು ವರ್ಷದಿಂದ ಆಗಿದ್ದಾರೆ ಎಷ್ಟು ಹಣ ಕೊಟ್ಟಿದ್ದಾರೆ, ಅದು ಅಕೌಂಟೆಡ್ ಹಣವಾ ಅನ್ ಅಕೌಂಟೆಡ್ ಹಣವಾ ಇವರು ಪಡೆದುಕೊಂಡ ಹಣಕ್ಕೆ ಎಷ್ಟಕ್ಕೆ ರಶೀದಿ ಕೊಡುತ್ತಾರೆ ಎಷ್ಟಕ್ಕೆ ಕೊಡುವುದಿಲ್ಲ 20 ವರ್ಷದ ಕೆಳಗೆ ಬೆಂಗಳೂರಿನಲ್ಲಿ ಶ್ರೀಮಂತ ಆಗಲಿ ಬಡವ ಆಗಲಿ ದೊಡ್ಡವನಾಗಲೀ ಸಣ್ಣವನಾಗಲೀ ವಿಕ್ಟೋರಿಯಾ ಬೌರಿಂಗ್ ಆಸ್ಪತ್ರೆಗಳಿಗೆ ಹೋಗುತ್ತಿದ್ದ, ಅವೇ ಪ್ರೀಮಿಯರ್ ಆಸ್ಪತ್ರೆಗಳು. ಇವತ್ತು ಅಂತಹ ಆಸ್ಪತ್ರೆಗಳನ್ನೆಲ್ಲಾ ನಿಷ್ಕ್ರೀಯಗೊಳಿಸಿ ಅವುಗಳ ಮೇಲೆ ನಾವು ಹಾಕಿದ ಬಂಡವಾಳವೆಲ್ಲವನ್ನೂ ನಾವು ವ್ಯರ್ಥ ಮಾಡಿಸಿ ಅದರ ಬಲಿಗೆ ವೋಕಾರ್ಟ್ ಮಣಿಪಾಲ್, ಮಲ್ಯ ಮತ್ತೊಂದು ಪಂಚತಾರ ಆಸ್ಪತ್ರೆಗಳು ಬಂದಿವೆ. ಬಡವ ಹೋಗುವ ಆಸ್ಪತ್ರೆಗಳು ನಿಷ್ಕ್ರಿಯವಾಗಿವೆ. ಈ ಆಸ್ಪತ್ರೆಗೆ ಹೋಗುವ ಆರ್ಥಿಕ ಚೈತನ್ಯ ಅವರಿಗಿಲ್ಲ, ಹೊಸ ಮೆಡಿಕಲ್ ಕಾಲೇಜನ್ನು ಪ್ರಾರಂಭ ಮಾಡಿದ್ದೇವೆ, ವರ್ಷಕ್ಕೆ ಇಷ್ಟು ಸಾವಿರ ವೈದ್ಯಕೀಯ ಗ್ರಾಜುಯೇಟ್‌ಗಳು ಹೊರಗೆ ಬರುತ್ತಿದ್ದಾರೆ ಆದರೂ ನರಳುತ್ತಿರುವವರಿಗೆ ನಾವು ಚಿಕಿತ್ಸೆ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಬೈಪಾಸ್, ಆಗಬೇಕಾಗಿದ್ದರೆ, ಅಂಜಿಯೋಪ್ಲಾಸ್ಟ್ ಅಥವಾ ಅಂಜಿಯೋಗ್ರಾಂಗಳು ಆಗಬೇಕಾಗಿದ್ದರೆ ಅವನ ಗ್ರೀನ್‌ಕಾರ್ಡ್ ಆದಾಯಪತ್ರ ಜಯದೇವದಿಂದ ಒಂದು ಮೆಡಿಕಲ್ ಎಸ್ಟಿಮೇಷನ್ ಇಷ್ಟನ್ನೂ ತಂದು ನಾವು ಮುಖ್ಯ ಮಂತ್ರಿಗಳ ಕಚೇರಿಗೆ ಕೊಟ್ಟರೆ ಅವರು ಐದೋ ಹತ್ತು ಸಾವಿರ ರೂ ಬಿಡುಗಡೆ ಮಾಡುತ್ತಾರೆ ಉಳಿದದ್ದನ್ನು ಅವನು ಅಡ್ಜಸ್ಟ್ ಮಾಡಬೇಕು. ಅಷ್ಟು ಮಾಡುವ ಚೈತನ್ಯ ಅವನಿಗಿಲ್ಲಾಂದರೆ ನಮ್ಮ ಮಾನ್ಯ ರಾಜೇಂದ್ರನ್ ಹೇಳಿದಂತೆ ವಿಧಿ 14,21 ಪ್ರಶ್ನೆ ಇಲ್ಲ, ಅವನಿಗೆ ಬದುಕುವ ಹಕ್ಕೇ ಇಲ್ಲ ಅವನು ಸಾಯಬೇಕು. ಹಣ ಇದ್ದರೆ ಬದುಕಬಹುದು ಹಣ ಇಲ್ಲದಿದ್ದರೆ ಸಾಯಬೇಕು. ಬಡವನಿಗೆ ಸರ್ಕಾರಿ ಆಸ್ಪತ್ರೆಯಲ್ಲೂ ಧೈರ್ಯವಾಗಿ ಹೃದಯದ ಖಾಯಿಲೆ ಇದ್ದರೆ ನಿಮಗೆ ಚಿಕಿತ್ಸೆ ಕೊಡುತ್ತೇವೆ ಎಂಬ ಶಕ್ತಿ ಆರ್ಥಿಕಕ್ಷಮತೆ ನಮಗಿಲ್ಲ. ಇವರು ನಮ್ಮ ಮುಲಾಜು ನಮ್ಮ ನೆರಳು ನಮ್ಮ ಹಂಗಿನಲ್ಲಿ ಎಲ್ಲಾ ಶಕ್ತಿಯನ್ನು ಬಳಸಿಕೊಂಡು ನಮ್ಮನ್ನು ಹಂಗಿಸುತ್ತಾರೆ ನಮಗೆ ಡಿಕ್ಟೇಟ್ ಮಾಡುತ್ತಾರೆ ಎಂತಹ ವಿಪರ್ಯಾಸ ನೋಡಿ? ಒಂದು ಪ್ರೈಮರಿ ಹೆಲ್ತ್ ಸೆಂಟರ್‌ನಲ್ಲಿ ನನ್ನ ಹಳ್ಳಿ ಅಲ್ಲಿರುವಂತಹ ಡಾಕ್ಟರ್

ಫಾರ್ಮಸಿಸ್ಟ್ ಅಟೆಂಡರ್ಸ್ ಎಲ್ಲರಿಗೆ ಸೇರಿಸಿ ನಾವು ಕೊಡುವ ಸಂಬಳ ಒಂದು ತಿಂಗಳಿಗೆ 15 ಲಕ್ಷ ರೂಪಾಯಿ ಅಲ್ಲಿ ಸಾರ್ವಜನಿಕರ ಔಷಧಿಗಾಗಿ ಕೊಡುವುದು ಎಷ್ಟು ಅಂದರೆ ಇಡೀ ವರ್ಷಕ್ಕೆ ಒಂದು ಲಕ್ಷ ರೂಪಾಯಿ ಅಯಿಂಟ್‌ಮೆಂಟ್ ಇರುವುದಿಲ್ಲ; ಬ್ಯಾಂಡೇಜ್ ಬಟ್ಟೆ ಇರುವುದಿಲ್ಲ. ತಲೆನೋವಿಗೆ ಔಷಧಿ ಇರುವುದಿಲ್ಲ; ಯಾವ ಸೌಭಾಗ್ಯಕ್ಕೆ ಬೇಕು ಇವು? ಅಂದರೆ ನಾವು ಜಯದೇವ ಆಸ್ಪತ್ರೆಯನ್ನು ಅಸಹಾಯಕ ಸ್ಥಿತಿಯಲ್ಲಿಡುತ್ತೇವೆ, ವಿಕ್ಟೋರಿಯವನ್ನು ನಿಷ್ಕ್ರಿಯಗೊಳಿಸುತ್ತೇವೆ, ನಮ್ಮ ಹಳ್ಳಿ ಆಸ್ಪತ್ರೆಯನ್ನು ಅಲಂಕಾರಕ್ಕೆ ಇಟ್ಟುಕೊಳ್ಳುತ್ತೇವೆ, ಹೊಸ ಮೆಡಿಕಲ್ ಕಾಲೇಜಿಗೆ ಅನುಮತಿ ಕೊಡುತ್ತೇವೆ, ಅವರಿಗೆ ಸರ್ಕಾರದಿಮದ ಎಲ್ಲಾ ಸೌಕರ್ಯ ಕೊಡುತ್ತೇವೆ, ನಮ್ಮ ಮಕ್ಕಳನ್ನು ಹೊರಗೆ ನಿಲ್ಲಿಸುತ್ತೇವೆ. ಅಕ್ರಮವಾಗಿ, ನಿರ್ಲಜ್ಜಿತರಾಗಿ ಈ ದೇಶದಲ್ಲಿರತಕ್ಕ ಎಲ್ಲಾ ಶಾಸನಗಳನ್ನು ಮುರಿದು ಸಂಪತ್ತನ್ನು ಗಳಿಸಿರತಕ್ಕಂಥವರ ಮಕ್ಕಳು ಅಲ್ಲಿಗೆ ಹೋಗವುದಕ್ಕೆ ಅವಕಾಶವನ್ನು ಮಾಡಿಕೊಡುತ್ತೇವೆ. ಇವರು ನಾಳೆ ವೈದ್ಯರುಗಳಾಗಿ ಮತ್ತೆ ವಾಪಸ್ ಮಲ್ಯಕ್ಕೆ ವೊಕಾರ್ಡ್‌ಗೆ ಇಲ್ಲೆಲ್ಲಾ ಬಂದು ಸ್ಪೆಷಲಿಸ್ಟ್ ಆಗಿ ನಮ್ಮನ್ನು ಕಾಪಾಡತಕ್ಕಂಥದ್ದು. ಇದಕ್ಕೆ ಎಲ್ಲೋ ಒಂದು ಕಡೆಗೆ ತೆರೆಯನ್ನು ಎಳೆಯಬೇಕಾಗುತ್ತದೆ. ಕಡೆ ನಿಮಿಷದಲ್ಲಿ ನಾನು ತಮ್ಮ ಅನುಮತಿಯನ್ನು ಕೇಳಿದೆ. ತಾವು ದೊಡ್ಡಮನಸ್ಸು ಮಾಡಿ ನನ್ನ ಭಾವನೆಗಳನ್ನು ವ್ಯಕ್ತಮಾಡುವುದಕ್ಕೆ ನನಗೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಸರ್ಕಾರಕ್ಕೆ ನಾನು ಕೈಜೋಡಿಸಿ ಕೇಳಿಕೊಳ್ಳುವುದಿಷ್ಟೆ ಅಧಿಕಾರ ಶಾಶ್ವತವಲ್ಲ ಅಧಿಕಾರ ಅವಧಿಯಲ್ಲಿ ನೀವು ತೆಗೆದುಕೊಳ್ಳುವ ನಿರ್ಣಯಗಳು ಚರಿತ್ರೆಯಾಗುತ್ತದೆ. ನೀವು ಚರಿತ್ರೆಯ ಒಂದು ಭಾಗ ಆಗತಕ್ಕಂಥ ಒಂದು ಹಂತವನ್ನು ಈಗ ನೀವು ತಲುಪಬೇಕು. ಬದುಕಿನಲ್ಲಿ ಸಾಕಷ್ಟು ನೋಡಿದ್ದೀರಿ, ಇನ್ನು ನೋಡಬೇಕಾದ್ದು ಏನೂ ಇಲ್ಲ. ಈ ರಾಜ್ಯದ ಜನ, ಮುಂದಿನ ಜನಾಂಗ ಪೀಳಿಗೆ ನಿಮ್ಮನ್ನು ಸದಾಕಾಲ ನೆನೆಸಬೇಕು, ಹರಸಬೇಕು. ಇಂಥ ಪುಣ್ಯಾತ್ಮರ ಕಾಲದಲ್ಲಿ ಇಂಥ ಒಳ್ಳೆಯ ಕೆಲಸಗಳಾಯಿತು ಎಂದು ಹೇಳಿ ಹೇಳಬೇಕು. ಯಾರು ನಮ್ಮನ್ನು ಕಾಡಿದ್ದಾರೆ, ಅವರಿಗೆ ಅರ್ಥವಾಗಬೇಕು. ಎಲ್ಲೋ ಒಂದು ಕಡೆಗೆ ಮಿತಿ ಇದೆ, ಮಿತಿ ಧಾಟಿ ಹೋದರೆ ನಮಗೆ ಶಿಕ್ಷೆಯಾಗುತ್ತದೆ. ನಾವು ಒಂದು ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇವೆ ಎನ್ನುವ ಪ್ರಜ್ಞೆಯನ್ನು ನಾವು ಅವರಿಗೆ ಪ್ರೇರೇಪಿಸಬೇಕಾಗುತ್ತದೆ. ಆದ್ದರಿಂದ ಸರ್ಕಾರಕ್ಕೆ ನಾನು ವಿನಂತಿಯನ್ನು ಮಾಡುತ್ತೇನೆ, ದಯಮಾಡಿ ಜನಪರವಾದ ನಿಲುವನ್ನು ತಾಳತಕ್ಕ ಧೈರ್ಯವನ್ನು ನೀವು ತೋರಿಸಬೇಕು. ಜನ ನಿಮ್ಮನ್ನು ಮೆಚ್ಚತಕ್ಕ ನಿರ್ಣಯವನ್ನು ನೀವು ತೆಗೆದುಕೊಳ್ಳಬೇಕು. ನಿಮ್ಮ ಹಂಗಿನಲ್ಲಿ ಅವರಿದ್ದಾರೆಯೇ ಹೊರತು ಅವರ ಹಂಗಿನಲ್ಲಿ ನೀವು ಇಲ್ಲ. ನಿಮಗೆ ಹಂಗು ಜನರದ್ದೇ ಹೊರತು ಅವರದ್ದು ಅಲ್ಲ. ಜನರ ಹಂಗಿನಿಂದ ಹೊರಗೆ ಬರಬೇಕಾಗಿದ್ದರೆ ಜನರಿಂದ ನೀವು ಪುರಸ್ಕಾರಕ್ಕೆ ಒಳಗಾಗಬೇಕಾಗಿದ್ದರೆ, ಗೌರವಕ್ಕೆ ಒಳಪಡಬೇಕಾಗಿದ್ದರೆ ದಯಮಾಡಿ ಇವರನ್ನು ಹತೋಟಿಗೆ ತೆಗೆದುಕೊಂಡು ಬನ್ನಿ. ಈ ಕಾಲೇಜುಗಳನ್ನು ಎಷ್ಟೇ ಶ್ರಮವಾದರೂ ಕೂಡ ನಮ್ಮ ಆಡಳಿತಕ್ಕೆ ತೆಗೆದುಕೊಳ್ಳತಕ್ಕ ಧೈರ್ಯವನ್ನು ನೀವು ತೋರಿಸಿ. ನಮ್ಮಲ್ಲಿ ಟ್ಯಾಲೆಂಟ್‌ಗೇನೂ ಕೊರತೆ ಇಲ್ಲ. ಚೈತನ್ಯಕ್ಕೆ ಏನೂ ಕೊರತೆ ಇಲ್ಲ. ಯಾವ ಪ್ರೈವೇಟ್ ಕಾಲೇಜುಗಳು ಇಲ್ಲದೇ ಇದ್ದಾಗ ನಮ್ಮಲ್ಲಿ ಬೆಸ್ಟ್ ಆಫ್ ಡಾಕ್ಟರ್ಸ್ ಎಮರ್ಜ್ ಆಗಿಲ್ಲವೇ? ಎಲ್ಲಾ ಶಸ್ತ್ರಚಿಕಿತ್ಸೆಗಳನ್ನು ಇವರು ಮಾಡುತ್ತಿರಲಿಲ್ಲವೇ? ಅವತ್ತೆಲ್ಲಾ ಇವರೇ ಇದ್ದರಾ? ಖಾಯಿಲೆ ಇಲ್ಲದವನಿಗೂ ಕೂಡ ಈ ಫೈವ್ ಸ್ಟಾರ್ ಆಸ್ಪತ್ರೆಗಳ

ಬಾಗಿಲುಗಳನ್ನು ತುಳಿದರೆ ಅವರ ಟ್ಯಾರಿಫ್‌ನ್ನು ನೋಡಿದರೆ ಖಾಯಿಲೆ ಬರುತ್ತದೆ. ಟಿವಿಯಲ್ಲಿ ಅಡ್ವರ್‌ಟೈಜ್ ಮಾಡುತ್ತಾರೆ. ಸೋಪಿಗೆ ಮಾಡಿದಂತೆ, ಗೀಸರ್‌ಗೆ ಮಾಡಿದಂತೆ, ಕಾರಿಗೆ ಮಾಡಿದಂತೆ ಆಂಜಿಯೋಪ್ಲಾಸ್ಟ್‌ಗೆ ಇಷ್ಟು ಎಂದು ಹೇಳಿ 24,740 ರೂಪಾಯಿ ಎಂದು ನಾರಾಯಣ ಹೃದಯಾಲಯದವರು ನಾವು ಇಷ್ಟು ರೇಟ್‌ಗೆ ಮಾಡುತ್ತೇವೆಂದು ಹೇಳಿ ಹೃದಯ ಶಸ್ತ್ರಚಿಕಿತ್ಸೆಯ ವಿಚಾರ ಟಿವಿ ಯಲ್ಲಿ ಪ್ರಚಾರ ಮಾಡಿ ಪೇಷೆಂಟ್‌ಗಳನ್ನು ಕರೆಯತಕ್ಕಂಥ ಹಂತಕ್ಕೆ ನಾವು ತಲುಪಿದ್ದೇವೆ. ಪ್ಯಾಕೇಜ್ ಸ್ಕೀಮ್, ವೈದ್ಯಕೀಯ ಕ್ಷೇತ್ರ ಯಾವ ಪಾವಿತ್ರ್ಯತೆಯನ್ನು ಉಳಿಸಿಕೊಳ್ಳಬೇಕಾಗಿತ್ತು. ಅದು ಎಲ್ಲಿಂದ ಎಲ್ಲಿಗೆ ಇಳಿದಿದೆ ಎಂದು ಹೇಳಿ ಆಲೋಚನೆ ಮಾಡಿ ಈ ನೀಚ ಸಂಸ್ಕಾರ ಉಳ್ಳಂಥವರಿಂದ ಸರ್ಕಾರ ಪಾಠವನ್ನು ಕೇಳಬೇಕಾಗಿಲ್ಲ. ಇವರಿಗೆ ತಕ್ಕ ಶಾಸ್ತಿಯನ್ನು ಮಾಡಿ ಬುದ್ಧಿ ಕಲಿಸತಕ್ಕಂಥ ಧೈರ್ಯವನ್ನು ಸರ್ಕಾರ ತೋರಿಸುತ್ತದೆ ಎಂದು ಹೇಳಿ ಆಶಿಸಿ ನನಗೆ ಈ ಅವಕಾಶವನ್ನು ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

† **ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ)** : ಮಾನ್ಯ ಅಧ್ಯಕ್ಷರೇ, ನಾನು ಒಂದೇ ಒಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯವನ್ನು ಮಾಡುವುದು. ಅವರು ನಾಳೆ ಸಭೆಯನ್ನು ಕರೆಯಬಹುದು, ಚರ್ಚೆ ಮಾಡಬಹುದು, ಕಳೆದ ಅನೇಕ ತಿಂಗಳಿಂದಲೂ ಇದು ನಡೆದೇ ಇದೆ. ಹೋದ ವರ್ಷವೂ ಇದೇ ಗೊಂದಲವಾಯಿತು. ಈಗಾಗಲೇ ಅನೇಕ ಬಾರಿ ಸ್ಪಷ್ಟವಾಗಿ ನೀವು ಮಡುತ್ತೇನೆ ಎಂದು ಹೇಳಿದ್ದು ಮಾಡಬೇಕಾಗಿರುವಂಥದ್ದು ಎಸ್‌ಸಿ ಎಸ್‌ಟಿ ಓಬಿಸಿ ಜನರಲ್ ಮೆರಿಟ್ ಇರುವಂಥ ಈ ಸಾಮಾನ್ಯ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಈಗೇನು ಹೆಚ್ಚು ಶುಲ್ಕ ಇದೆ. ಅದನ್ನು ಸರ್ಕಾರ ಭರಿಸಬೇಕಾಗುತ್ತದೆ. ನನಗನ್ನಿಸುತ್ತದೆ. ನೀವು ಎಷ್ಟು ಸಭೆಗಳನ್ನು ಮಾಡಿದರೂ ಈಗ ಆ ಹಂತಕ್ಕೆ ಬಂದು ತಲುಪಿದ್ದೇವೆ. ಕಳೆದ ಎರಡು–ಮೂರು ತಿಂಗಳ ಹಿಂದೆ ಅದು ಯಾವ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿತ್ತೋ ಆದು ಆಗಲಿಲ್ಲ. ಅದು ಯಾವುದೊ ಮುಲಾಜಿಗೆ ನಾವು ಇವತ್ತು ಸಿಕ್ಕಿಕೊಂಡು ಆ ಪ್ರೈವೇಟ್ ಮ್ಯಾನೇಜ್‌ಮೆಂಟ್‌ನ ಒಂದು ಕೈಗೊಂಬೆಯಂತೆ ವರ್ತನೆ ಮಾಡುತ್ತಿದ್ದಾರೆ ಎನ್ನುವಂಥದ್ದು ಜನರೂ ಮಾತನಾಡುತ್ತಿದ್ದಾರೆ, ಇದು ಸತ್ಯಾಂಶವೂ ಹೌದು. ನಾನು ಬಜೆಟ್ ಭಾಷಣವನ್ನು ಓದತಕ್ಕ ಕಾಲದಲ್ಲಿ ಇದಕ್ಕೇನಾದರೂ ಸ್ಪಷ್ಟವಾಗಿ ದುಡ್ಡು ತೆಗೆದಿಡುತ್ತೀರಿ ಎಂದು ನಾವು ಅಂದುಕೊಂಡಿದ್ದೆವು. ಆಶ್ಚರ್ಯ ನನಗೆ ತಾವು ತೆಗೆದು ಇಟ್ಟಿಲ್ಲ. ತಾವು ಉತ್ತರವನ್ನು ಕೊಡುವಂಥ ಸಂದರ್ಭದಲ್ಲಿ ಈ ಬಡ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ನೀವು ಫೀ ಡಿಫರೆನ್ಸ್‌ನ್ನು ತುಂಬುವುದಕ್ಕೆ ಸುಮಾರು 65 ಕೋಟಿ ರೂಪಾಯಿಗಳಾಗಬಹುದು ಎನ್ನುವ ಒಂದು ಅಂದಾಜು ಇದೆ. ಅದನ್ನು ನಾನು ಬಿಡುಗಡೆ ಮಾಡುತ್ತೇನೆ. ತೆಗೆದಿಡುತ್ತೇನೆ, ತೊಂದರೆಯಾಗದಂತೆ ನೋಡಿಕೊಳ್ಳುತ್ತೇನೆ ಎನ್ನುವಂಥ ಒಂದು ಭರವಸೆಯನ್ನು ನೀವು ಕೊಟ್ಟರೆ ನಾಳೆ ಸಭೆಗೆ ನಾವು ಬಂದು ಮಾಡುವುದೇನಾದರೂ ಇದೇ ಎಂದು ನನಗೇನೂ ಅನಿಸುವುದಿಲ್ಲ. ಅದಕ್ಕೆ ನಾನು ನಿಮಗೆ ವಿನಂತಿಯನ್ನು ಮಾಡುವುದು, ಇವತ್ತು ಈ ಮೆಡಿಕಲ್, ಇಂಜಿನಿಯರಿಂಗ್ ಸಾಮಾನ್ಯ ಜನರ ಮಕ್ಕಳಿಗೆ ಇನ್ನು ಈ ಶಿಕ್ಷಣ ಸಾಧ್ಯ ಇಲ್ಲ ಇದು ಎಟುಕುವುದಿಲ್ಲ ಎನ್ನುವ ತೀರ್ಮಾನಕ್ಕೆ ಬಂದಿದ್ದಾರೆ. ಇದು ಮೊದಲನೆಯದು. ಎರಡನೆಯದು, ಈ ಬಡ ಮಕ್ಕಳು ಇಂಜಿನಿಯರ್, ಡಾಕ್ಟರ್ ಆದಾಗ

ಮಾತ್ರ ಹೊರದೇಶದ ಹುಚ್ಚು ಇಲ್ಲದೇ ನಮ್ಮ ಗ್ರಾಮೀಣ ಪ್ರದೇಶಕ್ಕೆ ಬಂದು ಒಂದು ಸರ್ವೀಸನ್ನು ಮಾಡಿ ಕೆಲಸವನ್ನು ಮಾಡುತ್ತಾರೆ. ಇವತ್ತು ನೂರಕ್ಕೆ 40–50 ಭಾಗ ಡಾಕ್ಟರ್‌ಗಳಿಲ್ಲದೇ ಎಲ್ಲಾ ಖಾಸಗಿ ನರ್ಸಿಂಗ್ ಹೋಂಗೆ ಹೋಗತಕ್ಕಂಥದ್ದು ಕಡು ಬಡವರೂ ಸಹಾ ಭಿಕ್ಷೆ ಬೇಡಿಯಾದರೂ ತನ್ನ ಮಕ್ಕಳುಗಳನ್ನು ಉಳಿಸಿಕೊಳ್ಳಲಿಕ್ಕೆ ತನ್ನ ಖಾಯಿಲೆಯನ್ನು ಸರಿ ಮಾಡಿಕೊಳ್ಳುವುದಕ್ಕೆ ಹೋಗುತ್ತಿರುವಂಥ ಪರಿಸ್ಥಿತಿಯನ್ನು ನೀವು ನೋಡುತ್ತಿದ್ದೀರಿ. ಈ ಸಮಯದಲ್ಲಿ ನಾನು ಇಷ್ಟೇ ಒತ್ತಾಯವನ್ನು ಮಾಡುವಂಥದ್ದು. ಈ ಮುಲಾಜಿನಿಂದ ನೀವು ಹೊರಬರಬೇಕು. ಅದಕ್ಕೆ ಏನು ಬೇಕೋ ಅದನ್ನು ನೀವು ಮಾಡಿ. ಅದು ಸರ್ಕಾರಕ್ಕೆ ಬಿಟ್ಟಿರತಕ್ಕಂಥದ್ದು. ಇದಕ್ಕಾಗಿ ಬೇಕಾದ 65 ಕೋಟಿ ರೂಪಾಯಿಗಳನ್ನು ಈ ಫೀ ಡಿಫರೆನ್ಸ್‌ಗೆ ತುಂಬಬೇಕಾಗಿರುವುದನ್ನು ನಾವು ವ್ಯವಸ್ಥೆ ಮಾಡುತ್ತೇವೆ. ಯಡಿಯೂರಪ್ಪನವರೇ ಎಂದು ನೀವು ಒಂದು ಭರವಸೆಯನ್ನು ಕೊಟ್ಟರೆ ನಾವು ಸಮಾಧಾನದಿಂದ ಆ ವಿದ್ಯಾರ್ಥಿಗಳು ನಾಳೆಯಿಂದ ಅವರು ನೆಮ್ಮದಿಯಿಂದ ಅವರ ತಂದೆ ತಾಯಿಗಳು ಇರಬಹುದು ಎಂದು ಕಾಣುತ್ತದೆ. ಈ ಬಗ್ಗೆ ನಿಮ್ಮ ಸ್ಪಷ್ಟವಾದ ಒಂದು ನಿರ್ಧಾರವನ್ನು ತಾವು ಉತ್ತರ ಕೊಡುವ ಸಮಯದಲ್ಲಿ ತಿಳಿಸಬೇಕು ಎನ್ನುವಂಥ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ ಸ್ವಾಮಿ.

† **ಶ್ರೀ ಮಹಿಮಾ ಜೆ. ಪಟೇಲ್ (ಚನ್ನಗಿರಿ)** : ಮಾನ್ಯ ಅಧ್ಯಕ್ಷರೆ, ಇಷ್ಟು ಹೊತ್ತು ಹಿರಿಯ ಸದಸ್ಯರೆಲ್ಲಾ ಹಲವಾರು ವಿಷಯಗಳ ಬಗ್ಗೆ ನಮಗೆ ಬೆಳಕನ್ನು ಚೆಲ್ಲಿದ್ದಾರೆ. ಅದರೊಳಗೆ ಕೆಲವು ಸದಸ್ಯರು ಕಮ್ಯುನಿಸ್ಟ್ ಹಿನ್ನೆಲೆ ಇರುವಂಥ ಸದಸ್ಯರುಗಳು ಆರ್‌ಎಸ್‌ಎಸ್ ಅಲ್ಲಿ ತರಬೇತಿಯನ್ನು ಪಡೆದಂಥ ಸದಸ್ಯರುಗಳು ಮಾತನಾಡಿ ನಿಜವಾಗಲೂ ಬಹಳ ನಮ್ಮ ಮನಸ್ಸಿಗೆ ಮುಟ್ಟುವ ತರಹ ಮಾತನಾಡಿದ್ದಾರೆ. ಅಂಥ ಕೌಶಲ್ಯವನ್ನು ಮಾತನಾಡುವುದರಲ್ಲಿ ಅವರೆಲ್ಲಾ ಅದೇ ತರಬೇತಿಯನ್ನು ಪಡೆದಿರುತ್ತಾರೆ. ಈಗ ಒಂದು confrontation method ನಲ್ಲಿ ಈ ಸರ್ಕಾರ ಎಲ್ಲಾ ಕಾಲೇಜುಗಳನ್ನು ರಾಷ್ಟ್ರೀಕರಣ ಮಾಡಬೇಕು ಎನ್ನುವಂಥ ಸಲಹೆಯನ್ನು ಕೊಟ್ಟಾಗ ನಿಜವಾಗಲೂ ಹೌದು, ಹೌದು, ಎನ್ನುವ ತರಹ ಇತ್ತು. ಆದರೆ ಸರ್ಕಾರ ಯಾವ ಸ್ಥಿತಿಯಲ್ಲಿದೆ ಎಂದರೆ ಇರುವುದು ಒಂದು ಹರಕು ಕಂಬಳಿ, ದೊಡ್ಡ ಸಂಸಾರ, ಚಳಿ ಇದೆ, ಈ ಕಡೆ ಒಬ್ಬರು ಎಳೆದರೆ ಆ ಕಡೆಯವರು ಚಳಿಯಲ್ಲಿ ಸಾಯಬೇಕು. ಆ ಕಡೆಯವರು ಎಳೆದರೆ ಈ ಕಡೆಯವರು ಚಳಿಯಲ್ಲಿ ಸಾಯಬೇಕು. ಆ ತರಹದ ಪರಿಸ್ಥಿತಿ ಇದೆ. ಹಣಕಾಸಿನ ಪರಿಸ್ಥಿತಿ. ನಾವು ನೀರಾವರಿಗೆ ಎಂದು ಎಳೆದರೆ ಆ ಕಡೆ ನ್ಯಾಯಾರೋ ಸಾಯಬೇಕಾಗುತ್ತದೆ. ಇನ್ನು ಆ ಕಡೆಯವರು ಎಳೆದರೆ ನೀರಾವರಿಯವರು ಸಾಯಬೇಕಾಗುತ್ತದೆ. ಈ ತರಹದ ಪರಿಸ್ಥಿತಿ ಇದ್ದಾಗ ನಾವು ರಾಷ್ಟ್ರೀಕರಣವನ್ನು ಮಾಡಿ ಮೆಡಿಕಲ್ ಕಾಲೇಜುಗಳನ್ನು ಓಡಿಸುವಂಥ ಒಂದು ಕೆಲಸವನ್ನು ಏನಾದರೂ ಸರ್ಕಾರ ತೆಗೆದುಕೊಂಡರೆ ಎನ್‌ಜಿಇಎಫ್ ನಂಥ ಒಂದು ದೊಡ್ಡ ಕಾರ್ಖಾನೆ ಸರ್ಕಾರ ನಡೆಸುತ್ತಾ ತುಂಬಾ ಒಳ್ಳೆಯ ಕಾರ್ಖಾನೆ ಇಲ್ಲದಂತೆ ಮಾಯವಾಗಿದ್ದನ್ನು ನಾವೆಲ್ಲಾ ನೋಡಿದ್ದೇವೆ. ಆ ತರಹ ನಮ್ಮ ಮೆಡಿಕಲ್ ಕಾಲೇಜುಗಳು ಮಾಯವಾಗುವಂಥ ಒಂದು ಸಾಧ್ಯತೆ ಇದೆ. ಏಕೆಂದರೆ ಸರ್ಕಾರದ ಯಾವುದೇ ಒಂದು ಸಂಸ್ಥೆ ಎಂದರೆ ನಮ್ಮದು ಎನ್ನುವ ಭಾವನೆ ಯಾರಿಗೂ ಇಲ್ಲ. ಇದೇ ಸರ್ಕಾರ ಎಂದರೆ ಅದು ಎಲ್ಲೋ ಇದೆ. ಅವರದ್ದು, ಅದು ಹಾಳಾದರೆ ನಮ್ಮದೇನು ಎನ್ನುವ ಭಾವನೆ ಎಲ್ಲರೂ ಇಟ್ಟುಕೊಂಡು ಕೆಲಸವನ್ನು

ಮಾಡುವುದರಿಂದ ಈ ಸಮಸ್ಯೆ ಇದೆ. ಈಗ ಎಷ್ಟು ಯಾವ ಅನುಪಾತದಲ್ಲಿ ಸೀಟುಗಳನ್ನು ಹಂಚಿಕೆ ಮಾಡಬೇಕು ಎನ್ನುವುದನ್ನು ಮಾತುಕತೆ ಮೂಲಕ ಬಗೆಹರಿಸುವುದರ ಬಗ್ಗೆ ನಮ್ಮ ಸರ್ಕಾರದಲ್ಲಿ ಎಲ್ಲರೂ ಕೆಲಸ ಮಾಡುತ್ತಿದ್ದಾರೆ. ಎಷ್ಟು ಯಾವ ಅನುಪಾತ ಎಂದು ಹೇಳಿ ನಾವು ಇದರ ಬಗ್ಗೆಯೇ ಹೆಚ್ಚು ತಲೆಯನ್ನು ಕೆಡಿಸಿಕೊಂಡು ಆ confrontational method ಗೆ ಹೋಗುವುದಕ್ಕಿಂತ non confrontational ಆಗಿ ಇದು ಒಂದು ಹೇಳಿಕೆ ಇದೆ. " When you hit a fork take one" ಎಂದು ಹೇಳುತ್ತಾರೆ. ಯಾವುದೇ ಒಂದು ವೇಗವಾಗಿ ನಾವು ರಸ್ತೆಯಲ್ಲಿ ಹೋಗುತ್ತಿದ್ದಾಗ ಎರಡು ರಸ್ತೆಗಳು ಬಂದವು ಎಂದರೆ ಅಲ್ಲಿ ನಿಂತು ಯೋಚನೆ ಮಾಡುವುದಕ್ಕೆ ಸಮಯ ಇರುವುದಿಲ್ಲ. ಯಾವುದಾದರೂ ಒಂದು ರಸ್ತೆಯನ್ನು ಬೇಗ ತೆಗೆದುಕೊಳ್ಳಬೇಕು. ಈಗ ಆ ತರಹದ We have hit a fork ಎರಡು ರಸ್ತೆಗಳನ್ನು ಬಂದಿದ್ದಾರೆ. ಯಾವುದೋ ಒಂದು ಅನುಪಾತದಲ್ಲಿ ನಾವು ಸೀಟು ಹಂಚಿಕೆಯನ್ನು ಮಾಡಿ ಅದನ್ನು ನಾವು ಏನು ವಿದ್ಯಾರ್ಥಿಗಳೇನಿದ್ದಾರೆ, ಅವರಿಗೆ ಅನುಕೂಲವಾಗುವ ಸ್ಥಿತಿಯನ್ನು ಆ ದಿಕ್ಕಿನಲ್ಲಿ ನಾವು ಹೋಗಬೇಕಾಗಿದೆ. ಇವೆಲ್ಲವನ್ನೂ ಮೀರಿ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ ಪೇಮೆಂಟ್ ಸೀಟು ಕೆಲವು ಒಂದೂವರೆ ಲಕ್ಷದಿಂದ ಮೂರು ಲಕ್ಷ ರೂಪಾಯಿವರೆಗೆ ಕೆಲವು ಖಾಸಗಿ ಕಾಲೇಜುಗಳಲ್ಲಿದೆ. ಅಲ್ಲಿಗೆ ಸರ್ಕಾರದಿಂದ ಆ ಕಾಲೇಜಿಗೆ ಸೀಟುಗಳನ್ನು ಕೊಟ್ಟಾಗ ಎಲ್ಲರೂ ಆ ಸೀಟುಗಳನ್ನು ತೆಗೆದುಕೊಂಡು ವಿದ್ಯಾಭ್ಯಾಸ ಮಡುವುದಕ್ಕಾಗುವುದಿಲ್ಲ. ಬಡ ವಿದ್ಯಾರ್ಥಿಗಳು ಏನು ಮಾಡುತ್ತಾರೆಂದರೆ ಇದು ನಮ್ಮ ಕೈಯಲ್ಲಿ ಆಗುವುದಿಲ್ಲ ಎಂದು ಹೇಳಿ ಸುಮ್ಮನೆ ಇದ್ದುಬಿಡುತ್ತಾರೆ. ಕೆಲವು ಸಾರಿ ಅವರಿಗೆ ಆಮಿಷವನ್ನು ತೋರಿಸಿ ನೀವು ಸೀಟು ತೆಗೆದುಕೊಳ್ಳಬೇಡಿ ಎಂದು ಹೇಳುವಂಥ ಕೆಲವು ಮಿಡಿಯೇಟರ್ಸ್ ಇದ್ದಾರೆ ಎಂದು ನನಗೆ ತಿಳಿದುಬಂದಿದೆ. ಆ ಖಾಸಗಿ ಕಾಲೇಜುಗಳಿಗೆ ಯಾರಿಗೆ ಪೇಮೆಂಟ್ ಸೀಟ್ ಆಗಿದೆ. ಅವರಿಗೆ ಐವತ್ತು ಸಾವಿರವೋ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟುಬಿಡುತ್ತಾರೆ. ಆ ರೀತಿ ಕೊಟ್ಟು ಈ ಮ್ಯಾನೇಜ್‌ಮೆಂಟ್‌ನವರು ಮತ್ತೆ ಅದರ ಬಗ್ಗೆ ಸಿಇಟಿ ಪರೀಕ್ಷೆಯನ್ನು ಮತ್ತೆ ಮಾಡುತ್ತಿಲ್ಲ. ಮ್ಯಾನೇಜ್‌ಮೆಂಟ್‌ನವರೇ ಅದನ್ನು ಹಂಚುವಂತಹ ಕೆಲಸವನ್ನು ಮಾಡುತ್ತಾರೆ. ಅದನ್ನು ಹಂಚುವಂತಹ ಕೆಲಸವನ್ನು ಮಾಡುತ್ತಾ ಅಡನ್ನು ಹಂಚುವಾಗ ಎನ್‌ಆರ್‌ಐನವರಿಗೆ ಹಾಗೂ ಬೇರೆ ಬೇರೆ ದೇಶದವರಿಗೆ ಅದು ಡಾಲರ್ ಲೆಕ್ಕದಲ್ಲಿ ಬಹಳಷ್ಟು ಹೆಚ್ಚಿನ ಹಣಕ್ಕೆ ಮಾರಿಕೊಳ್ಳುವಂತಹ ಒಂದು ರ್‍ಯಾಕೆಟ್ ಕೂಡ ಇದೆ ಎಂದು ತಿಳಿದು ಬಂದಿದೆ. ಮುಂದೆ ಸರ್ಕಾರ ಯಾವುದೇ ಒಂದು ಅನುಪಾತದಲ್ಲಿ ಸೀಟು ಹಂಚಿಕೆ ಅದರೂ ಕೂಡ ಅದು ಖಾಸಗಿ ಕಾಲೇಜುಗಳಿಗೆ ಏನು ಪೇಮೆಂಟ್ ಸೀಟು ಎಂದು ಕೊಟ್ಟಿರುತ್ತಾರೆ? ಅವನು ಯಾರೂ ತೆಗೆದುಕೊಳ್ಳದಿದ್ದರೆ ಸರ್ಕಾರ ಮತ್ತೆ ಸಿಇಟಿ ಮಾಡಿ ಅಥವಾ ಸಿಇಟಿ ರಾಂಕಿಂಗ್‌ನವರು ಯಾರು ಹಿಂದಿನವರು ಇರುತ್ತಾರೆ ಅವರಿಗೆ ಅಲಾಟ್ ಮೆಂಟ್ ಮಾಡುವಂತಹ ಒಂದು ಸಿಸ್ಟಂ ಬರಬೇಕು ಎಂದು ಸರ್ಕಾರಕ್ಕೆ ಸಲಹೆ ಕೊಟ್ಟು ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದನೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† **ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)** : ಮಾನ್ಯ ಅಧ್ಯಕ್ಷರೆ, ಇವತ್ತು ಸಿಇಟಿ ವಿಚಾರವಾಗಿ ರಾಜ್ಯದಲ್ಲಿ ಬಹಳ ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳು ಮತ್ತು ಇತರರಲ್ಲಿ ಕಳವಳ

ಉಂಟು ಮಾಡಿದೆ. ಮತ್ತು ಈ ಒಂದು ಸೂಕ್ಷ್ಮವಾದಂತಹ ವಿಚಾರದ ಬಗ್ಗೆ ಸರ್ಕಾರ ಯಾವ ರೀತಿಯಾಗಿ ಕ್ರಮ ತೆಗೆದುಕೊಳ್ಳುತ್ತದೆ ಎನ್ನತಕ್ಕ ರೀತಿಯಲ್ಲಿ ಜನರು ಕೂಡ ನಿರೀಕ್ಷೆ ಮಾಡುತ್ತಿದ್ದಾರೆ. ಈ ದಿನ ಸದನದಲ್ಲಿ ಬಹಳಷ್ಟು ವಿಚಾರಗಳು ಪ್ರಸ್ತಾಪ ಆಗಿದೆ. ಮಾನ್ಯ ಯಡಿಯೂರಪ್ಪನವರಾಗಲೀ, ಮಾನ್ಯ ವಿಶ್ವೇಶ್ವರ ಹೆಗಡೆಯವರಾಗಲೀ, ಕಾರಜೋಳ್ ಅವರೇ ಆಗಲಿ ನಮ್ಮ ಶ್ರೀರಾಮರೆಡ್ಡಿಯವರು ಮತ್ತು ಜಯಪ್ರಕಾಶ್ ಹೆಗ್ಡೆಯವರು ಮತ್ತು ವಿಶೇಷವಾಗಿ ಮಾನ್ಯ ರಮೇಶ್ ಕುಮಾರ್ ಅವರು ಮತ್ತು ಮಹಿಮಾ ಪಟೇಲ್ ಅವರು ಮತ್ತು ಬಹಳಷ್ಟು ಜನ ಈ ವಿಚಾರವಾಗಿ ಮಾತನಾಡಿದ್ದಾರೆ, ಬೆಳಕು ಚೆಲ್ಲಿದ್ದಾರೆ. ಮಾನ್ಯ ಮಾಧುಸ್ವಾಮಿಯವರು ಇಲ್ಲ, ಅವರೂ ಸಹ ಹೇಳಿದ್ದಾರೆ. ಒಂದು ವಿಚಾರ ಎಂದರೆ ಏಕೆ ನಾನು ನಾಳೆ ಸಭೆ ಕರೆದಿದ್ದೇನೆ ಎಂದರೆ ಕೇವಲ ಸರ್ಕಾರ ನಡೆಸತಕ್ಕವರಿಂದಲೇ ನಿರ್ಣಯ ಆಗಬಾರದು. ಈ ಒಂದು ನಿರ್ಣಯ ಆಗುವಾಗ ಸದನ ನಡೆಯುತ್ತಿದೆ, ಸದನದಲ್ಲಿ ಒಮ್ಮತದ ಅಭಿಪ್ರಾಯ ಮೂಡಿ ಅದರ ಬಗ್ಗೆ ಯಾವ ರೀತಿಯಾದ ತೀರ್ಮಾನಕ್ಕೆ ನಾವು ಬರುತ್ತೇವೆ, ಅದರ ಮೇಲೆ ಸರ್ಕಾರ ಬದ್ಧವಾಗಿರುತ್ತದೆ. ಇವತ್ತು ಪದೇ ಪದೇ ನಿಮಗೆ ಹೇಳಬೇಕಾಗಿದೆ. ನಾನು ಮಧ್ಯೆ ಪ್ರವೇಶಿಸಿ ಹೇಳಿದ್ದೇನೆ. ಡಾ: ಮಾಲಕರೆಡ್ಡಿಯವರು 75:25 ಎಂದೇನು ಸಂಪುಟದ ಉಪ ಸಮಿತಿಯ ಅಧ್ಯಕ್ಷರಾಗಿ ವರದಿ ಸಲ್ಲಿಸಿದರು. ಈ ಸರ್ಕಾರ ಏನೂ ಕೂಡ ಸ್ವಲ್ಪಮಟ್ಟಿಗೂ ಕೂಡ ಸಹ ವಿಚಾರ ಮಾಡಲಾರದೇ ಆ ವರದಿಗೆ ನಾವು ಒಪ್ಪಿಗೆ ಕೊಟ್ಟಿದ್ದೇವೆ. ಫೀಸ್ ಸ್ಟ್ರಕ್ಚರ್ ಬಗ್ಗೆ ಮುರುಗೋಡು ಸಮಿತಿಯ ವರದಿಯಿಂದಾಗಿ ಇವತ್ತು ಕೊನೆಯ ದಿನಾಂಕ ಇತ್ತು. ಮತ್ತೆ ಹೈಕೋರ್ಟ್ ಮುಂದೆ ಹೋದಾಗ ನಮಗೆ ಸಮಯಾ ಕೂಡ ಕೊಟ್ಟರು. ಅಲ್ಲಿ ಎಸ್‌ಸಿ ಎಸ್‌ಟಿ ಗ್ರೂಪ್ ಬಿ. ಗೆ ಏನೊಂದು ತೊಂದರೆ ಆಗುತ್ತಿತ್ತು, ಆ ವಿಚಾರವನ್ನು ಮಾನ್ಯ ರಮೇಶ್ ಕುಮಾರ್ ಅವರು ಹೇಳಿದ್ದಾರೆ. ಅಲ್ಲಿ ಸರ್ಕಾರದ ವತಿಯಿಂದ ಕೂಡ ನಾವು ಹಣವನ್ನು ಕೊಡಬೇಕೆಂದು ಹೇಳುವಂತಹ ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ಒಟ್ಟಾರೆ ಅದಕ್ಕೆ 300,400 ಕೋಟಿ ರೂಪಾಯಿ ವರ್ಷಕ್ಕೆ ಬರುತ್ತದೆ. ಯಾವಾಗಲೂ ಕೂಡ ಸರ್ಕಾರ 75:25 ರ ಬಗ್ಗೆ ಹೈಕೋರ್ಟ್‌ಗೆ ಹೋಗಿದೆ, ಸುಪ್ರೀಂ ಕೋರ್ಟ್‌ನಲ್ಲಿ ಹೋಗಿದೆ. ಎರಡು ಸಲ ನಾವು ಮ್ಯಾನೇಜ್‌ಮೆಂಟಿನವರ ಜೊತೆ ಮಾತನಾಡಿದ್ದೇವೆ. ಶಿಕ್ಷಣ ಸಂಸ್ಥೆ ಪ್ರಾರಂಭವಾಗಿ ಸಾಕಷ್ಟು ಅನುಕೂಲಗಳು ತಮಗೆ ಆಗಿದೆ. ಸರ್ಕಾರ ಇಂತಹ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಬಿದ್ದಾಗ ಸರ್ಕಾರಕ್ಕೆ ಸಹಕಾರ ಮಾಡಬೇಕೆಂದು ಹೇಳಿ ಅಧಿಕಾರಿಗಳ ಜೊತೆ ಸಮಾಲೋಚನೆ ಒಂದು ಸಲ ಮಾಡಿದ್ದೇವೆ. ಯಾರ್‍ಯಾರು ಪ್ರಮುಖರು ಇದ್ದಾರೆ, ಯಾರು ಹಿರಿಯರು ಇದ್ದಾರೆ, ಮುಖ್ಯಸ್ಥರು ಒಬ್ಬೊಬ್ಬರನ್ನು ಕರೆಸಿ ಮಾತನಾಡಿದ್ದೇವೆ. ಇವತ್ತು ಸುಪ್ರೀಂ ಕೋರ್ಟಿನ ತೀರ್ಪಿನಲ್ಲಿ ನಾವೇನೂ ಕೂಡ ಅದರ ಬಗ್ಗೆ ಚರ್ಚೆ ಮಾಡತಕ್ಕದ್ದಲ್ಲ. ನಾವು ಸಿಂಧ್ಯಾ ಅವರು, ಪ್ರಕಾಶ್ ಅವರು ಕೂಡ ದೆಹಲಿಯಲ್ಲಿದ್ದಾಗಲೂ ಕೂಡ ಇದರ ಬಗ್ಗೆ ಹೆಚ್ಚಿನ ಚರ್ಚೆಯನ್ನು ಮಾಡಿದ್ದೇವೆ. ನಿಮಗೆ ಹೇಳಿದ ಹಾಗೆ ಇದಕ್ಕೆ ಒಂದು ಪರ್ಮನೆಂಟ್ ಪರಿಹಾರ ಸಿಗಬೇಕಾದರೆ ಸೆಂಟ್ರಲ್ ಲೆಜಿಸ್ಲೇಷನ್ ತುಂಬಾ ಇಂಪಾರ್ಟೆಂಟ್. ಅದರ ಬಗ್ಗೆ ಸಹ ನಾವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದೇವೆ. ಇವತ್ತು ನಾವು ಏಕೆ ಕರೆಸುತ್ತಿದ್ದೇವೆಂದರೆ ಜವಾಬ್ದಾರಿಯಿಂದ ನಾವು ಹಿಂದೆ ಸರಿಯುವುದಕ್ಕೆ ಅಲ್ಲ. ಆ ಒಂದು ಸಮಯ ಬರುತ್ತದೆ. ಒಂದು ಐತಿಹಾಸಿಕ ನಿರ್ಣಯ ಬರುತ್ತದೆ. ಮಾನ್ಯ ರಮೇಶ್ ಕುಮಾರ್ ಒಳ್ಳೆಯ ನಿರ್ಣಯ ತೆಗೆದುಕೊಂಡರೆ ಅದು ದಾಖಲೆಗೆ ಹೋಗುತ್ತದೆ ಎಂದು ಹೇಳಿದರು. ಇವತ್ತು

ನಮಗೇನು ಎಂದರೆ ನೀವೂ ಕೂಡ ಸರ್ಕಾರದ ನಿರ್ಣಯದಲ್ಲಿ ಭಾಗಿಯಾಗಿ ನಿಮ್ಮ ಸಲಹೆ ಸೂಚನೆ ಮೇರೆಗೆ ಅಲ್ಲೇ ನಾವು ಒಂದು ವಿಚಾರ ವಿನಿಮಯ ಮಾಡಿ ಒಂದು ಹಂತಕ್ಕೆ ಬರಬೇಕು ಎನ್ನುತಕ್ಕ ದೃಷ್ಟಿಯಿಂದ ನಾಳೆ ಎಲ್ಲಾ ವಿರೋಧ ಪಕ್ಷದ ನಾಯಕರು ಮತ್ತು ಕೆಲವು ಹಿರಿಯರು ಹಾಗೂ ಫ್ಲೋರ್ ಲೀಡರ್ಸ್‌ಗಳ ಸಭೆಯನ್ನು 7 ಗಂಟೆಗೆ ಕರೆದಿದ್ದೇವೆ. ಮುಂಜಾನೆ ಇತ್ತು, ಆದರೆ ವಿಧಾನಪರಿಷತ್ತಿನಲ್ಲಿ 10–15ಕ್ಕೆ ಮಾನ್ಯ ರಾಜ್ಯಪಾಲರು ಬರುತ್ತಿದ್ದಾರೆ ಎನ್ನುವ ಕಾರಣದಿಂದ ಸಂಜೆಗೆ ಸಭೆಯನ್ನು ಮುಂದೂಡಿದ್ದೇವೆ. ನಾಳೆ ಮಾತನಾಡುತ್ತೇನೆ. ಈಗಲೂ ಕೂಡ ಮಾನ್ಯ ಸಿಂಧ್ಯಾ ಅವರು ಮತ್ತು ಉಪ ಸಮಿತಿ ಕೂಡ ಸಭೆ ನಡೆಸಿದೆ. ತದ ನಂತರ ಕೂಡ ಅವರು ಬಹಳಷ್ಟು ಹಠ ಹಿಡಿದರು. ಆವಾಗ ತಾವೇನು ಎಂದಿರಿ, ನಾವು ಅಷ್ಟು ಜನರ ಹತ್ತಿರ ಮಾತನಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿ ಒಂದು ಸ್ಮಾಲ್ ಕಮಿಟಿಯನ್ನು ರಚನೆ ಮಾಡಿದ್ದೇವೆ. ನಿನ್ನೆ ಪ್ರಿನ್ಸಿಪಲ್ ಸೆಕ್ರೆಟರಿಯವರು ದೀರ್ಘವಾಗಿ ಚರ್ಚೆ ಮಾಡಿದ್ದಾರೆ. ಶಿಕ್ಷಣ ಸಚಿವರೂ ಕೂಡ ಚರ್ಚೆ ಮಾಡಿದ್ದಾರೆ. ನಿನ್ನೆ ಎಬಿವಿಪಿಯ 30 ಸಾವಿರಕ್ಕೂ ಹೆಚ್ಚು ಜನರು ಬಂದಿದ್ದರು. ಅಲ್ಲಿ ಕೂಡ ನಾನು ಮಾನ್ಯ ಸಿಂಧ್ಯಾರವರನ್ನು ಕಳುಹಿಸಿದ್ದೆ. ಮಾನ್ಯ ಸಿಂಧ್ಯಾರವರೂ ಸಹ ಸರ್ಕಾರ ನಿಮ್ಮ ಪರವಾಗಿದೆ ಎಂದು ಹೇಳಿದರು. ಯಾವಾಗಲೂ ಕೂಡ ಈ ಸರ್ಕಾರದ ಮ್ಯಾನೇಜ್‌ಮೆಂಟಿಗೆ ಮಣಿದು, ಯಾರ ಕೈಗೊಂಬೆಯಾಗಿ ಕೂಡ ಕೆಲಸ ಮಾಡತಕ್ಕದ್ದು ಇಲ್ಲ. ರಾಜ್ಯದ ಮುಖ್ಯ ಮಂತ್ರಿಯಾಗಿ ಈ ಮಾತನ್ನು ಸ್ಪಷ್ಟವಾಗಿ ನಾನು ಹೇಳುತ್ತಿದ್ದೇನೆ ಇವತ್ತು ನಿರ್ದಾಕ್ಷಿಣ್ಯವಾಗಿ ರಾಜ್ಯದ ಬಡಜನರ, ಮಕ್ಕಳ ಹಿತದೃಷ್ಟಿಯಿಂದ ಸರ್ಕಾರಕ್ಕೆ ಕಳಕಳಿ ಇದೆ. ನಿಮಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ಈ ಸರ್ಕಾರಕ್ಕೂ ಕೂಡ ಇದೆ? ಆ ಒಂದು ನಿರ್ಣಯದಲ್ಲಿ ನಾವು ನೀವು ಇಬ್ಬರೂ ಭಾಗಿ ಆಗೋಣ. ಮತ್ತು ಸದನದ ಎಲ್ಲಾ ಸದಸ್ಯರಿಗೆ ಕೂಡ ಒಂದು ಕ್ರೆಡಿಟ್ ಬರುತ್ತದೆ. ನಾಳೆ ಸಮಗ್ರವಾದ ಒಂದು ಚರ್ಚೆ ಆಗುತ್ತದೆ. ಆ ಒಂದು ಚರ್ಚೆ ಯಲ್ಲಿ ಏನೇನು ಮಾಡಬೇಕೋ ಮಾಡೋಣ. ನಾವು ಒಂದುಫಾರ್ಮುಲಾ ಕಂಡು ಹಿಡಿಯುತ್ತೇವೆ. ಅದರ ಆಧಾರದ ಮೇಲೆ ರಾಜ್ಯದಲ್ಲಿರತಕ್ಕ ಚಿಕ್ಕಟ್ಟನ್ನು ಪ್ರಾಮಾಣಿಕವಾಗಿ ಇತ್ಯರ್ಥ ಮಾಡತಕ್ಕ ಪ್ರಯತ್ನ ಮಾಡುತ್ತೇವೆ. ತಾವು ಸಾಕಷ್ಟು ಬೆಳಕು ಚೆಲ್ಲಿದ್ದೀರಿ. ಸಾಕಷ್ಟು ವಿಷಯಗಳು ಕೂಡ ಸರ್ಕಾರದ ಗಮನಕ್ಕೆ ಬಂದಿದೆ. ಅದಕ್ಕೆ ನಾಳೆ ಸಭೆ ಆದ ನಂತರ ಅದರ ಬಗ್ಗೆ ಹೆಚ್ಚಿನ ವಿವರಕ್ಕೆ ಹೋಗಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ ವಿರೋಧ ಪಕ್ಷದ ನಾಯಕರು : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಇಷ್ಟೇ ಹೇಳುವುದು. ನಿಮ್ಮ ಕಳಕಳಿ ಬಗ್ಗೆ ನಾವ್ಯಾರೂ ಅನುಮಾನ ಪಡುತ್ತಿಲ್ಲ. ಪ್ರಶ್ನೆ ಇರುವಂಥದ್ದು ಕಾಣದ ಕೈಗಳು ಅಷ್ಟು ವರ್ಷಗಳಿಂದ, ಈ ಕಾಲೇಜುಗಳನ್ನು ನಡೆಸುತ್ತಿರುವಂತಹ ಪ್ರೈವೇಟ್ ಮ್ಯಾನೇಜ್‌ಮೆಂಟಿನ ಪ್ರಮುಖರು, ಪ್ರಭಾವಿ ವ್ಯಕ್ತಿಗಳು ಇಷ್ಟೊಂದು ಬಹಿರಂಗವಾಗಿ, ಹತ್ತಾರು ಸಾವಿರ ಜನ ಯುವಕರು ಈ ನಾಡಿನ ಜನ ಏನು ಅಂದು ಕೊಳ್ಳಬಹುದು ಈ ರೀತಿಯ ಬಹಿರಂಗ ಹೇಳಿಕೆಯಿಂದ ಎಂದು ಹಿಂದೆ ಮುಂದೆ ನೋಡದೆ ಮಾತನಾಡುತ್ತಿರುವುದನ್ನು ತಾವು ನೋಡುತ್ತಿದ್ದೀರಿ. ಈಗಾಗಲೇ ಅಡ್ಮಿಶನ್ ಪ್ರಾರಂಭ ಆಗಬಹುದು ಎಂದುಕೊಂಡು, ಎಲ್ಲಾ ಸಿಇಟಿಯದ್ದು ಮುಗಿದು ಪ್ರಾರಂಭ ಆದಂತಹ ಕಾಲದಲ್ಲಿ ನಿಮಗೇ ಗೊತ್ತಿರುವ ಹಾಗೆ ಸುಮಾರು 75–80 ಜನ ಯುವಕರು ನಮಗೆ ಅಡ್ಮಿಷನ್ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ,

ನಮಗೆ ಈ ಫೀಸ್ ಕಟ್ಟುವುದಕ್ಕೆ ಆಗುವುದಿಲ್ಲ ಎಂದು ಹೇಳಿ ಹೊರಗೆ ಬಂದಿರುವುದನ್ನು ತಾವು ನೋಡಿದ್ದೀರಿ. ಇದೆಲ್ಲಾ ನಿಮಗೆ ಗೊತ್ತಿರುವಂತಹ ಸಂಗತಿ. ಇದರ ಆಧಾರದ ಮೇಲೆ ಈ ರೀತಿ ವ್ಯಕ್ತಿಗಳಿಗೆ ಓಬಿಸಿ, ಎಸ್‌ಸಿ:ಎಸ್‌ಟಿ, ಮೆರಿಟ್ ಸ್ಟೂಡೆಂಟ್ಸ್‌ಗೆ ನಾವೇನಾದರೂ ಸರ್ಕಾರ ತುಂಬಿ ಅವರ ಶಿಕ್ಷಣಕ್ಕೆ ತೊಂದರೆ ಮಾಡುವುದಿಲ್ಲ ಎನ್ನುವಂತಹ ಮಾತನು ತಾವು ಹೇಳಿದ್ದೀರಿ. ನಾಳೆ ಮೀಟಿಂಗ್‌ನಲ್ಲಿ ಮ್ಯಾಕೇಜ್‌ಮೆಂಟ್‌ನವರ ಹತ್ತಿರ ನೀವು ವೈಯಕ್ತಿಕವಾಗಿ ಅವರದ್ದು ಒಳ್ಳೆಯದೋ, ಕೆಟ್ಟದ್ದೋ, ಬೇಕೋ ಬೇಡ ಎಂದು ಎಲ್ಲವೂ ನಿಮಗೆ ಗೊತ್ತಿರುತ್ತದೆ. ನೀವು ಏನು ಪ್ರಭಾವ ಬೀರುತ್ತೀರೋ ಮಾಡಿ. ಸರಿ ಮಾಡಿ ಎಂದು ಕಳೆದ ಒಂದೂವರೆ ತಿಂಗಳಿಂದ ನಾವು ಕಾದೆವು. ಆದರೆ ಈ ಫಲಶ್ರುತಿ ಏನೂ ಕಾಣದೇ ವಿದ್ಯಾರ್ಥಿ ವಿದ್ಯಾರ್ಥಿನಿಯರು ಮತ್ತು ಅವರ ಪೇರೆಂಟ್ಸ್ ಕಣ್ಣೀರು ಇಟ್ಟು ಅವರ ಆಕ್ರಂದನದ ಗೋಳನ್ನು ತಾವು ನೋಡುತ್ತಿದ್ದೀರಿ. ಈ ಟೈಮಿನಲ್ಲಿ ಮಾರ್ಗ ಏನು? ಈ ವ್ಯತ್ಯಾಸವನ್ನು ತುಂಬುವುದಕ್ಕೆ ಸರ್ಕಾರ ಮುಂದೆ ಬರಬೇಕು. ಮ್ಯಾನೇಜ್‌ಮೆಂಟಿಗೆ ಬರೆ ಎಳೆಯುತ್ತೇವೆ ನಾವು ಹೇಳಿದ ಹಾಗೆ ಕೇಳದಿದ್ದರೆ ಎಂದು ಬಿಗಿ ಮಾಡಲೇಬೇಕು. ಇದು ಮೀಟಿಂಗ್ ಆಗಿ ಬಗೆಹರಿಯುತ್ತದೆ ಎಂದು ನಾನು ಅಂದುಕೊಂಡಿಲ್ಲ. ಇವತ್ತು ನಾನು ಒತ್ತಾಯ ಮಾಡುವುದು ಇಷ್ಟೆ. ದಯಮಾಡಿ ಈ ವ್ಯತ್ಯಾಸದ ಹಣ ಸುಮಾರು 65 ಕೋಟಿ ರೂಪಾಯಿ ಆಗುತ್ತದೆ, ಅದನ್ನು ನೀವು ಭರಿಸುತ್ತೀರಾ? ಆ ಎಸ್‌ಸಿ, ಎಸ್‌ಟಿ, ಓಟಿಸಿ ಮೆರಿಟ ಸ್ಟೂಡೆಂಟ್ಸ್‌ಗಳ ನೆರವಿಗೆ ನೀವು ಬರುತ್ತೀರಾ? ಅವರು ನೆಮ್ಮದಿಯಿಂದ ಓದುವುದಕ್ಕೆ, ಮುಂದಿನ ಶಿಕ್ಷಣ ಮುಂದುವರಿಸುವುದಕ್ಕೆ ಅವಕಾಶ ಮಾಡಿಕೊಡಿ. ಇದೇ ಪ್ರಶ್ನೆ ಇರುಂತಹದು. ಸುಪ್ರೀಂ ಕೋರ್ಟಿನ ತೀರ್ಪಿನ ಬಗ್ಗೆ ನಾನೇನೂ ಚರ್ಚೆ ಮಾಡುವುದಿಲ್ಲ. ಅದು ತೀರ್ಮಾನ ಆಗಿದೆ. ವಾದ ವಿವಾದ ಏನಾಯಿತು? ಸುಪ್ರೀಂ ಕೋರ್ಟಿಗೆ ಏಕೆ ಹೋದಿರಿ? ಸುಪ್ರೀಂ ಕೋರ್ಟಿಗೆ ಹೋದದ್ದು ಸರಿಯೋ ತಪ್ಪೋ.? ಇದೆಲ್ಲವೂ ನಮಗೆ ಅರ್ಥವಾಗದಿರುವಂತಹ ಸಂಗತಿ. ಇಂತಹ ಒಂದು ಸಂದಿಗ್ಧವಾದ ಸಂದರ್ಭದಲ್ಲಿ ನಮ್ಮ ರಾಜ್ಯದ ಯುವಕರು, ಯುವತಿಯರು, ವಿದ್ಯಾರ್ಥಿಗಳು, ಅವರ ಪೇರೆಂಟ್ಸ್ ಕಣ್ಣೀರು ಹಾಕುತ್ತಿರುವಂತಹ ಸಂದರ್ಭದಲ್ಲಿ ಎಲ್ಲೋ ಒಂದು ಕಡೆ ಈ ಸರ್ಕಾರ ಮ್ಯಾನೇಜ್‌ಮೆಂಟ್ ಜೊತೆಗೆ ಕೈಜೋಡಿಸಿಕೊಂಡು ನಾಟಕೀಯವಾಗಿ ನಾವೇನೋ ಮಾಡುತ್ತೇವೆ ಎಂದು ಮಾಡುತ್ತಿರುವಂತಹ ಭಾವನೆ ಬಂದಿರುವುದರಿಂದ ಇದನ್ನು ನಾವು ಪ್ರತಿಭಟನೆ ಮಾಡಿ ವಾಕೌಟ್ ಮಾಡುತ್ತೇವೆ. ದಯಮಾಡಿ ನೀವು 65 ಕೋಟಿ ರೂಪಾಯಿ ತೆಗೆದು ಇಟ್ಟು ಅವರನ್ನು ಉಳಿಸುತ್ತೇವೆ ಎನ್ನುವ ವಿಚಾರ ಮಾಡಬೇಕು ಎಂದು ಹೇಳುತ್ತೇನೆ.

(ಗೊಂದಲ)

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರುಗಳು ವಾಕೌಟ್ ಮಾಡಿದರು)

ಮಾನ್ಯ ಸದಸ್ಯರು : ಇದು ಒಳ್ಳೆಯದಲ್ಲ.

ಅಧ್ಯಕ್ಷರು : ಸದನವನ್ನು ನಾಳೆ 12.00 ಗಂಟೆವರೆಗೆ ಮುಂದೂಡಲಾಗಿದೆ.

(ಸದನವು ಸಂಜೆ 6.10ಕ್ಕೆ ಮುಂದೂಡಲ್ಪಟ್ಟು ಮತ್ತೆ ದಿನಾಂಕ 22.7.04 ರಂದು ಮಧ್ಯಾಹ್ನ 12.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)